# 40. ಕರ್ನಾಟಕದ ಏಳಿಗೆಗೆ ಜೈನ ಧರ್ಮದ ಕೊಡುಗೆ

**(ಜೈನಧರ್ಮವು ಧಾರ್ಮಿಕ ತಳಹದಿಯ ಮೇಲೆ ಕರ್ನಾಟಕದಲ್ಲಿ ಸಮಾಜ ರಚನೆ ಮಾಡಿ, ಕರ್ನಾಟಕದ ಧವಳ ಕೀರ್ತಿಗೆ ಕಾರಣವಾಗಿ, ಈ ಧರ್ಮವು ಕರ್ನಾಟಕದ ಸರ್ವತೋಮುಖವಾದ ಏಳಿಗೆಗೆ ನೀಡಿರುವ ಕೊಡುಗೆಯನ್ನು ಸರಳ ಸುಂದರವಾಗಿ ಈ ಲೇಖನದಲ್ಲಿ ಚಿತ್ರಿಸಲಾಗಿದೆ.)**

ವಿಶ್ವದ ಸಕಲ ಜೀವರಾಶಿಗೆ ಹಿತವನ್ನು ಬಯಸಿ, ಅವಕ್ಕೆ ನಿತ್ಯಸುಖದ ಮಾರ್ಗೋಪಾಯವನ್ನು ಬೋಧಿಸುವ ಜೈನಧರ್ಮವು ಅಹಿಂಸೆಯ ಭದ್ರವಾದ ಬುನಾದಿಯ ಮೇಲೆ ರೂಪಿತವಾಗಿ ಅನಾದಿಯಿಂದಲೂ ಬೆಳಗಿಬಾಳುತ್ತ ಬಂದಿದೆ. ಜಿನರಿಂದ ನಿರೂಪಿಸಲ್ಪಟ್ಟ ಈ ಧರ್ಮವು ಒಂದು ಕಾಲಕ್ಕೆ ಜನಸಾಮಾನ್ಯರ ಧರ್ಮವಾಗಿ ಉನ್ನತ ಸ್ಥಿತಿಯಲ್ಲಿದ್ದು ಘನತೆವೆತ್ತ ಧರ್ಮವಾಗಿತ್ತು. ಕನ್ನಡ ನಾಡು ಜೈನ ಸಂಸ್ಕೃತಿಯ ಧರ್ಮದ ಬೀಡಾಗಿ ಅನಾದಿಯಿಂದಲೂ ಉಳಿದು ಬಂದಿದೆ. ಕನ್ನಡ ನಾಡು ಜೈನ ಸಂಸ್ಕೃತಿಯ ಧರ್ಮದ ಬೀಡಾಯಿತು. ಕನ್ನಡ ನುಡಿ ಜೈನ ವಾಙ್ಮಯದ ತವರೂರಾಯಿತು. ಕರ್ನಾಟಕದ ಅನೇಕ ರಾಜರು. ರಾಜಮನೆತನಗಳು. ಸಾಮಂತರಾಜರು, ಕೋಶಾಧಿಕಾರಿಗಳು, ಮಹಾಮಂತ್ರಿಗಳು, ದಂಡನಾಯಕರು "ಜೈನಧರ್ಮವು ಸಾರುವ ಉದಾತ್ತ ತತ್ತ್ವ, ಧ್ಯೇಯಗಳನ್ನು ಪಾಲಿಸಿದರೆ ಪತಿತಪಾವನನಾಗಬಲ್ಲ ಜೀವ ಜೀವನ್ಮುಕ್ತನಾಗಬಲ್ಲ, ನರ ನಾರಾಯಣನಾಗಬಲ್ಲ, ಬದ್ಧನು ಸಿದ್ಧನಾಗಬಲ್ಲ" ಎಂಬ ವಿಚಾರಗಳಿಗೆ ಮಾರುಹೋಗಿ ತಲೆಬಾಗಿ ಜೈನಧರ್ಮವನ್ನು ಶಿರೋಧಾರಣ ಮಾಡಿ ಅನುಸರಿಸಲಾರಂಭಿಸಿದರು.

ಜೈನಧರ್ಮವು ಕನ್ನಡ ನಾಡಿನಲ್ಲಿ ಪ್ರಾಚೀನ ಕಾಲದಿಂದಲೂ ಇಂದಿನವರೆಗೂ ಕನ್ನಡ ನಾಡಿನ ವಿಸ್ತಾರ ಕನ್ನಡ ನುಡಿಯ ಸಂಸ್ಕಾರ, ಕನ್ನಡ ಸಾಹಿತ್ಯೋದ್ಧಾರ, ಕನ್ನಡ ಶಿಲ್ಪಕಲೆಯ ಸಾಕಾರ, ಕನ್ನಡ ಸಂಗೀತ ನೃತ್ಯದ ಝೇಂಕಾರವಾಗಿ ಕನ್ನಡ ನಾಡಿನ ಸರ್ವತೋಮುಖ ಏಳಿಗೆಗಾಗಿ ಜೈನರು ಬಹುವಿಧವಾಗಿ ಶ್ರಮಿಸಿದ್ದಾರೆ. ರಾಷ್ಟ್ರಕೂಟರು, ಗಂಗರಸರು, ಹೊಯ್ಸಳರು, ಚಾಲುಕ್ಯರು ಮುಂತಾದ ರಾಜಮನೆತನಗಳು ಕರ್ನಾಟಕದ ಆಧಾರಸ್ತಂಭಗಳು. ಆ ಕಾಲದಲ್ಲಿ ಧರ್ಮ, ಸಾಹಿತ್ಯ, ಕಲೆ,

ಸಂಸ್ಕೃತಿಗಳು ಏಳಿಗೆ ಹೊಂದಿದುವು. ಜೈನ ಧರ್ಮವು ಧಾರ್ಮಿಕ ತಳಹದಿಯ ಮೇಲೆ ಕನ್ನಡ ನಾಡಿನಲ್ಲಿ ಸಮಾಜರಚನೆ ಮಾಡಿ ರಾಜಕೀಯವಾಗಿ, ನೈತಿಕವಾಗಿ, ಆರ್ಥಿಕವಾಗಿ ಕರ್ನಾಟಕದ ಜನಜೀವನಕ್ಕೆ ಒಂದು ಮೆರುಗುಕೊಟ್ಟು ಧವಲಕೀರ್ತಿಗೆ ಕಾರಣವಾಯಿತು.

ಶ್ರವಣಬೆಳಗೊಳ, ಪುಲಿಗೆರೆ, ಕೊಪ್ಪಳ, ಬ್ರಹ್ಮಪುರಿ, ಬಳ್ಳಿಗಾವೆ, ತಾಳಗುಂದ, ಬನವಾಸಿ, ಐಹೊಳೆ, ಹುಂಚ, ಕಾರ್ಕಳ, ಮೂಡಬಿದ್ರೆ, ಗೇರುಸೊಪ್ಪೆ ಮುಂತಾದ ಕ್ಷೇತ್ರಗಳಲ್ಲಿ ಶಿಕ್ಷಣ ಮತ್ತು ವಿದ್ಯಾಕೇಂದ್ರಗಳಿದ್ದವು. ಮೊದಲಿನಿಂದಲೂ ಧರ್ಮಪ್ರಸಾರದೊಂದಿಗೆ ಸಾಹಿತ್ಯ ಸೇವೆಯೂ ಕವಿಗಳು, ವಿದ್ವಾಂಸರು ಮಹಾಕಾವ್ಯಗಳನ್ನು ರಚಿಸಿದರು.

ರಾಷ್ಟ್ರಕೂಟ ರಾಜನಾದ ನೃಪತುಂಗನು ಕವಿ ರಾಜಮಾರ್ಗವನ್ನು ಬರೆದು ಅಮರನಾಗಿದ್ದಾನೆ. ಅದರಲ್ಲಿ ಕನ್ನಡ ನಾಡಿನ ವಿಸ್ತಾರ ಮತ್ತು ಕನ್ನಡಿಗರ ಹಿರಿಮೆಗಳು ವ್ಯಕ್ತವಾಗುತ್ತವೆ. ಕನ್ನಡ ನಾಡು ಕಾವೇರಿಯಿಂದ ಗೋದಾವರಿಯವರೆಗೆ ವಿಸ್ತರಿಸಿತ್ತೆಂದೂ ಕನ್ನಡಿಗರು 'ಕುರಿತೋದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್' ಎಂದೂ ಸಾರಿದ್ದಾನೆ. ಈ ಗ್ರಂಥವು ಕನ್ನಡದ ಮೊದಲಿನ ಗ್ರಂಥ. ನಂತರ ಶಿವಕೋಟ್ಯಾಚಾರ್ಯನ ವಡ್ಡಾರಾಧನೆ ಪ್ರೌಢಗದ್ಯ ಸಾಹಿತ್ಯವಾಗಿದೆ. ಕನ್ನಡದ ಆದಿಕವಿ ಎನಿಸಿದ ಪಂಪನಿಂದ ಚಂಪೂಕಾವ್ಯ ಪ್ರಾರಂಭವಾಗಿ ಆದಿಪುರಾಣ, ವಿಕ್ರಮಾರ್ಜುನವಿಜಯಗಳೆಂಬ ಕೃತಿರತ್ನಗಳು ಕನ್ನಡದ ಹಿರಿಮೆಯನ್ನು ಸೂಚಿಸುತ್ತಿವೆ. ಹೀಗೆ ಪೊನ್ನನ ಶಾಂತಿಪುರಾಣ. ರನ್ನನ ಗದಾಯುದ್ಧ. ಜನ್ನನ ಯಶೋಧರ ಚರಿತೆ, ಚಾಮುಂಡರಾಯನ ಪುರಾಣ ಮುಂತಾದ ಮಹಾಕಾವ್ಯಗಳು ಕನ್ನಡದ ಪ್ರೌಢಿಮೆಯನ್ನು ತಿಳಿಸುತ್ತವೆ ಹೀಗೆ ಅಗ್ಗಳ, ಸಾಳ್ವ, ನಯಸೇನ, ನೇಮಿಚಂದ್ರ, ರತ್ನಾಕರ, ಆಂಡಯ್ಯ ಮುಂತಾದ ಕವಿಗಳು ಸಮಂತಭದ್ರರು, ಭಟ್ಟಾಕಲಂಕರು, ಪೂಜ್ಯಪಾದರು ಸಿಂಹನಂದಿಗಳೇ ಮುಂತಾದ ಆಚಾರ್ಯರುಗಳು ಬರೆದಿರುವ ಕಾವ್ಯಗಳು, ಪುರಾಣಗಳು, ಸಿದ್ಧಾಂತಗಳು ಅಷ್ಟಿಷ್ಟಲ್ಲ. ಹೀಗೆ ಕನ್ನಡ ಸರಸ್ವತಿಯನ್ನು ಜೈನರು ಅನೇಕ ಗ್ರಂಥರತ್ನಗಳಿಂದ ಅಲಂಕರಿಸಿದ್ದಾರೆ. ನ್ಯಾಯ, ವೈದ್ಯ, ಗಣಿತ, ಭೂಗೋಳ, ಖಗೋಳ, ಸಂಗೀತ ಶಾಸ್ತ್ರಗಳ ರಚನೆಯನ್ನು ಮಾಡಿ, ಶಾರದೆಯ ಮಂದಿರವನ್ನೇ ತುಂಬಿದರು. ಹೀಗೆ ವಿಪುಲವಾದ ಸಾಹಿತ್ಯ ಸೇವೆಯನ್ನು ಜೈನಾಚಾರ್ಯರೂ, ಕವಿಗಳೂ ಮಾಡಿದ್ದಾರೆ. ಕುಮುದೇಂದುವಿನ ಸಿರಿಭೂವಲಯ ಅದ್ಭುತ ಕಾವ್ಯ.



ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪಗಳಿಗೆ ಜೈನರ ಕಾಣಿಕೆ ಅಪಾರವಾದುದು ಇವರಿಂದ ಶಿಲ್ಪಕಲೆಗೆ ಒಂದು ಹೊಸ ರೂಪು ಬಂದು ಅದು ಅಚ್ಚಳಿಯದೆ ನಿಂತಿದೆ ಪ್ರಪಂಚದ ಆಶ್ಚರ್ಯವೆನಿಸಿದ ಶ್ರವಣಬೆಳ್ಗೊಳದ ಗೋಮಟೇಶನ ಮೂರ್ತಿಯ ಸ್ಥಾಪನೆಯನ್ನು ಜೈನ ವೀರ ಚಾಮುಂಡರಾಯನು ಸುಮಾರು ಒಂದು ಸಾವಿರ ವರ್ಷಗಳ ಹಿಂದೆಯೇ ಮಾಡಿಸಿ ಅಜರ ಅಮರ ಕೀರ್ತಿಗೆ ಪಾತ್ರನಾದನು. ಇದೊಂದು ಮೂರ್ತಿಯೇ ಸಾಕು ಕನ್ನಡ ನಾಡಿನ ಕೀರ್ತಿಗೆ ಮೂಡುಬಿದಿರೆಯ ಸಾವಿರ ಕಂಬದ ಬಸದಿ, ಕಾರ್ಕಳ, ವೇಣೂರಿನ, ಧರ್ಮಸ್ಥಳದ ಬಾಹುಬಲಿಗಳು, ಬಾದಾಮಿಯ ವೇಣ ಬಸದಿಗಳು, ಅಜಂತ ಎಲ್ಲೋರದ ವರ್ಣ ಚಿತ್ರಗಳು, ಹಳೇಬೀಡು ಬೇಲೂರಿನ ಶಿಲ್ಪ ಕಲೇ ಸಾಮಾನ್ಯ ಮಾನವರ ಕಲ್ಪನೆಗೆ ಮೀರಿದುವಾಗಿವೆ. ಇವಲ್ಲದೆ ಸಾವಿರಾರು ಬಸದಿಗಳೂ, ಮೂರ್ತಿಗಳು, ಮಾನಸ್ತಂಭಗಳೂ, ಕೆರೆ-ಕಟ್ಟೆಗಳೂ, ಊರುಗಳ ಜೈನರ ಹಿರಿಮೆಯನ್ನು ಸಾರುತ್ತ ಇಂದಿಗೂ ಕಂಗೊಳಿಸುತ್ತಿವೆ. ಇವೆಲ್ಲವೂ ಕನ್ನಡ ನಾಡಿನ ಹೆಮ್ಮೆಯ ಆಸ್ತಿಯಾಗಿ ಉಳಿದಿವೆ. ಅನೇಕ ದಾನ ದತ್ತಿಗಳು ಈಗಲೂ ಹೆಸರಾಂತವಾಗಿವೆ.

ಜೈನ ಮಹಿಳೆಯರು ದಾನಚಿಂತಾಮಣಿಗಳೆನಿಸಿದ್ದಾರೆ. ಸಂಗೀತ, ನೃತ್ಯ ಪ್ರವೀಣೆಯರೆನಿಸಿ, ವೀರ ರಮಣಿಗಳೆನಿಸಿ ಸ್ತ್ರೀ ಸಮುದಾಯಕ್ಕೆ ಆದರ್ಶರಾದರು. ಅತ್ತಿಮಬ್ಬೆ, ಮಲ್ಲಿಕಬ್ಬೆ, ಜಕ್ಕೆಯಬ್ಬೆ, ಶಾಂತಲಾದೇವಿ ಮುಂತಾದವರು ಜೈನ ನಾರೀರತ್ನಗಳಾಗಿದ್ದರು. ಹೀಗೆ ಜೈನ ರಾಜರು ಕನ್ನಡ ರಾಜ್ಯವನ್ನು ವಿಸ್ತರಿಸಿದರು, ಜೈನ ವೀರರು ಕನ್ನಡ ನೆಲವನ್ನು ಉಳಿಸಿದರು, ಜೈನಾಚಾರ್ಯರು ಧರ್ಮ ಬೋಧೆಯನ್ನು ಕನ್ನಡದಲ್ಲಿ ಮಾಡಿದರು. ಜೈನ ಕವಿಗಳು ಸಾಹಿತ್ಯವನ್ನು ಬೆಳೆಸಿದರು. ಜೈನರು ಶಿಲ್ಪಕಲೆಯನ್ನು ಅಭಿವೃದ್ಧಿಪಡಿಸಿದರು.

ಈಗಲೂ ಕರ್ನಾಟಕದಲ್ಲಿ ಪೂಜ್ಯ ವಿದ್ಯಾಸಾಗರರು, ವಿದ್ಯಾನಂದಿಗಳೇ ಮುಂತಾದ ಜೈನಾಚಾರ್ಯರಿದ್ದಾರೆ, ಆ.ನೇ. ಉಪಾಧ್ಯೆ, ತುಕೋಳ್, ವರ್ಧಮಾನಶಾಸ್ತ್ರಿಗಳು, ಸುಬ್ಬಯ್ಯಶಾಸ್ತ್ರಿಗಳು, ಭುಜಬಲಿಶಾಸ್ತ್ರಿಗಳಂಥ ವಿದ್ವಾಂಸರಿದ್ದರು, ಶ್ರೀಮಾನ್ ಅನಂತರಾಜಯ್ಯನವರು, ವೀರೇಂದ್ರ ಹೆಗ್ಗಡೆಯವರಂತಹ ದಾನವೀರರು, ಅನೇಕ ಉತ್ತಮ ಉದಾರಿ ಶ್ರಾವಕರು, ಜೈನ ಮಹಿಳೆಯರೂ ಇದ್ದು ಕನ್ನಡದ ಏಳ್ಗೆಗಾಗಿ ಧರ್ಮದ ಮೇಲ್ಪಂಕ್ತಿಯಲ್ಲಿ ಶ್ರಮಿಸುತ್ತಿದ್ದಾರೆ. ಪೂಜ್ಯ ಭಟ್ಟಾರಕರೂ, ಕರ್ನಾಟಕದ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

# 41. ತೀರ್ಥೇಶನ ಸನ್ನಿಧಿ

ಪತಿತರಾದ ನಾವು ಪಾವನರಾಗಲು ಯಾವ ಪರಮಾತ್ಮನ ಸನ್ನಿಧಿಯಲ್ಲಿ ಹೋಗಿ ದಾಸೋಹಂ ಭಾವನೆಯಿಂದ ನಮ್ಮ ಅಂತರಾಳದ ನಿವೇದನೆಯನ್ನು ಮಾಡಿಕೊಂಡು, ಸ್ತುತಿ, ಪೂಜಾ, ವಂದನೆಗಳಲ್ಲಿ ತನ್ಮಯರಾಗಿ, ಒಂದು ರೀತಿಯ ಅಲೌಕಿಕ ಆನಂದವನ್ನು ಪಡೆಯುತ್ತೇವೆಯೋ ಆ ನಮ್ಮ ಆರಾಧ್ಯ ಭಗವಂತನ ಮಹಿಮೆ ಅಪೂರ್ವವಾದುದು. ಆ ಭಗವಂತನು ಸಾಮಾನ್ಯನಲ್ಲ. ಪತಿತರನ್ನು ಪಾವನ ಮಾಡುವ ಪರುಷಮೂರ್ತಿ. ಖಂಡಿತವಾಗಿಯೂ ಈ ಒಂದು ಪೂರ್ಣ ನಂಬಿಕೆ ಯಿಂದ ಆ ಪರಿಪೂರ್ಣ ಭಗವಂತನ ಆರಾಧನೆಯನ್ನು ಮಾಡುವುದುರಿಂದ ವಾಕ್ ಶುದ್ಧಿ, ಮನಃಶುದ್ಧಿ ಇರುತ್ತಾದ್ದರಿಂದ ಪರಿಣಾಮಶುದ್ಧಿಯಾಗಿ ತತ್ಕಾಲದಲ್ಲಿ ಉಂಟಾದ ಪುಣ್ಯ ಸಂಚಯದಿಂದ ಇಚ್ಛಿತ ಫಲವೆಲ್ಲ ದೊರೆಯುವುದು ಅದಕ್ಕೆ ರತ್ನಾಕರ ಕವಿ ಹೇಳಿರುವಂತೆ:-

ಬಯಸದೆ ನಿನ್ನ ನೋಡಿದರೆ ಮೂಲೋಕ ವಿ- ।
ಸ್ಮಯ ಭೋಗಗಳ ತಂದು ಕೊಡುವ॥
ನಿಯಮದುದಾರಶೀಲನೆ ನನ್ನೊಳಿರುಸುಖ।
ಮಯನೆ ಚಿದಂಬರಪುರುಷಾ॥

ಇದರ ಸಾರಾಂಶವಿಷ್ಟೆ-''ಜಿನಭಕ್ತನು ಮುನ್ನಡೆದು ಜಿನಸ್ಥಾನವನ್ನು ಅಲಂಕರಿಸುತ್ತಾನೆ.''

ಈ ನಮ್ಮ ಪೂಜ್ಯ ಮೂರ್ತಿ ಜಗದ ಜಂಜಾಲದಿಂದ ಪಾರಾಗಿ ಅಕ್ಷಯ ಸುಖನಿಧಿಗೆ ಒಡೆಯನಾಗಿದ್ದಾನೆ. ಈತನ ಮುಂದೆ ನಿಂತ ನಾವು ಬೇಡ ಬೇಕಾದುದು ಆ ಪದವಿಯನ್ನೇ ವಿನಃ ಬೇರಲ್ಲ. ವಜ್ರದಂಗಡಿಗೆ ಹೋಗಿ ಈರುಳ್ಳಿಯನ್ನು ಕೇಳಿದಂತಾಗಬಾರದು ನಮ್ಮ ಬಯಕೆ ಮತ್ತು ಬೇಡಿಕೆಗಳು. ಆ ಭಗವಂತ ಹೋದ ಮಾರ್ಗ ನಮಗೆಲ್ಲ ಆದರ್ಶವಾದುದು. ಆತ ನಮಗೆಲ್ಲ ಕರುಣಿಸಿ ಕೊಟ್ಟ ವರವಾದರೂ ಏನು? ನಿರ್ಲಿಪ್ತ ವೀತರಾಗ ದಿಗಂಬರನ ಎದುರಿಗೆ ನಿಂತು ಭಜಿಸಿ, ಬೇಡುವ ಅವಶ್ಯಕತೆಯಾದರೂ ಏನು? ಆತನನ್ನು ನಾವೆಲ್ಲ ಏಕೆ ಪೂಜಿಸಿ ಸ್ತುತಿಸಬೇಕು? ಭಗವಂತ ಏನನ್ನೂ ಕೊಡುವವನಲ್ಲ, ತೆಗೆದುಕೊಳ್ಳುವವನೂ ಅಲ್ಲವೆಂದ ಮೇಲೆ ಬೇಡುವುದಾದರೂ ಏನನ್ನು? ಮುಂತಾದ ಪ್ರಶ್ನೆಗಳು



ಉದ್ಭವಿಸುತ್ತವೆ. ಇವಕ್ಕೆ ಉತ್ತರವಿಷ್ಟೇ.-ಜಗತ್ತಿಗೆ ಏನೇನು ಬೇಕೋ, ಜೀವಿಯ ನಿಜವಾದ ಬಯಕೆ ಏನೋ ಅದನ್ನು ಪಡೆಯುವ ಮಾರ್ಗವನ್ನು ಉಪದೇಶ ಮಾಡಿ ಹೋಗಿದ್ದಾನೆ.

ಜಗತ್ತಿನ ಜೀವಿಗಳಿಗೆ ಸುಖ ಬೇಕಾದರೆ ಧರ್ಮವನ್ನು ಪಾಲಿಸಬೇಕು. ಆ ಧರ್ಮ ಯಾವುದೆಂದರೆ ಜೀವಿಗಳ ಕರ್ಮವನ್ನು ಕಳೆದು ಸುಖದಲ್ಲಿ ಇರಿಸುವುದೇ ಧರ್ಮ. ಅದು ನಿಜವಾದ ನಂಬಿಕೆ, ನಿಜವಾದ ಜ್ಞಾನ, ನಿಜವಾದ ಆಚರಣೆಯಿಂದ ದೊರೆಯುತ್ತದೆ ಎಂಬ ಇಂತಹ ಧರ್ಮವನ್ನು ತೀರ್ಥರೂಪದಲ್ಲಿ ಹರಿಸಿ ಹೋಗಿದ್ದಾನೆ ಆ ಭಗವಂತ.

ಈ ಧರ್ಮವನ್ನು ಪಡೆದು, ಪಾಲಿಸಿ, ಪಾವನಸುಖ ಪಡೆದ ಭಗವಂತರು ಈ ಬೋಧಾಮೃತಧರ್ಮತೀರ್ಥವನ್ನು ಹರಿಸಿದರು. ಈ ಬೋಧಾಮೃತವೆಂಬ ಧರ್ಮತೀರ್ಥದಲ್ಲಿ ಸ್ನಾನ ಮಾಡಿದವರೆಲ್ಲರೂ ಪಾವನರಾಗಿ ಪರಮಾತ್ಮ ಪದವಿಗೇರುವುದರಲ್ಲಿ ಸಂಶಯವಿಲ್ಲ ತನ್ನನ್ನು ನಂಬಿದವರನ್ನು ತನ್ನಂತೆ ಆಗುವ ಧರ್ಮತೀರ್ಥವನ್ನು ಹರಿಸಿ ಉಪಕಾರ ಮಾಡಿರುವುದರಿಂದಲೇ ಆತನ ಉಪಕಾರ ಸ್ಮರಣೆಗಾಗಿ ಆತನ ಪೂಜೆ, ವಂದನೆ, ಸ್ತುತಿ, ಆರಾಧನೆ ಮುಂತಾದುವುಗಳನ್ನು ಮಾಡುವುದು. ಈ ಸುಜ್ಞಾನ ಪ್ರಕಾಶನ, ಧರ್ಮ ತೀರ್ಥ ಪ್ರವರ್ತಕನ ಶರಣಾಗುವುದೊಂದೇ ಈ ಜಗದ ಜಂಜಾಟದಿಂದ ಪಾರಾಗಲು ಮಾರ್ಗ. ಈ ಧರ್ಮತೀರ್ಥವನ್ನು ಹರಿಸಿದುದರಿಂದ ಆ ಭಗವಂತನನ್ನು ತೀರ್ಥಂಕರನೆಂಬ ಹೆಸರಿನಿಂದ ನಾವು ಕೊಂಡಾಡುತ್ತೇವೆ. ಅದರಿಂದಲೇ ಆ ಪವಿತ್ರಾತ್ಮನಿಗೆ ಆ ಹೆಸರು ಅನ್ವರ್ಥವಾಯಿತು. ಈ ಪರಿಶುದ್ಧ ತೀರ್ಥೇಶನು ದ್ರವ್ಯ, ಕ್ಷೇತ್ರ, ಕಾಲ, ಭವ, ಭಾವವೆಂಬ ಪಂಚ ಪರಾವರ್ತನದಿಂದ ಪಾರಾಗಿ ಗರ್ಭ, ಜನ್ಮ, ದೀಕ್ಷೆ, ಕೇವಲಜ್ಞಾನ, ಮೋಕ್ಷವೆಂಬ ಪಂಚ ಅತಿಶಯವನ್ನು ಹೊಂದಿ ಪಂಚಮ ಗತಿಯಾದ ಮೋಕ್ಷ ಸ್ಥಾನವನ್ನು ತಲುಪಿದನು. ಹೀಗೆ ಹಲವರು ಆಗಿ ಹೋಗಿದ್ದಾರೆ. ಅವರ ಪ್ರತಿಕೃತಿಗಳನ್ನೇ (ಪ್ರತಿಮೆ) ನಾವು ಭಕ್ತಿಯಿಂದ ಪೂಜಿಸುವುದು. ಮೊದಲು ಈ ದಾಸೋಹಂ ಭಾವನೆಯಿಂದ ಮುಂದುವರಿದು ಸೋಹಂ ಭಾವನೆಯನ್ನು ಸಾಧಿಸಿ ಅಹಂಭಾವಿಯಾಗಲು ಸಹಕಾರಿಯಾಗಿದೆ ಈ ತೀರ್ಥೇಶನ ಸನ್ನಿಧಿ. ಈ ಅಹಂಭಾವನೆಗೇರುವುದೇ ಸ್ವಸಂವೇದ್ಯ (ಅಂದರೆ ತನ್ನಲ್ಲಿ ತಾನು ಅನುಭವಿಸುವ) ಆನಂದ. ಇದಕ್ಕಿಂತ ಮಿಗಿಲಾದುದು ಇನ್ನೇನು ಬೇಕು?

ಇಂತಹ ಪವಿತ್ರ ತೀರ್ಥೇಶನ ಸ್ಥಾನ ಹೇಗೆ ಯಾರಿಗೆ ದೊರೆಯುವು

ದೆಂಬುದನ್ನು ಸ್ಥೂಲವಾಗಿ ಅವಲೋಕಿಸೋಣ.

ಅಂಧಕಾರದ ಅಖಂಡ ಸಾಮ್ರಾಜ್ಯದ ಮುಸುಕಿನಲ್ಲಿ ಈ ನಮ್ಮ ನೇತ್ರಶಕ್ತಿಯ ಕಾರ್ಯವೇನೂ ಸಾಗದು. ಅಂಧಕಾರವು ಅಂದರೆ ಕತ್ತಲೆಯು ನೇತ್ರಯುಕ್ತರನ್ನೂ ಸಹ ಕುರುಡರನ್ನಾಗಿ ಮಾಡಿಬಿಡುತ್ತದೆ. ಅದನ್ನು ಹೋಗಲಾಡಿಸಲು ಬೆಳಕು ಬೇಕು. ಬೆಳಕಿನಲ್ಲೂ ಕುರುಡರಂತೆ ಚರಿಸುವಂತೆ ಮಾಡುವ ಅಂಧಕಾರ ಒಂದುಂಟು. ಅದೇ ಅಜ್ಞಾನ ಅಂಧಕಾರ. ಆ ಗಾಢಾಂಧಕಾರವೇ ಮಿಥ್ಯಾಂಧಕಾರ. ಇದರಿಂದ ಜೀವವು ತನ್ನ ಸ್ವರೂಪವನ್ನು ತಿಳಿಯಲಾರದೆ ತಡವರಿಸುತ್ತಿದೆ. ಕರ್ಮಗಳಲ್ಲೆಲ್ಲ ರಾಜನಂತಿರುವುದು ಮೋಹನೀಯಕರ್ಮ. ಅದು ಜೀವಿಗಳ ಕ್ರೋಧ, ಮಾನ, ಮಾಯಾ ಲೋಭಗಳ ತೀವ್ರತೆಯಿಂದ ಜೀವನಲ್ಲಿ ಬಂದು ಬೆರೆಯುತ್ತದೆ. ಇದರಿಂದ ಜೀವಿಯು ನಿರಂತರವಾಗಿ ಹುಟ್ಟು, ಮುಪ್ಪು, ಅಳಿವೆಂಬ ತಾಪತ್ರಯಕ್ಕೆ ಸಿಲುಕಿ, ನೆಲೆಗಾಣದೆ ಬಳಲುತ್ತಿದೆ. ಇದರ ಅರಿವಾಗಿ ಇದರಿಂದ ಬಿಡುಗಡೆಯ ಮಾರ್ಗವನ್ನು ಹುಡುಕದಿರುವುದೇ ಅಜ್ಞಾನಾಂಧಕಾರ. ಸರ್ವರಿಗೂ ಸುಖ ಬೇಕು. ಯಾರಿಗೂ ದುಃಖದ ಲವಲೇಶವೂ ಬೇಕಿಲ್ಲ. ಅಂದಮೇಲೆ ಸುಖದ ಸಾಧನದ ಮಾರ್ಗವನ್ನೇಕೆ ಈ ಜೀವಿ ಹುಡುಕುತ್ತಿಲ್ಲ? ಅಂಥ ಸುಖ ಸಾಧಕರ, ಸತ್ಪುರುಷರ, ಮಾರ್ಗ ದರ್ಶಕರ ಸಹವಾಸದ ಗೋಜಿಗೇ ಹೋಗಿಲ್ಲ. ಹೋದರೂ ನಂಬಿಲ್ಲ, ಆಶ್ರಯಿಸಿಲ್ಲ, ಸೇವೆ ಮಾಡಿಲ್ಲ. ಕತ್ತಲೆಯಿಂದ ಪಾರಾಗಲು ಬೆಳಕನ್ನು ಆಶ್ರಯಿಸಬೇಕಲ್ಲವೇ? ಹಾಗೇ ಆ ಸುಖಿ ಸತ್ಪುರುಷರ ಆಶ್ರಯ ಬೇಕು. ಸುಖವನ್ನು ಕಂಡವರು ಹೇಳಿದ್ದಾರೆ - 'ನೀನು ಚೇತನ ಪುಂಜಜ್ಞಾನಿ. ನೀನೇ ಸಹಜಾನಂದೀ ಆತ್ಮನಾಗಿದ್ದೀಯೇ. ಪರವಸ್ತುಗಳ ಮಮತ್ವವನ್ನು ಬಿಡು. ಅದರಲ್ಲೂ ನಿನ್ನ ಶರೀರದೊಂದಿಗೇ ನಿನ್ನ ಸಂಬಂಧವಿಲ್ಲ. ಆದಕ್ಕಾಗಿ ನಿನ್ನನ್ನೇ ನಂಬು ನಿನ್ನನ್ನೇ ತಿಳಿ. ನಿನ್ನನ್ನೇ ನೋಡು. ಅದೇ ಸತ್, ಚಿತ್, ಆನಂದ. ಅನೇಕರು ಇದನ್ನೇ ಸಾಧಿಸಿ ಸಿದ್ಧಿ ಹೊಂದಿದ್ದಾರೆ. ಈ ಧರ್ಮತೀರ್ಥದಲ್ಲಿ ಸ್ನಾನ ಮಾಡಿದ ಭವ್ಯರು ಆಧ್ಯಾತ್ಮಾನುಭವದಲ್ಲಿ ಸಾಗುತ್ತಾರೆ.

ಒಂದು ಕಡೆ ಆಚಾರ್ಯ ರವಿಷೇಣರು ಹೇಳಿದ್ದಾರೆ - 'ಯಾವಾಗ ಜಗತ್ತಿನಲ್ಲಿ ಧರ್ಮ ಖಿಲವಾಗುತ್ತದೋ, ಸತ್ಪುರುಷರಿಗೆ ತೊಂದರೆ, ಕಷ್ಟ-ನಷ್ಟಗಳು ಉಂಟಾಗುತ್ತಿರುತ್ತವೆಯೋ, ಪಾಪಿಗಳಲ್ಲೇ ಸಂಪತ್ತು ಸೇರುತ್ತದೋ, ಯಾವಾಗ ಅಧರ್ಮ ಕಾರ್ಯಗಳು ಹೆಚ್ಚಾಗುತ್ತವೋ ಆಗಾಗ ತೀರ್ಥಂಕರರೆಂಬ ಮಹಾತ್ಮರು ಉದಯವಾಗಿ ನಿಜವಾದ ಆತ್ಮಧರ್ಮದ ತೀರ್ಥವನ್ನು ಹರಿಸಿ, ಪತಿತರನ್ನು ಪಾವನರನ್ನಾಗಿ ಸುಖಸಾಧನೆಯ ಸಾತ್ವಿಕ ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಿ, ಧರ್ಮೋದ್ಧಾರ ಮಾಡುತ್ತಾರೆ.' ಹಾಗೆಂದ ಮಾತ್ರಕ್ಕೆ ಇವರು ಅವತಾರಿ



ತೀರ್ಥಂಕರರು. ಆಯಾಯ ಕಾಲಕ್ಕೆ ಹೊತ್ತು ತಂದ ಪುಣ್ಯವಿಶೇಷದಿಂದ ಮಹಿಮರಾಗಿ, ಅತಿಶಯವನ್ನು ಹೊಂದಿ, ಕರ್ಮ ಜಾಲವನ್ನು ಹರಿದು ತಾವು ಕಂಡ ಸತ್ಯ ಸುಜ್ಞಾನವನ್ನು ಬಿತ್ತರಿಸುತ್ತಾರೆ. ಇವರೇ ಪುರುಷಶ್ರೇಷ್ಠರು. ಇಂಥವರು ಹಿಂದೆ ಅನೇಕರು ಆಗಿ ಹೋಗಿದ್ದಾರೆ. ಮುಂದೆ ಆಗುವವರೂ ಇದ್ದಾರೆ. ಅಂತಹ ಪದವಿಯ ಪ್ರಾಪ್ತಿಯನ್ನು ಯಾರುಬೇಕಾದರೂ ಮಾಡಿಕೊಳ್ಳಬಹುದು. ಈ ಪರಿಪಾಟಿ ಅನಾದಿ ಕಾಲದಿಂದಲೂ ಸಾಗಿ ಬಂದಿದೆ.

ತೀರ್ಥಂಕರ ಶಬ್ದದ ವಿಮರ್ಶೆ ಮಾಡುತ್ತ ಆಚಾರ್ಯ ಪ್ರಭಾಚಂದ್ರರು ಹೇಳುತ್ತಾರೆ- 'ತೀರ್ಥಮಾಗಮಃ ತದಾಧಾರಸಂಘಶ್ಚ' ಅಂದರೆ, ಜಿನೇಂದ್ರರು ಉಪದೇಶಿಸಿರುವ ಜಿನವಾಣಿ ಹಾಗೂ ಆಗಮದ ಆರಾಧಕರಾದ ಸಾಧುವರ್ಗವೇ ತೀರ್ಥ. 'ತೀರ್ಥಂ ಕರೋತೀತಿ ತೀರ್ಥ ಕರಃ' ಎಂದರೆ, ಯಾರ ಬೋಧೆಯ ಮುಖೇನ ಜೀವನು ಶುದ್ಧ, ಬುದ್ಧ, ಸಿದ್ಧನಾಗಲು ಸಾಧ್ಯವಾಗುವುದೋ ಅಂತಹ ಧರ್ಮತೀರ್ಥಕರ್ತಾರರೇ ತೀರ್ಥ ಅಥವಾ ತೀರ್ಥಂಕರರು.

ಮೂಲಾಚಾರದಲ್ಲಿ ಧರ್ಮವನ್ನು ಎರಡು ಭೇದವಾಗಿ ವಿಂಗಡಿಸಿದ್ದಾರೆ.

೧) ದ್ರವ್ಯತೀರ್ಥ, ೨) ಭಾವತೀರ್ಥ.

ಸಂತಾಪ ಶಾಂತವಾಗಿ, ದಾಹವು ಹಿಂಗಿ, ಮಲಿನತೆಯನ್ನು ತೊಳೆಯುವ ಶಾಸ್ತ್ರರೂಪ ಧರ್ಮವೇ ದ್ರವ್ಯ ತೀರ್ಥ. "ಸುದಧಮ್ಮೋ ಏತ್ಥ ಪುಣತಿತ್ಥಂ" ಎಂಬಂತೆ ಜಿನವಾಣಿರೂಪೀ ಗಂಗೆಯಲ್ಲಿ ಸ್ನಾನ ಮಾಡುವುದರಿಂದ (ಉಪದೇಶ, ಸ್ವಾಧ್ಯಾಯ) ಸಂಸಾರದ ಸಂತಾಪವು ಶಾಂತವಾಗಿ, ಅಜ್ಞಾನದ ದಾಹವು ಹಿಂಗಿ, ವಿಷಯಾಶಾ ಮಲಿನತೆಯು ನಿವಾರಣೆಯಾಗುತ್ತದೆ. ಹಾಗೂ ಭವರೋಗವು ಗುಣವಾಗುತ್ತದೆ.

ಸಮ್ಯಗ್ದರ್ಶನ, ಜ್ಞಾನ, ಚಾರಿತ್ರಯುಕ್ತರಾದ ಎಲ್ಲ ಜಿನೇಶರೂ ಭಾವತೀರ್ಥರು.

ಯಾವ ಜೀವಿಗೆ ಸದ್ದೇವ, ಶಾಸ್ತ್ರ, ಗುರುಗಳ ಮುಖೇನ ಸಮ್ಯಗ್ದರ್ಶನ, ಜ್ಞಾನ, ಚಾರಿತ್ರಗಳ ಬೋಧಿಲಾಭವಾಗುತ್ತದೋ ಅವರಿಗೆ ಲೌಕಿಕ ಮತ್ತು ಪಾರಲೌಕಿಕಗಳ ಸುಖ ದುಃಖಗಳ ಪರಿಚಯವಾಗುತ್ತದೆ. ತದನಂತರ ಇಂದ್ರಿಯ ಜನ್ಯ ಸುಖದ ಕಡೆ ಉದಾಸೀನವೂ ಅತೀಂದ್ರಿಯ ಸುಖದ ಕಡೆ ಗಮನವೂ ಉಂಟಾಗುತ್ತದೆ. ಇದರ ಪ್ರಾಪ್ತಿಗಾಗಿ ದೇಶ, ಕಾಲ, ಸ್ಥಿತಿ, ವರ್ತಮಾನಗಳನ್ನು

ಅನುಸರಿಸಿ ಯಾರಾದರೂ ಕೇವಲಿ ಭಗವಾನರ ಪಾದಮೂಲದಲ್ಲಿ ಅಥವಾ ಸಮವಸರಣದ ಅರಹಂತರ ಪಾದಮೂಲದಲ್ಲಿ ಅಥವಾ ಸಮವಸರಣದ ಅರಹಂತರ ಸನ್ನಿಧಿಯಲ್ಲಿ ದರ್ಶನವಿಶುದ್ಧಿ, ವಿನಯಸಂಪನ್ನತಾ, ಶೀಲವ್ರತಗಳ ನಿರತಿಚಾರ ಪಾಲನೆ, ನಿರಂತರ ಜ್ಞಾನೋಪಯೋಗ, ಶಕ್ತಿತಃ ತ್ಯಾಗ, ಶಕ್ತಿತಃ ತಪ, ಸಾಧುಸಮಾಧಿ, ವೈಯಾ ವೃತ್ಯಕರಣ, ಅರ್ಹದ್ಭಕ್ತಿ, ಆಚಾರ್ಯಭಕ್ತಿ, ಬಹುಶ್ರುತ ಭಕ್ತಿ, ಪ್ರವಚನಭಕ್ತಿ ಅವಶ್ಯಕಾಪರಿಹಾಣಿ ಅಂದರೆ ಆತ್ಮನನ್ನು ನಿರ್ಮಲ ಮಾಡಲು ಅವಶ್ಯಕವಾದ ನಿಯಮ ಪಾಲನೆ, ರತ್ನತ್ರಯ ಧರ್ಮಪಾಲನೆ, ಹಾಗೂ ಪ್ರವಚನ ವಾತ್ಸಲ್ಯವೆಂಬ 16 ಶುಭ ಭಾವನೆಗಳನ್ನು ಭಾವಿಸುವುದರಿಂದ ತತ್ಪರಿಣಾಮವಾಗಿ ತೀರ್ಥಂಕರ ಪುಣ್ಯ ನಾಮಕರ್ಮವು ಬಂಧವಾಗುತ್ತದೆ. ಮುಂದಿನ ಮೂರನೇ ಭವದಲ್ಲಿಯೇ ಮನುಷ್ಯಗತಿಯ ಪುರುಷ ಪರ್ಯಾಯ ವನ್ನು ಹೊಂದಿ ಪಂಚಕಲ್ಯಾಣನಾಯಕನಾಗಿ ತೀರ್ಥಂಕರನೆನಿಸಿ, ಜಗತ್ತಿನಲ್ಲಿ ಅನಾದಿಯಿಂದ ಪುನರುದ್ಧಾರ ಮಾಡಲು ಧರ್ಮಾಮೃತ ತೀರ್ಥಗಂಗೆಯನ್ನು ಹರಿಸಿ, ಮುಕ್ತಿಮಂದಿರವನ್ನು ತಲುಪಿ, ನಿರಂತರ ಸುಖಿಸಂಪನ್ನರಾಗುವರು.

ಇಂತಹ ಲಬ್ಧಿ ಕೆಲವೇ ಜೀವಿಗಳಿಗೆ ಮಾತ್ರ. ಇವರು ಅನೇಕ ಜೀವಿಗಳ ಉದ್ಧಾರದ ಮಾರ್ಗೋಪಾಯವನ್ನು ಸೂಚಿಸಿ ಅವರ ಮುಕ್ತಿಗೆ ಕಾರಣರಾಗುತ್ತಾರೆ.

ಈ ತೀರ್ಥೇಶರು ಭೂಲೋಕದ ಎರಡೂವರೆ ದ್ವೀಪದಲ್ಲಿ ಪಂಚ ಭರತ ಮತ್ತು ಪಂಚ ಐರಾವತ ಕ್ಷೇತ್ರಗಳಲ್ಲಿ ಉತ್ಸರ್ಪಿಣಿಯ ಮೂರನೇ ಮತ್ತು ಅವಸರ್ಪಿಣಿಯ ನಾಲ್ಕನೆಯ ಕಾಲವಾದ ದುಃಷಮ-ಸುಷಮಾ ಎಂಬ ಕಾಲದಲ್ಲಿ ಜನ್ಮತಾಳುತ್ತಾರೆ. ಪಂಚ ವಿದೇಹಕ್ಷೇತ್ರಗಳಲ್ಲಿ ಸದಾಕಾಲದಲ್ಲೂ ತೀರ್ಥಂಕರರು ಇದ್ದೇ ಇರುತ್ತಾರೆ. ಭರತ ಐರಾವತ ಕ್ಷೇತ್ರಗಳಲ್ಲಿ ತೀರ್ಥಂಕರರು ಉದಯಿಸುವ ಕಾಲಕ್ಕೆ ಒಮ್ಮೆಲೇ 170 ಮಂದಿ ತೀರ್ಥಾಧೀಶರು ಧರ್ಮ ಪ್ರಚಾರಾರ್ಥ ವಿಹಾರ ಮಾಡುತ್ತಾರೆ. ಈಗಲೂ ಪಂಚ ವಿದೇಹ ಕ್ಷೇತ್ರಗಳಲ್ಲಿ ಸೀಮಂದರಾದಿ ಅಜಿತವೀರ್ಯ ಪರ್ಯಂತ ಇಪ್ಪತ್ತು ಮಂದಿ ತೀರ್ಥಂಕರರು ವಿರಾಜ ಮಾನರಾಗಿದ್ದಾರೆ. ಅವರನ್ನು ಸ್ಮರಿಸಿ, ಪರೋಕ್ಷ ಸ್ತುತಿ, ಪೂಜಾ, ವಂದನೆಯನ್ನು ಮಾಡಬಹುದು.

ಹೀಗೆ ತೀರ್ಥೇಶನ ಪ್ರತ್ಯಕ್ಷ ಗೋಚರವಲ್ಲದ ಈ ಕಾಲ, ಈ ದೇಶ, ಈ ವರ್ತಮಾನ, ಈ ಸ್ಥಿತಿಯಲ್ಲಿ ಅವರ ಪ್ರತಿಕೃತಿಯಾದ ಪ್ರತಿಮೆಗಳ ಭಾವನೆಗಳಿಂದ ಭವತಾರಣವನ್ನು ಹೊಂದಿ ಮುಂದಿನ ಜನ್ಮದಲ್ಲೇ ಪ್ರತ್ಯಕ್ಷ ತೀರ್ಥೇಶನ ಸನ್ನಿಧಿಗೆ ತಲುಪಲು ಕಾರಣ ಮಾಡಿಕೊಳ್ಳಬಹುದು. 'ಭಾವನಾ ಭವನಾಶಿನೀ, ಯದ್ಭಾವಂ



ತದ್ಭವತಿ' ಎಂಬಂತೆ ಮುಕ್ತಿಕನ್ಯೆಯ ಕರಪಿಡಿಯಲು ಭಕ್ತಿ ಎಂಬ ಶುಲ್ಕವನ್ನು ನಾವು ಕೊಡಬೇಕು. ಹಾಗೂ ಧರ್ಮತೀರ್ಥದಲ್ಲಿ ಈಜಾಡಬೇಕು. ಇದೊಂದೇ ಈ ಜಂಜಟದ ಗೊಂದಲಮಯ ವಾತಾವರಣದಲ್ಲಿ ಶಾಂತಿ ಹೊಂದುವ ಉಪಾಯ.

ಮೂರು ಲೋಕದೊಳ್ ಸಾರವಾದುದು ವೀತರಾಗ ವಿಜ್ಞಾನ ।
ಬಾರಿ ಬಾರಿಗೂ ಭಾವಿಸಿದರೆ ಮುಕ್ತಿಗದು ಸೋಪಾನ ॥

## 42. ಕೋಪಿ : ಅರೆ ಹುಚ್ಚ

ಹೌದು ನಿಜ, ಕೋಪಿ ಅರೆಹುಚ್ಚ. ಪೂರಾ ಹುಚ್ಚನಿಗೆ ಬುದ್ಧಿ ಯಾವಾಗಲೂ ಸ್ವಾಧೀನವಿರುವುದಿಲ್ಲ. ಆದರೆ ಕೋಪಿಷ್ಠನಿಗೆ ಕೋಪ ಬಂದಾಗ ಬುದ್ಧಿ ಸ್ವಾಧೀನ ದಲ್ಲಿರುವುದಿಲ್ಲ. ಆಗ ಆತ ಹುಚ್ಚನಂತಾಗಿ ಮಾಡಬಾರದ ಕೆಲಸ ಮಾಡುತ್ತಾನೆ. ಆಡಬಾರದ ಮಾತನಾಡುತ್ತಾನೆ. ಕುಡಿದವನು ಅಮಲೇರಿ ಯದ್ವಾ ತದ್ವಾ ರೀತಿಯಲ್ಲಿ ವರ್ತಿಸುವಂತೆ ಕೋಪಿಯೂ ವರ್ತಿಸುತ್ತಾನೆ. ಅಮಲಿಳಿದ ನಂತರ ಯಥಾಸ್ಥಿತಿಗೆ ಬರುವಂತೆ ಕೋಪಿಷ್ಠನ ರೀತಿಯೂ ಹಾಗೇ ಇರುತ್ತದೆ. ಕೋಪವು ಕ್ರೋಧವೆಂಬ ಕಷಾಯದ ಉದಯದಿಂದ ಮನಃಸ್ಥಿತಿಯಲ್ಲಿ ಉಂಟಾಗುತ್ತದೆ. ಕ್ರೋಧವು ಜೀವಿ ಗಳನ್ನು ಮೃತ್ಯುಮುಖಕ್ಕೆ ತಳ್ಳುವಂಥ ಆತ್ಮಘಾತಕ ಮಹಾಶತ್ರು.

ಭಗವದ್ ಜಿನಸೇನಾಚಾರ್ಯರು ಆದಿನಾಥರ ಸಹಸ್ರನಾಮ ಸ್ತೋತ್ರ ಮಾಡುತ್ತ ಜಿನೇಂದ್ರನನ್ನು-

ಜಿತಕ್ರೋಧೋ। ಜಿತಾಮಿತ್ರೋ ।
ಜಿತಕ್ಲೇಶೋ । ಜಿತಾಂತಕಃ ॥

ಎಂಬ ಶಬ್ದಗಳಿಂದ ಕೊಂಡಾಡಿದ್ದಾರೆ.

ಸಹಸ್ರನಾಮದಲ್ಲಿನ ಪ್ರತಿಯೊಂದು ಶಬ್ದವೂ ಭಗವಂತನ ಒಂದೊಂದು ವಿಶೇಷ ಗುಣಗಳನ್ನು ಸೂಚಿಸುತ್ತವೆ. ಅವುಗಳಲ್ಲಿ ಮೇಲಿನ ಈ ನಾಲ್ಕು ಗುಣ ಸೂಚಕ ಶಬ್ದಗಳಂತೂ ಒಂದಕ್ಕೊಂದು ಸಂಬಂಧವಾಗಿದ್ದು ಜೀವನು ಜಿನೇಶ ನಾದುದು ಹೇಗೆ ಎಂಬುದನ್ನು ತಿಳಿಸುತ್ತವೆ.

ಭಗವಂತನು ಮೊದಲು ಕ್ರೋಧವನ್ನು ಗೆದ್ದುದರಿಂದ ಜಿತಕ್ರೋಧನೆಂತಲೂ, ಕರ್ಮರೂಪಿ ಶತ್ರುಗಳನ್ನು ಗೆದ್ದುದರಿಂದ ಜಿತಾಮಿತ್ರನೆಂತಲೂ ಕಾಯಕ್ಲೇಶಗಳನ್ನು ಗೆದ್ದುದರಿಂದ ಜಿತಕ್ಲೇಶನೆಂತಲೂ, ಮೃತ್ಯುವನ್ನು ಗೆದ್ದುದರಿಂದ ಜಿತಾಂತಕನೆಂತಲೂ ಆಚಾರ್ಯರು ಜಿನೇಂದ್ರನನ್ನು ಕೊಂಡಾಡಿರುವುದರಲ್ಲಿ ಒಂದು ವಿಶೇಷತೆಯುಂಟು.

ಹೇಗೆಂದರೆ - ಯಾರು ಕ್ರೋಧವನ್ನು ಜಯಿಸುತ್ತಾರೋ ಅವರು ಕರ್ಮಶತ್ರುಗಳನ್ನು ಜಯಿಸಲು ಸಾಧ್ಯ, ಯಾರು ಕರ್ಮರೂಪಿ ಶತ್ರುಗಳನ್ನು ಜಯಿಸಬಲ್ಲರೋ ಅವರು ಕಾಯಕ್ಲೇಶಗಳನ್ನು ಜಯಿಸುವರೋ ಅವರು ಮೃತ್ಯುವನ್ನು ಜಯಿಸಬಲ್ಲರು. ಹೀಗೆ ಕ್ರೋಧ, ಶತ್ರು, ಕ್ಲೇಶ ಮತ್ತು ಮೃತ್ಯು ಇವುಗಳನ್ನು ಭಗವಾನನು ಜಯಿಸಿದನೆಂಬುದು ಮೇಲ್ಕಂಡ ಶಬ್ದಗಳಿಂದ ಗೊತ್ತಾಗುತ್ತದೆ. ಆದುದರಿಂದ ಮೃತ್ಯುವನ್ನು ಜಯಿಸಲು ಅಥವಾ ಜೀವನು ಜಿನೇಶನಾಗಲು ಪ್ರಪ್ರಥಮವಾಗಿ ಕ್ರೋಧವನ್ನು ಜಯಿಸುವುದು ಆವಶ್ಯಕವಿದೆ ಎಂದು ಆಚಾರ್ಯರು ತಿಳಿಸಿದ್ದಾರೆ. ಕ್ರೋಧದಿಂದ ಶತ್ರುಗಳುಂಟಾಗುತ್ತಾರೆ, ಶತ್ರುಗಳಿಂದ ಕ್ಲೇಶ ಉಂಟಾಗುತ್ತದೆ. ಕ್ಲೇಶದಿಂಧ ಮೃತ್ಯು ಒದಗುತ್ತದೆ ಎಂಬುದು ಸತ್ಯಸಿದ್ಧಾಂತವಾಯಿತು.

ಕ್ರೋಧ ಅಥವಾ ಕೋಪವನ್ನು ಬಿಡದೆ ಶಾಂತಿ ಸಿಗಲಾರದು. ಶಾಂತಿಯಿಲ್ಲದಿದ್ದರೆ ಸುಖವೂ ಇಲ್ಲ. ಸುಖ-ಶಾಂತಿಯೇ ಜೀವನದ ಗುರಿಯಾದುದರಿಂದ ಸುಖ-ಶಾಂತಿಗಳನ್ನು ಪಡೆಯಬೇಕೆಂದಿದ್ದರೆ ಕ್ರೋಧವನ್ನು ಬಿಡಲೇಬೇಕು. ಜೀವನ ಸ್ವಭಾವವಾದ ಶಾಂತಿಯನ್ನು ಹಾಳುಮಾಡಿ ಜೀವನವನ್ನೇ ಅಲ್ಲೋಲ ಕಲ್ಲೋಲ ಮಾಡುವ ಕ್ರೋಧವು ಅಗ್ನಿಗಿಂತಲೂ ಭಯಾನಕವಾದುದು. ಹೇಗೆ ತಣ್ಣನೆಯ ನೀರು ಅಗ್ನಿಯ ಸಂಸರ್ಗದಿಂದ ಕಾದು ಕುದಿಯುತ್ತದೋ ಹಾಗೇ ಕ್ರೋಧವಶನಾದ ಜೀವಿಯೂ, ಕುದಿದು ಕಂಗೆಟ್ಟು ದುರ್ಗತಿಗೆ ಸಾಗುವ ಕಾರ್ಯಗಳನ್ನು ಮಾಡಿಬಿಡುತ್ತಾನೆ.

ಕ್ರೋಧದ ಉತ್ಪತ್ತಿಯು ಸ್ವಾರ್ಥದಿಂದ ಆಗುತ್ತದೆ. ತನಗೆ ಬೇಕಾದುದು ದೊರೆಯದಿದ್ದಲ್ಲಿ, ತನ್ನ ದರ್ಪ ನಡೆಯದಿದ್ದಲ್ಲಿ, ತನ್ನ ಮಾತಿಗೆ ಯಾರಾದರೂ ಪ್ರತಿ ಆಡಿದಲ್ಲಿ, ತನ್ನ ಕಾರ್ಯಸಾಧನೆಯಲ್ಲಿ ಲೋಪ ಉಂಟಾದಲ್ಲಿ ಅಥವಾ ತನ್ನ ಇಂದ್ರಿಯ ಸುಖಕ್ಕೆ ಅಡಚಣೆ ಉಂಟಾದಲ್ಲಿ ಕೂಡಲೇ ಕ್ರೋಧವೆಂಬ ಬೆಂಕಿಯು ಅಂತರ್ಯದಲ್ಲಿ ಹುಟ್ಟುತ್ತದೆ. ತನ್ನ ಸ್ವಾರ್ಥಸಾಧನೆಯಲ್ಲಿ ಜೀವನು ಇಹಪರಗಳನ್ನು ಗಮನಿಸದೆ ನುಗ್ಗುತ್ತಿರುವಾಗ ಏನಾದರೂ ಅಡಚಣೆಗಳುಂಟಾದರೆ ಕೂಡಲೇ



ಕ್ರೋಧವಶನಾಗಿ ವಿವೇಕಶೂನ್ಯನಾಗುತ್ತಾನೆ. ಆಗ ಹಿತಾಹಿತಗಳನ್ನು ಲೆಕ್ಕಿಸದೆ ಸರ್ವನಾಶಕರವಾದ ಕಾರ್ಯ ಮಾಡಲು ತೊಡಗುತ್ತಾನೆ. ಮತ್ತು ಹುಚ್ಚುನಂತೆ ವರ್ತಿಸುತ್ತಾನೆ. ಕಾರಣ ತನ್ನ ವಿವೇಕವನ್ನು ಕ್ರೋಧದ ಕೈಗೆ ಒಪ್ಪಿಸುತ್ತಾನೆ. ಕ್ರೋಧವಶನಾದವನು ಕೊಲೆ, ಹುಸಿ, ಕಳವು, ಪರದಾರ, ಅತಿಕಾಂಕ್ಷೆ ಎಂಬ ಪಂಚ ಪಾಪಗಳನ್ನು ಮಾಡಲು ಹೇಸುವುದಿಲ್ಲ.

ಜೀವಂಧರನು ಗಂಧೋತ್ಕಟ ಶ್ರೇಷ್ಠಿಯ ಮನೆಯಲ್ಲಿ ಬೆಳೆಯುತ್ತಿದ್ದಾಗ ಆರ್ಯನಂದಿಗಳೆಂಬ ಗುರುಗಳಿಂದ, ತನ್ನ ತಂದೆಯ ಹತ್ಯೆ, ತಾಯಿಯ ಪರದೇಶ ಗಮನ ಇತ್ಯಾದಿಗಳಿಗೆ ಕಾರಣನಾದ ಕಾಷ್ಠಾಂಗರನ ದುಷ್ಟತನವನ್ನು ತಿಳಿದ ತಕ್ಷಣ ಕೋಪಿಷ್ಠನಾಗಿ ಉರಿದೇಳುತ್ತಾನೆ. ಆಗ ಗುರುಗಳು ಅವನನ್ನು ಸಮಾಧಾನ ಮಾಡುತ್ತಾ -

"ದಹೇತ್‌ಸ್ವಮೇವ ರೋಷಾಗ್ನಿರ್ನಾಪುರಂ ವಿಷಮಂ ತತಃ ।
ಕ್ರುಧ್ಯನ್ನಿಕ್ಷಿಪತಿ ಸ್ವಾಂಗೇ ವಹ್ನಿಮನ್ಯದಿಧಿಕ್ಷಯಾ ॥

ಎಂದರೆ ಕ್ರೋಧದಿಂದ ಮತ್ತೊಬ್ಬರಿಗೆ ಹಾನಿಯಾಗಲೀ ಬಿಡಲಿ, ಕ್ರೋಧಿಗೇ ಮೊದಲು ಜ್ಞಾನದರ್ಶನರೂಪವಾದ ನಿಜಸ್ವಭಾವದ ಘಾತ ಉಂಟಾಗುತ್ತದೆ. ಹೇಗೆಂದರೆ - ಮತ್ತೊಬ್ಬನನ್ನು ಸುಡಲು ಬೆಂಕಿಯ ಕೆಂಡವನ್ನು ಕೈಲಿ ತೆಗೆದುಕೊಂಡು ಎಸೆದಂತಾಗುತ್ತದೆ. ಆ ಕೆಂಡವು ಮತ್ತೊಬ್ಬನಿಗೆ ತಗುಲಿ ಸುಡಬಹುದು ಅಥವಾ ಸುಡದೆಯೂ ಇರಬಹುದು. ಆದರೆ ಎಸೆದವನ ಕೈಯಂತೂ ಸುಟ್ಟೇ ಸುಡುತ್ತದೆ. ಆದುದರಿಂದ ಜೀವಂಧರ! ಕೊಪಗೊಳ್ಳಬೇಡ. ಶಾಂತನಾಗು. ಕಾಲವನ್ನರಿತು ಕೆಲಸವನ್ನು ಸಮಾಧಾನದಿಂದ ಸಾಧಿಸು.'' ಎಂದು ಬುದ್ಧಿ ಹೇಳಿದರು. ಕ್ರೋಧವು ಸರ್ಪದ ವಿಷಕ್ಕಿಂತಲೂ ಮತ್ತು ಹರಿತವಾದ ಆಯುಧಕ್ಕಿಂತಲೂ ತೀಕ್ಷ್ಣವಾದುದು. ಕ್ರೋಧದಿಂದ ತಾನು ಮಾಡುವ ತಪ, ದಾನ, ಧರ್ಮಾದಿಗಳು ನಿಷ್ಫಲವಾಗುತ್ತವೆ. ತನ್ನ ಕೈಲಿ ಏನು ಮಾಡಲಾಗದಿದ್ದರೂ ಚಿಂತೆಯಿಲ್ಲ, ಕೋಪಿಯಾಗದೆ ಶಾಂತ ಸ್ವಭಾವಿಯಾಗಿ ಕ್ಷಮಾಗುಣವನ್ನು ಹೊಂದಿದ್ದು ಸುಖ-ದುಃಖಗಳನ್ನು ಸಮಾಧಾನ ಚಿತ್ತದಿಂದ ಅನುಭವಿಸುತ್ತ ಜೀವನವನ್ನು ಸಾಗಿಸಿದರೆ ಸಾಕು. ಕ್ರೋಧದಿಂದ ರಾಗ-ದ್ವೇಷಗಳು ಬೆಳೆದು ಬಂದು ಮಾನ, ಮಾಯ, ಲೋಭಗಳೆಂಬ ಕಷಾಯಗಳು ಅಂತರ್ಯದಲ್ಲಿ ಉದ್ಭವವಾಗುತ್ತವೆ. ಆದುದರಿಂದ-

"ಕೋಪ ನರಕದ ಕೂಪವಾಗಿದೆ.

ಕೋಪವಾತ್ಮಗೆ ತಾಪವಾಗಿದೆ,
ಪಾಪವೈದರೊಳಧಿಕವಾಗಿದೆ ಕೋಪ ತನುಕಿಚ್ಚು ॥

ಎಂಬಂತೆ ಕೋಪಕ್ಕಿಂತ ಶತ್ರು ಬೇರಿಲ್ಲ. ಇದು ಜೀವಿಯನ್ನು ಹುಚ್ಚೆಬ್ಬಿಸುತ್ತದೆ.

ಕ್ರೋಧವು ನಾಲ್ಕು ರೀತಿಯಲ್ಲಿ ಒಡಮೂಡುತ್ತದೆ. ಯಾರ ಕೋಪವು ಕಲ್ಲಿನ ಮೇಲೆ ಗೆರೆ ಕೊರೆದಂತೆ ಗಾಢವಾಗಿ ಅಳಿಸಲಾರದಂತೆ ಇರುತ್ತದೋ ಅದಕ್ಕೆ ಅನಂತಾನುಬಂಧಿ ಕ್ರೋಧವೆಂದು ಹೆಸರು. ಈ ರೀತಿಯ ಕ್ರೋಧ ಪರಿಣಾಮ ಪೂರ್ತಿ ಕೆಟ್ಟು ಹೋಗುತ್ತದೆ. ಇದರಿಂದ ನರಕಾಯು ಕಟ್ಟುತ್ತದೆ. ಮತ್ತು ಅನಂತಾನಂತ ಭವಗಳವರೆಗೂ ದುಃಖವನ್ನು ಅನುಭವಿಸಬೇಕಾಗುತ್ತದೆ.

ಯಾರ ಕೋಪವು ಭೂಮಿಯ ಮೇಲೆ ಗೆರೆ ಬರೆದಂತೆ ಇರುತ್ತದೋ ಅದಕ್ಕೆ ಅಪ್ರತ್ಯಾಖ್ಯಾನ ಕ್ರೋಧವೆನ್ನುತ್ತಾರೆ. ಇಂಥ ಪರಿಣಾಮವುಳ್ಳ ಜೀವಿಯು ತಿರ್ಯಂಚಗತಿಗೆ ಕಾರಣವಾದ ಕಾರ್ಯಗಳನ್ನು ಮಾಡುತ್ತಾನೆ.

ಯಾರ ಕೋಪವು ಮರಳ ಮೇಲೆ ಗೆರೆ ಬರೆದಂತೆ ಇರುತ್ತದೋ ಅದಕ್ಕೆ ಪ್ರತ್ಯಾಖ್ಯಾನ ಕ್ರೋಧವೆಂದು ಹೆಸರು ಇಂತಹ ಪರಿಣಾಮವುಳ್ಳ ಜೀವಿಯು ಮಾನವನಾಗಿ ಹುಟ್ಟದರೂ ದುಃಖಿಯಾಗಿಯೇ ಇರಬೇಕಾಗುತ್ತದೆ. ಮತ್ತೆ ಯಾರ ಕೋಪವು ನೀರ ಮೇಲೆ ಗೆರೆ ಬರೆದಂತೆ ಅಸ್ಪಷ್ಟವಾಗಿರುವುದೋ ಅದಕ್ಕೆ ಸಂಜ್ವಲನ ಕ್ರೋಧವೆಂದು ಹೆಸರು. ಅವರು ದೇವಗತಿಗೆ ಹೋಗಬಹುದಾದರೂ ರಾಗ ಪರಿಣಾಮಿಗಳಾಗಿಯೇ ಇರುತ್ತಾರೆ ಎಂಬ ಸಿದ್ಧಾಂತವಿದೆ.

ಅನಂತಾನುಬಂಧಿ ಹಾಗೂ ಅಪ್ರತ್ಯಾಖ್ಯಾನ ಕ್ರೋಧವು ನರಕ ತಿರ್ಯಂಚ ಗತಿಗೆ ಕಾರಣವಾಗಿರುವುದರಿಂದ ಅಂತಹ ಕ್ರೋಧವನ್ನು ಮಾಡಲೇಬಾರದು, ಅಂದರೆ ಕಲ್ಲ ಮೇಲಿನ ಗೆರೆ ಅಳಿಸುವುದೇ ಇಲ್ಲ. ನೆಲದ ಮೇಲಿನ ಗೆರೆ ಅಳಿಸಲು ಬಹುಕಾಲ ಬೇಕು. ಹಾಗೇ ಮರಳ ಮೇಲಿನ ಗೆರೆ ಗಾಳಿ ಬೀಸಿದಾಗ ಮಾಯವಾಗುತ್ತದೆ. ನೀರಿನ ಮೇಲಿನ ಗೆರೆಯು ತತ್‌ಕ್ಷಣವೇ ಮಾಯವಾಗುತ್ತದೆ. ಅಂದಮೇಲೆ ಅನಂತಾನುಬಂಧಿ ಅಪ್ರತ್ಯಾಖ್ಯಾನಕ್ಕೆ ಪರಿಹಾರವಿಲ್ಲ ಪ್ರತ್ಯಾಖ್ಯಾನ ಮತ್ತು ಸಂಜ್ವಲನ ಕ್ರೋಧವು ಬೇಗ ಶಾಂತವಾಗಬಲ್ಲದು.

ಏನೇ ಆಗಲಿ ಕೋಪ ಬರಲೇಬಾರದು. ಬಂದರೂ ತತ್ಕಾಲದಲ್ಲೇ ಶಮನ ಹೊಂದುವಂತಹದಾಗಿರಬೇಕು. ಹಾಗೆಂದ ಮಾತ್ರಕ್ಕೆ ತಂದೆ ಮಗನನ್ನು



ತಿದ್ದುವಾಗ, ಗುರುಗಳು ಶಿಷ್ಯರನ್ನು ತಿದ್ದುವಾಗ, ಮುನಿಗಳು ಶ್ರಾವಕರನ್ನು ಸನ್ಮಾರ್ಗಕ್ಕೆ ತರುವಾಗ, ಹಿರಿಯರು ಕಿರಿಯರನ್ನು ತಿದ್ದುವಾಗ ಹೇಳುವ ಮಾತು ಕಟುವಾಗಿದ್ದರೂ ಅಲ್ಲಿ ತೀವ್ರರಾಗ ದ್ವೇಷಗಳಿಂದ ಕೂಡಿರದಿದ್ದರೆ ಕ್ರೋಧವೆನಿಸುವುದಿಲ್ಲ. ಜೀವನದ ಜಂಜಟದಲ್ಲಿ ವ್ಯವಹಾರನಿರತನಾಗಿರುವಾಗ ಕೋಪ ಬಂದರೂ ಅದರಿಂದ ಉಂಟಾಗುವ ಪರಿಣಾಮವು ಅನಂತಾನುಬಂಧಿ ಮತ್ತು ಅಪ್ರತ್ಯಾಖ್ಯಾನ ಅಂದರೆ ಕಲ್ಲ ಮೇಲೆ, ಭೂಮಿಯ ಮೇಲೆ ಗೆರೆ ಬರೆದಂತೆ ಇರಲೇಬಾರದು. ಭರತ-ಬಾಹುಬಲಿಗಳಿಗೆ ಉಂಟಾದ ಕ್ರೋಧವು ತತ್ಕಾಲದಲ್ಲೇ ಶಮನ ಹೊಂದಿತು ಅವರು ಪರಸ್ಪರ ಪಶ್ಚಾತ್ತಾಪಪಟ್ಟು ಶಾಂತರಾದರು. ಅದುದರಿಂದಲೇ-

"ಸತ್ಪುರುಷರ ಕಡುಕೋಪವು ತಾಪವು
ನಿಮಿಷಾರ್ಧದಿ ಮರೆತ್ಹೋಗುವುದು ।
ನಿಷ್ಫಲ ಭ್ರಾಂತಿಯ ಮೂರ್ಖರ ದ್ವೇಷವು
ಭವಭವದಲಿ ಸಹ ನಿಲ್ಲುವುದು ॥

ಎಂಬ ನೀತಿಯ ಮಾತು ಇಲ್ಲಿ ಸಮಂಜಸವಾಗುವುದು.

ಸತ್ಪುರುಷರಿಗೆ ಬಂದ ಕೋಪವು ಕ್ಷಣ ಕಾಲದಲ್ಲೇ ಶಾಂತವಾಗುವುದು. ಅನಂತಾನುಬಂಧಿ ಪರಿಣಾಮ ಜೀವಿಯು ಮಿಥ್ಯಾದೃಷ್ಟಿಯು ಆಗುತ್ತಾನೆಂಬ ಮಾತು ಸಿದ್ಧಾಂತ.

ಮಾತೆತ್ತಿದರೆ ಕೋಪಗೊಳ್ಳುವವನು ತನ್ನ ಮನಸ್ಸಿನ ನೆಮ್ಮದಿಯನ್ನು ಕಳೆದುಕೊಂಡು ತತ್ಕಾಲದಲ್ಲಿಯೇ ಹುಚ್ಚನಂತಾಗುತ್ತಾನೆ.

ಅನಂತಾನುಬಂಧಿ ಕ್ರೋಧಿಗೆ ದುಃಖನಾಶವಾಗಲೀ, ಕರ್ಮಕ್ಷಯವಾಗಲೀ, ಬೋಧಿಲಾಭವಾಗಲೀ, ಸಮಾಧಿಮರಣವಾಗಲೀ, ಸಮ್ಯಕ್ತ್ವವಾಗಲೀ ಉಂಟಾಗುವುದಿಲ್ಲ.

ಅಪ್ರತ್ಯಾಖ್ಯಾನಾವರಣ ಕ್ರೋಧಿಗೆ ಅಣುವ್ರತವನ್ನು ಪಾಲಿಸಲಾಗುವುದಿಲ್ಲ. ಪ್ರತ್ಯಾಖ್ಯಾನಾವರಣ ಕ್ರೋಧೀ ಜೀವಿಯು ಸಕಲ ಚಾರಿತ್ರ ಅಂದರೆ ಮಹಾವ್ರತವನ್ನು ಪಾಲಿಸಲಾಗುವುದಿಲ್ಲ. ಅಂದರೆ ಜ್ಞಾನ, ಧ್ಯಾನ, ತಪಾಚರಣೆಯಲ್ಲಿ ಮನಸ್ಸು ಸ್ಥಿರವಿರುವುದಿಲ್ಲ. ಸಂಜ್ವಲನ ಕ್ರೋಧವಿದ್ದರೂ ಕೇವಲಜ್ಞಾನ ಉಂಟಾಗುವುದಿಲ್ಲ. ಏಕೆಂದರೆ ಜ್ಞಾನವು ಆತ್ಮನ ಗುಣ. ಜ್ಞಾನವೇ ಆನಂದ. ಜ್ಞಾನವೇ

ಸುಖವಾಗಿರುವುದರಿಂದ ಆತ್ಮನ ಸ್ವಭಾವವಾದ ಸತ್ ಚಿತ್ ಆನಂದವನ್ನು ಹೊಂದಲು ಸ್ವಲ್ಪವೂ ಕಲಂಕವಿರಬಾರದಾದ್ದರಿಂದ ಸರ್ವಜ್ಞ ಪದವಿಗೇರಲು ಜಿತಕ್ರೋಧನೂ, ಜಿತಾಮಿತ್ರನೂ, ಜಿತಕ್ಲೇಶನೂ, ಜಿತಾಂತಕನೂ ಆಗಲೇಬೇಕು.

ಶ್ರೀ ನೇಮಿಚಂದ್ರ ಸಿದ್ಧಾಂತಚಕ್ರವರ್ತಿಗಳು ತಮ್ಮ ಗೊಮ್ಮಟಸಾರ ಗ್ರಂಥದ ಕರ್ಮಕಾಂಡದಲ್ಲಿ ಸಂಜ್ವಲನ ಕ್ರೋಧದ ಸಂಸ್ಕಾರವು ಒಂದು ಅಂತರ್‌ಮುಹೂರ್ತವಿರುತ್ತದೆಂದೂ, ಪ್ರತ್ಯಾಖ್ಯಾನಕ್ರೋಧದ ಸಂಸ್ಕಾರವು ಹದಿನೈದು ದಿನಗಳವರೆಗೆ ಇರುತ್ತದೆಂದೂ, ಅಪ್ರತ್ಯಾಖ್ಯಾನ ಕ್ರೋಧದ ಸಂಸ್ಕಾರವು ಆರು ತಿಂಗಳವರೆಗೆ ಇರುತ್ತದೆಂದೂ, ಅನಂತಾನುಬಂಧಿ ಕ್ರೋಧದ ಸಂಸ್ಕಾರವು ಸಂಖ್ಯಾತ, ಅಸಂಖ್ಯಾತ, ಅನಂತ ಭವಗಳವರೆಗೆ ಇರುತ್ತದೆಂದೂ ವಿವರಿಸಿದ್ದಾರೆ. ಆದುದರಿಂದ ಯಾರ ಕ್ರೋಧವಾಗಲೀ, ಮತ್ತೊಬ್ಬರ ಮೇಲೆ ದ್ವೇಷ, ಅಸೂಯೆ, ಮತ್ಸರವಾಗಲೀ ಆರು ತಿಂಗಳ ಮೇಲಿದ್ದರೆ, ಅವರಲ್ಲಿ ಅನಂತಾನುಬಂಧೀ ಕಷಾಯದ ಉದಯವಿದೆ ಎಂದೂ, ಅದರಿಂದ ವಿವೇಕಶೂನ್ಯನೂ, ಪಾಪಕರ್ಮಾಚಾರಿಯೂ, ಮಿಥ್ಯಾದೃಷ್ಟಿಯೂ ಆಗಿ ಅನಂತ ಭವಗಳವರೆಗೂ ನರಕಾದಿ ದುಃಖವನ್ನು ಅನುಭವಿಸುವ ಪಾಪಲೇಪನ ಮಾಡಿಕೊಳ್ಳುವನೆಂಬ ಸಿದ್ಧಾಂತವಿದೆ.

ಮಿಥ್ಯಾತ್ವದಿಂದ ಜೀವನು ತನಗೊದಗುವ ಸುಖದುಃಖಗಳಿಗೆ ಮೂಲ ಕಾರಣವನ್ನು ತಿಳಿಯಲಾರನು. ಆದುದರಿಂದ ಸ್ವಲ್ಪ ಕಾರಣಕ್ಕೆಲ್ಲ ಉದ್ವೇಗಗೊಂಡು ಕ್ರೋಧದಿಂದ ಹುಚ್ಚನಂತೆ ವರ್ತಿಸುತ್ತಾನೆ. ಆದರೆ ಸಮ್ಯಗ್‌ದೃಷ್ಟಿಯು ತನಗೊದಗುವ ಸುಖ-ದುಃಖಗಳಿಗೆ ಮೂಲ ಕಾರಣ ತನ್ನ ಪೂರ್ವೋಪಾರ್ಜಿತ ಕರ್ಮಫಲವೇ ಎಂದು ತಿಳಿದು ಬಂದುದನ್ನು ಸಹನೆಯಿಂದ ಅನುಭವಿಸಿ, ಸದಾ ಶಾಂತ ಸ್ವಭಾವಿಯಾಗಿರುತ್ತಾನೆ.

ಒಂದು ಕಡೆ ಶ್ರೀ ಅಮಿತಗತ್ಯಾಚಾರ್ಯರು ಹೇಳಿದ್ದಾರೆ -
ಸ್ವಯಂ ಕೃತಂ ಕರ್ಮ ಯದಾತ್ಮನಾ ಪುರಾ ।
ಫಲಂ ತದೀಯಂ ಲಭತೇ ಶುಭಾಶುಭಂ ॥

ಅಂದರೆ ಈ ಜೀವನು ಪೂರ್ವ ಭವಗಳಲ್ಲಿ ಸ್ವತಃ ಯಾವ ಕರ್ಮಗಳನ್ನು ಮಾಡಿದ್ದನೋ ಅದರ ಫಲವನ್ನೀಗ ಅನುಭವಿಸುತ್ತಾನೆ.

ಅಂದಮೇಲೆ ಬಾಹ್ಯ ಕಾರಣಕ್ಕಾಗಿ ಅಥವಾ ಇಷ್ಟವಿಯೋಗ, ಅನಿಷ್ಟ ಸಂಯೋಗವಾದಾಗಲಾಗಲೀ, ತನ್ನ ಮನದಲ್ಲಿದ್ದುದು ಈಡೇರಲಿಲ್ಲವೆಂದಾಗಲೀ, ತನ್ನ ಮಾತು, ದರ್ಪ ನಡೆಯಲಿಲ್ಲವೆಂದಾಗಲೀ ವೃಥಾ ಸಿಟ್ಟಿಗೆದ್ದರೆ ಅಗ್ನಿಗೆ



ತುಪ್ಪವನ್ನು ಸುರಿದಂತೆ ಆಗಿ ಪಾಪಂ ಪಾಪಾನುಬಂಧಿಯಾಗುತ್ತದೆ. ಅಂತಹವರು ತನಗೆ ಪುಣ್ಯ ತೀರಿದೆ, ಪಾಪೋದಯವಾಗಿದೆ, ಈಗ ಎಚ್ಚರಿಕೆಯಿಂದ ವರ್ತಿಸಬೇಕು ಎಂದು ಸಮಾಧಾನಿಯಾಗಿರಬೇಕು, ಹೀಗಿರುವವರು ಬಹು ಅಪರೂಪ.

ಶೀಲದಲ್ಲಿ ಕಲಂಕಿಯೆಂದು ವೃಥಾ ಆರೋಪಿಸಿ, ಶ್ರೀರಾಮನು ಗರ್ಭವತಿಯಾದ ಸೀತೆಯನ್ನು ಕಾಡುಪಾಲು ಮಾಡಿದಾಗ ಆ ಮಹಾಸತಿಯು ತನಗೊದಗಿದ ಅನಿಷ್ಟ ಸ್ಥಿತಿಯನ್ನು ನುಂಗಿಕೊಂಡು ಇದು ತನ್ನ ಪೂರ್ವ ಉಪಾರ್ಜಿತವೆಂದು ತಿಳಿದು, ತನ್ನ ಪತಿ ಶ್ರೀರಾಮನ ಮೇಲೆ ಯಾವ ಆರೋಪಣೆಯನ್ನೂ ಮಾಡದೆ ಹಿತವನ್ನೇ ಬಯಸಿದಳು. 'ಲೋಕಾಪವಾದಕ್ಕಾಗಿ ತನ್ನ ಪತಿದೇವರು ತನ್ನನ್ನು ತ್ಯಾಗ ಮಾಡಿದ ಹಾಗೆ ಕಲ್ಯಾಣಕಾರಿಯಾದ ಸದ್ಧರ್ಮ (ಜೈನಧರ್ಮ)ವನ್ನು ಯಾವ ಸಂದರ್ಭದಲ್ಲೂ ತ್ಯಾಗ ಮಾಡದಿರಲಿ' ಎಂದು ತನ್ನನ್ನು ಕಾಡಿಗೆ ಕರೆದು ತಂದು ಬಿಟ್ಟ ಸೇನಾಪತಿಯ ಸಂಗಡ ಸಂದೇಶವನ್ನು ಕಳುಹಿಸುತ್ತಾಳೆ. ದಿಕ್ಕು ದಿವಾಳಿಯಾಗಿ ಅನಾಥಳಾದ ಆ ಸಹನಶೀಲಶಿರೋಮಣಿ ಸೀತೆಯು ಕುಪಿತಳಾಗಿ ತನ್ನ ಪತಿ ಮತ್ತು ವಂಶವನ್ನು ಬೈದು, ಶಪಿಸಿ, ತನ್ನ ಮೇಲೇ ತಾನು ಬೇಜಾರಾಗಿ ಆತ್ಮಹತ್ಯೆ ಮಾಡಿಕೊಳ್ಳಬಹುದಿತ್ತು. ಆದರೆ ಆಕೆ ಕ್ಷಮಾಗುಣದಿಂದ ಇದ್ದು ಬಂದದ್ದನ್ನೆಲ್ಲ ಸಹಿಸಿದಳು.

ಹಿಂದೊಮ್ಮೆ ದಿಗಂಬರ ಯತಿಯಾಗಿದ್ದ ದ್ವೈಪಾಯನ ಮುನಿಯು ದ್ವಾರಾವತಿಯ ಪಕ್ಕದಲ್ಲಿ ಆತಪನ ಯೋಗದಿಂದಿದ್ದಾಗ ಯಾರೋ ಕುಡುಕರಾದ ಯಾದವರು ತನ್ನನ್ನು ಹೀಯಾಳಿಸಿದರೆಂಬ ಕಾರಣದಿಂದ ಕೂಡಲೇ ಕ್ರೋಧದಿಂದ ಉರಿದೆದ್ದು ತನ್ನ ತಪೋಬಲದಿಂದ ಶಾಪವಿತ್ತು ಯಾದವರ ಸಹಿತ ದ್ವಾರಾವತಿಯನ್ನು ಸುಟ್ಟುಹಾಕಿ ಆ ಜ್ವಾಲೆಯಲ್ಲಿ ತಾನೂ ಬೆಂದು ಸೀದಾ ಅನಂತಾನುಬಂಧೀ ಕಷಾಯದ ಪಾಪದಿಂದ ನರಕದಲ್ಲಿ ಬಿದ್ದನು. ಆತನಿಗೆ ಮೈ ಬತ್ತಲೆಯಾಗಿದ್ದರೂ ಮನವು ಕತ್ತಲೆಯಾಗಿತ್ತು. ಬಹುಕಾಲ ಮಾಡಿದ್ದ ತಪವೆಲ್ಲ ಕ್ರೋಧದ ಬೆಂಕಿಗೆ ಆಹುತಿಯಾಗಿ ನಿಷ್ಫಲವಾಯಿತು.

ಇಬ್ಬರು ಭಿಕ್ಷುಕರು ಎಲ್ಲಿಯೋ ಜೊತೆಯಾಗಿ ಒಂದೂರಿಗೆ ಭಿಕ್ಷೆಗೆ ಹೋದರು. ಅಂದು ಅವರಿಗೆ ಸ್ವಲ್ಪವೂ ಭಿಕ್ಷೆ ಸಿಗಲಿಲ್ಲ. ಅಂದು ರಾತ್ರಿ ಒಂದು ಹಾಳು ಮಂಟಪದಲ್ಲಿ ಉಳಿದುಕೊಂಡು ಹೀಗೇ ಮಾತನಾಡುತ್ತ ಒಬ್ಬನು ಇನ್ನೊಬ್ಬನನ್ನು ಹೀಯಾಳಿಸುತ್ತ, "ನಾನೆಂದೂ ಹೀಗೆ ಹಸಿವಿನಿಂದ ಮಲಗಲಿಲ್ಲ. ಇಂದು ನಿನ್ನಿಂದಾಗಿ ನನಗೆ ಭಿಕ್ಷೆ ದೊರೆಯಲಿಲ್ಲ, ನೀನು ನಿರ್ಭಾಗ್ಯ. ನಿನ್ನ

ಸಂಗಡವಿದ್ದರೆ ನನಗೆ ಇನ್ನೂ ಏನೇನು ಆಗುವುದೋ, ನಡಿ ಆಚೆ.'' ಎಂದು ಕೋಪಿಸಿಕೊಂಡು ಆತನನ್ನು ಹೊಡೆದು, ಬೈದು ಆಚೆ ತಳ್ಳಿದನು. ಪಾಪ! ಹಿಡಿದ ಜಡಿಮಳೆಯಲ್ಲಿ ಆತ ಎಲ್ಲಿಯೋ ಬೇರೆ ಕಡೆಗೆ ಹೊರಟು ಹೋದ. ಆದರೆ ಸ್ವಲ್ಪ ಹೊತ್ತಿನಲ್ಲೇ ಬಿರುಮಳೆಯಿಂದ ಆ ಹಾಳು ಮಂಟಪವು ಮುರಿದು ಬಿತ್ತು. ಒಬ್ಬನೇ ನಿದ್ದೆ ಮಾಡುತ್ತಿದ್ದ ಆ ಕೋಪಿ ಭಿಕ್ಷುಕನು ಅದರಡಿ ಸಿಕ್ಕಿ ಸತ್ತ. ಇವನ ಸಾವು ಮತ್ತೊಬ್ಬನ ಉಳಿವು ಅವರವರು ಮಾಡಿದ ಕರ್ಮಫಲವೇ ಹೊರತು ಬೇರಲ್ಲ. ಇದನ್ನೆಲ್ಲ ಅರಿತ ಮೇಲೂ ಅವರು ನನಗೆ ಸುಖವನ್ನುಂಟುಮಾಡಿದರು, ಇವರಿಂದ ನನಗೆ ದುಃಖವುಂಟಾಯಿತು ಎಂದು ಹಾರಾಡಿ ಕ್ರೋಧವಶನಾಗುವುದು ಸರಿಯಲ್ಲ.

ಆದುದರಿಂದ ಆತ್ಮನ ನೈಜ ಸ್ವಭಾವವಾದ ಜ್ಞಾನ, ಸುಖ, ಶಾಂತಿಗಳನ್ನು ಹಾಳು ಮಾಡುವ ಕ್ರೋಧವನ್ನು ತ್ಯಜಿಸಿ, ಸ್ವಸ್ವರೂಪವನ್ನು ಪ್ರಕಟಗೊಳಿಸಿ, ಸುಖ-ಶಾಂತಿ ನೆಮ್ಮದಿಗಳನ್ನು ಉಂಟುಮಾಡುವ ಕ್ಷಮಾಗುಣವನ್ನು ಬೆಳಸಿಕೊಳ್ಳಬೇಕು.

ರತ್ನಾಕರ ಕವಿ ಹೇಳಿರುವಂತೆ - "ಕ್ಷಮೆ ಮಾಳ್ಪಂತೆ ವಿರೋಧಮೇಂ ಕೊಡುವುದೇ ಸಂತೋಷಮಂ'' ಸಂತೋಷವನ್ನು ಜೀವನದಲ್ಲಿ ಕಾಣಲು ಕ್ಷಮೆಯನ್ನು ತಾಳಬೇಕು.

ಕ್ಷಮೆ ಎಂದರೆ ಸಹನೆ ಮತ್ತು ತಾಳ್ಮೆ. ಎಲ್ಲಿಯವರೆಗೆ ಸಹನೆ ಇರಬೇಕೆಂದರೆ, ತನ್ನನ್ನು ಯಾರಾದರೂ ಬೈದರೆ, ಇರಲಿ, ಹೊಡೆಯಲಿಲ್ಲವಲ್ಲ ಎಂದೂ, ಹೊಡೆದಲ್ಲಿ, ಹೋಗಲಿ, ಗಾಯವೇನೂ ಆಗಿಲ್ಲವಲ್ಲ ಎಂದೂ, ಗಾಯವಾದರೂ, ಇರಲಿ, ಅಂಗಹೀನವೇನೂ ಆಗಿಲ್ಲವಲ್ಲ ಎಂದೂ, ಪ್ರಾಣ ಹೋಗುವ ಸಂದರ್ಭ ಒದಗಿದರೂ ಹೋಗಲಿ, ಆಯುಷ್ಯ ಕರ್ಮ ಕಳೆಯಿತು, ಶರೀರ ನಾಶವಾಯಿತೇ ವಿನಃ ಆತ್ಮವು ನಾಶವಾಗುವುದಿಲ್ಲ ಎಂದೂ, ತಾಳ್ಮೆಯಿಂದ ಸಹಿಸಿ, ತನಗೆ ಹೀಗೆ ಉಪದ್ರವ ಕೊಟ್ಟವರಲ್ಲೂ ಯಾವ ವೈರವನ್ನೂ ಮಾಡದೆ ಕುಪಿತನಾಗದೆ ಇರುವುದೇ ಕ್ಷಮೆಯು. ಇಂತಹ ಕ್ಷಮೆಯು ಆತ್ಮವಿಶ್ವಾಸೀ ವೀರರಿಗೆ ಉಂಟಾಗುತ್ತದೆಯೇ ವಿನಹ ಹೇಡಿಗಲ್ಲ. "ಕ್ಷಮಾ ವೀರಸ್ಯ ಭೂಷಣಂ'' ಎಂಬಂತೆ.

ಪಾರ್ಶ್ವನಾಥಸ್ವಾಮಿಗೆ ಭವ ಭವದಿಂದಲೂ ಉಪದ್ರವ ಕೊಟ್ಟ ಕಮಠನು ಅಧೋಗತಿಯನ್ನು ಹೊಂದಿದನು. ಅದನ್ನು ಕ್ಷಮಾಗುಣದಿಂದ ಸಹಿಸಿ ಸಹಿಸಿ ಮತ್ತೆ ಅಂತಹ ಯಾವ ದುಃಖವನ್ನೂ ಪಡೆಯದಂಥ ಸಾವನ್ನೇ ಗೆದ್ದು ಜಿನರಾಗಿ,



ಸಿದ್ಧಗತಿಯನ್ನು ಹೊಂದಿದರು ಪಾರ್ಶ್ವನಾಥರು.

ಈ ಕ್ಷಮಾ ಗುಣದ ಮಹಿಮೆಯು ಅಪೂರ್ವವಾದುದು. ಒಂದು ಕಡೆ ಹೇಳಿದ್ದಾರೆ.

ಪುಷ್ಪಕೋಟಿಸಮಂ ಸ್ತೋತ್ರಂ ।
ಸ್ತೋತ್ರಕೋಟಿ ಸಮೋ ಜಪಃ ॥
ಜಪಕೋಟಿ ಸಮಂ ಧ್ಯಾನಂ ।
ಧ್ಯಾನಕೋಟಿಸಮಾ ಕ್ಷಮಾ॥

ಅಂದರೆ, ಕೋಟಿ ಪುಷ್ಪಾರ್ಚನೆಗಿಂತ ಒಂದು ಸ್ತೋತ್ರವು ಸಮವಾದುದು, ಕೋಟಿ ಸ್ತೋತ್ರಕ್ಕಿಂತ ಒಂದು ಸಾರಿ ಜಪ ಮಾಡುವುದು ಸಮ, ಕೋಟಿ ಜಪ ಮಾಡುವುದಕ್ಕಿಂತ ಒಮ್ಮೆ ಧ್ಯಾನ ಮಾಡುವುದು ಸಮ, ಕೋಟಿ ಸಾರಿ ಧ್ಯಾನ ಮಾಡುವುದಕ್ಕಿಂತ ಒಂದು ಸಾರಿ ಕ್ಷಮೆ ಮಾಡುವುದು ಸಮನಾಗಿದೆ. ಎಂದ ಮೇಲೆ ಅಧಿಕ ಪುಣ್ಯರಾಶಿಯನ್ನು ಸೂರೆಗೊಳ್ಳಲು, ಆತ್ಮನ ಸಹಜಾನಂದ ಸೌಖ್ಯದಲ್ಲಿ ಲೀನನಾಗಲು ಕ್ಷಮಾಗುಣವನ್ನು ಮೈಗೂಡಿಸಿಕೊಳ್ಳಬೇಕು. ಹಾಗಂದ ಮಾತ್ರಕ್ಕೆ ಸ್ತೋತ್ರ, ಜಪ, ಧ್ಯಾನಗಳು ನಿಷ್ಫಲವೆಂದಲ್ಲ. ಅವುಗಳನ್ನು ಮಾಡಿ ಮಾಡಿ ಮನವು ಹಣ್ಣಾಗಿ ಈ ಕ್ಷಮಾಗುಣವನ್ನು ಹೊಂದಬೇಕು.

ಕ್ರೋಧವು ಚಾರಿತ್ರ ಮೋಹನೀಯ ಕರ್ಮದ ಪ್ರಕೃತಿಯಾಗಿದೆ. ಆದರಿಂದ ಆತ್ಮನ ಸಂಯಮ ಗುಣದ ಘಾತಾಗುತ್ತದೆ. ಈ ಕ್ರೋಧವನ್ನು ತ್ಯಜಿಸಲು ರಾಗ ದ್ವೇಷ ಭಾವನೆಯನ್ನು ಬಿಟ್ಟು ಕ್ಷಮಾಗುಣಧಾರಿಯಾಗಬೇಕು. ಅದೇ ನಿಜವಾದ ಚಾರಿತ್ರ. ಕ್ಷಮೆಯು ಸಕಲ ಧರ್ಮಗಳಲ್ಲಿ ಉತ್ತಮವೂ ಶ್ರೇಷ್ಠವೂ ಆಗಿದೆ. ತನ್ನ ಜೀವನ ರಂಗದಲ್ಲಿ ಈ ಗುಣವನ್ನು ಸ್ವಲ್ಪ ಸ್ವಲ್ಪವಾಗಿ ಮೈಗೂಡಿಸಿಕೊಳ್ಳದಿದ್ದರೆ ಅಂತಿಮ ಸಮಯದಲ್ಲಿ ಕ್ಷಮೆಯನ್ನು ತಾಳಲಾಗುವುದಿಲ್ಲ.

ಕ್ಷಮೆಯೇ ಧರ್ಮ. ಧರ್ಮಕ್ಕೆ ದಯೆಯೇ ಮೂಲ. ದಯೆಯೇ ಅಹಿಂಸೆ, ಅಹಿಂಸೆಯೇ ಶಾಂತಿ, ಶಾಂತಿಯೇ ಸುಖ, ಸುಖರೂಪದ ಅನುಭವವೇ ಜ್ಞಾನ, ಜ್ಞಾನಿಯೇ ಆತ್ಮ. ಆದುದರಿಂದ ಆತ್ಮನಿರೀಕ್ಷಣೆಗೆ ಮೊದಲು ಕ್ಷಮಾ ಗುಣವನ್ನು ಹೊಂದಬೇಕು. ಆಧ್ಯಾತ್ಮರಸಾನುಭವಿಯಾಗಲು ಕ್ಷಮಾಗುಣ ಧಾರಿಯೇ ಆಗಬೇಕು. ಈ ಕ್ಷಮಾ ಗುಣವನ್ನು ಹೊಂದಲು ದೇವಪೂಜಾದಿಗಳಲ್ಲೂ, ಸಂಯಮ, ದಯೆ, ಕರುಣೆ, ಅನುಕಂಪ ಮುಂತಾದುವುಗಳನ್ನು ತಾಳುತ್ತ ಮಾತೆತ್ತಿದರೆ ದುಡುಕಿ ಸಿಡುಕಿನಿಂದ ಸಿಟ್ಟಾಗಿ ಹುಚ್ಚನಂತಾಗುವುದನ್ನು ಬಿಡಬೇಕು. ಒಂದು ಕಡೆ ಹೇಳಿದ್ದಾರೆ.

ಕ್ರೋಧಮೂಲಂ ಮನಸ್ತಾಪಃ ।
ಕ್ರೋಧಃ ಸಂಸಾರಬಂಧನಂ ।
ಧರ್ಮಕ್ಷಯಕರಃ ಕ್ರೋಧಃ ।
ತಸ್ಮಾತ್ ಕ್ರೋಧಂ ವಿವರ್ಜಯೇತ್ ॥
ಎಂಬಂತೆ ಸರ್ವನಾಶಕರವಾದ ಕ್ರೋಧವನ್ನು ಬಿಡಬೇಕು.
ಕಲ್ಯಾಣಾಲೋಚನ ಸ್ತೋತ್ರದಲ್ಲಿ ಹೇಳಿದ್ದಾರೆ -
ಸಂಪ್ರತಿ ಜಿನವರ ಧರ್ಮಂ ।
ಲಬ್ಧೋಸಿ ತ್ವಂ ವಿಶುದ್ಧಯೋಗೇನ ।
ಕ್ಷಮಸ್ವ ಜೀವಾನ್ ಸರ್ವಾನ್ ।
ಪ್ರತ್ಯೇಕಸಮಯೇ ಪ್ರಯತ್ನೇನ ॥

ಅಂದರೆ - ಎಲೈ ಜೀವನೇ ! ಈಗ ಮನೋವಾಕ್ ಕಾಯ ಶುದ್ಧಿಯಿಂದ ಜನ್ಮವನ್ನು ಸಾರ್ಥಕ ಮಾಡುವ ಜಿನಧರ್ಮಿಯಾಗಿದ್ದೀಯೇ. ಆದುದರಿಂದ ಪ್ರತಿಯೊಂದು ಸಮಯದಲ್ಲೂ ಪ್ರಯತ್ನ ಪೂರ್ವಕವಾಗಿ ಸಕಲರನ್ನೂ ಕ್ಷಮಿಸು. ನೀನೂ ಕ್ಷಮಾಗುಣವನ್ನು ಹೊಂದು ಕ್ಷಮಾಗುಣವನ್ನು ಮೈಗೂಡಿಸಿಕೊಳ್ಳಲು ಬಾರಿ ಬಾರಿಗೂ ಈ ಗಾಥೆಯನ್ನು ಪಠಿಸುತ್ತಿದ್ದರೆ ಉತ್ತಮ

"ಖಿಮ್ಮಾಮಿ ಸವ್ವಜೀವಾಣಂ ।
ಸವ್ವೇ ಜೀವಾ ಖಿಮಂತು ಮೇ ।
ಮೇತ್ತಿ ಮೇ ಸವ್ವ ಭೂದೇಸು ।
ವೇರಂ ಮಜ್ಝಂ ಣ ಕೇಣ ವಿ ॥"

ಅಂದರೆ ನಾನು ಎಲ್ಲ ಜೀವಿಗಳಲ್ಲೂ ಕ್ಷಮಾಯಾಚನೆ ಮಾಡುವೆನು. ಎಲ್ಲ ಜೀವಿಗಳೂ ನನ್ನನ್ನು ಕ್ಷಮಿಸಲಿ. ನನಗೆ ಎಲ್ಲ ಜೀವಿಗಳಲ್ಲೂ ಮಿತ್ರತ್ವವಿದೆ. ಯಾರಲ್ಲೂ ನಾನು ಕ್ರೋಧ ಮಾಡುವುದಿಲ್ಲ.

ಈ ಶುಭ ಭಾವನೆಯ ಮುಖೇನ ಕ್ಷಮಾಗುಣವನ್ನು ಹೊಂದಿ ಕಾರ್ಯರೂಪದಲ್ಲಿ ತೋರಿಸುವುದು ಉತ್ತಮ.

## 43. ಅಭಿನವ ವಾಗ್ದೇವಿ ಕಂತಿ

ಕನ್ನಡ ಸಾಹಿತ್ಯಾಭಿವೃದ್ಧಿಗೆ ಜೈನ ಕವಿಗಳ ಕೊಡುಗೆ ಅಪಾರವಾದುದು. ಪಂಪ ರನ್ನ ಜನ್ನಾದಿಗಳು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿ ಅನ್ಯಭಾಷೆಗಳಿಗೆ



ಸರಿಮಿಗಿಲೆನಿಸಲು ಶ್ರಮಿಸಿದ್ದಾರೆ. ಆದರೆ ಜೈನ ಮಹಿಳಾಮಣಿಗಳು, ವಿದುಷಿಯರು, ಕವಯತ್ರಿಯವರು ಸಾಹಿತ್ಯಕ್ಷೇತ್ರದಲ್ಲಿ ಹೆಚ್ಚಾಗಿ ಕಾಣಬರುತ್ತಿಲ್ಲ. ಅವರು ಪ್ರಸಿದ್ಧಿಗೆ ಬರಲು ಅಥವಾ ಕಾವ್ಯ ರಚನೆಮಾಡಲು ಏನು ಅಡಚಣೆ ಇತ್ತೋ ಗೊತ್ತಾಗುತ್ತಿಲ್ಲ. ಆದರೆ 12 ನೇ ಶತಮಾನದಲ್ಲಿದ್ದ ಕಂತಿ ಎಂಬ ಜೈನ ಕವಯತ್ರಿಯೇ ಮೊದಲಿಗಳು ಎಂದು ಹೇಳಬಹುದು. ಜೈನ ಮಹಿಳೆಯರು ಇನ್ನಿತರ ಕ್ಷೇತ್ರಗಳಲ್ಲಿ ಹಲವು ಮಂದಿ ಹೆಸರು ಗಳಿಸಿದ್ದಾರೆ - ಈ ಕ್ಷೇತ್ರದಲ್ಲಿ ಏನು ಮಡಿವಂತಿಕೆ ಇತ್ತೋ ಕಾಣದಾಗಿದೆ.

ಕಂತಿಯು 12ನೇ ಶತಮಾನದಲ್ಲಿ ಆಳಿದ ದೋರ ಸಮುದ್ರದ ರಾಜ ವೀರ ಬಲ್ಲಾಳನ ಆಸ್ಥಾನದಲ್ಲಿದ್ದ ಕವಿಯತ್ರಿ ಎಂದು ತಿಳಿದುಬರುತ್ತದೆ. 13ನೇ ಶತಮಾನದಲ್ಲಿ ಪಂಪನಷ್ಟೇ ಪ್ರಸಿದ್ಧ ಅಭಿನವ ಪಂಪನೆಂದು ವಿಖ್ಯಾತನಾದ ನಾಗಚಂದ್ರನು ಹೊಯ್ಸಳ ರಾಜಾಸ್ಥಾನದಲ್ಲಿದ್ದನೆಂದೂ ಆಗ ತಲಕಾಡು ಹೊಯ್ಸಳರ ಅಧೀನದಲ್ಲಿತ್ತೆಂದೂ ಅದುಜೈನ ಧರ್ಮದ ಕೇಂದ್ರವಾಗಿತ್ತೆಂದೂ ತಿಳಿದು ಬಂದಿದೆ. ನಾಗಚಂದ್ರನು ಅಭಿನವ ಪಂಪನೆಂಬ ಹೆಸರಿನಲ್ಲಿ ಮಲ್ಲಿನಾಥ ಪುರಾಣ ಮತ್ತು ಜೈನ ರಾಮಾಯಣವೆಂಬ (ರಾಮಚಂದ್ರ ಚರಿತ ಪುರಾಣ) ಎರಡು ಸುಪ್ರಸಿದ್ಧ ಚಂಪೂಕಾವ್ಯಗಳನ್ನು ರಚಿಸಿದ್ದಾನೆ. ಕಂತಿಯು ಈ ಕವಿಯ ಸಮಕಾಲೀನಳಾಗಿದ್ದಳು.

ಕಂತಿಯ ವಿಚಾರವಾಗಿ ಹೆಚ್ಚಿಗೆ ಮಾಹಿತಿ ದೊರೆಯುತ್ತಿಲ್ಲವಾದರೂ ನಾಗಚಂದ್ರ ಮತ್ತು ಬಾಹುಬಲಿ ಕವಿಗಳಿಂದ ಅಲ್ಪಸ್ವಲ್ಪ ವಿಷಯಗೊತ್ತಾಗುತ್ತದೆ. ರಾಜಾವಳೀಕಥೆಯಲ್ಲಿ ದೇವಚಂದ್ರನೆಂಬ ಕವಿಯು ಕಂತಿಯ ಬಗ್ಗೆ ಸ್ವಲ್ಪ ಬೆಳಕು ಚೆಲ್ಲಿದ್ದಾನೆ. ದೋರರಾಯನ ಕಾಲದಲ್ಲಿ ಕಂತಿಯು ಒಬ್ಬ ಗುರುವಿನ ಶಿಷ್ಯಳಾಗಿದ್ದಳು. (ಬಹುಶಃ ಆ ವೇಳೆಗೆ ಆಕೆ ಜೈನ ಸನ್ಯಾಸಿನಿಯಾಗಿರಬೇಕು ಅಥವಾ ಬಾಲ ವಿಧವೆಯಾಗಿದ್ದಿರಬೇಕು. ಅನಾಥಳಾಗಿ ಆ ಅಧ್ಯಾಪಕನ ಮನೆಯಲ್ಲಿ ಪರಿಚಾರಕಿಯಾಗಿದ್ದಿರಬೇಕು) ಆ ಗುರುವು ಆಯುರ್ವೇದ ರಸವಿದ್ಯಾ ಪರಿಣತನಾಗಿದ್ದನು. ಮಂದಬುದ್ಧಿಯ ತನ್ನ ವಿದ್ಯಾರ್ಥಿಗಳಿಗೆ ಸೂಕ್ಷ್ಮಬುದ್ಧಿ ಯುಂಟಾಗುವಂತಹ 'ಜ್ಯೋತಿಷ್ಮತಿ' ಎಂಬ ತೈಲವನ್ನು ತಯಾರಿಸಿ ಒಂದು ಪಾತ್ರೆಯಲ್ಲಿಟ್ಟಿದ್ದನು. ಆ ತೈಲದ ಒಂದರ್ಧ ಹನಿಯನ್ನು ಸೇವಿಸಿದರೆ ಸಾಕು, ಎಂಥಹ ಮಂದಮತಿಗಳೂ ಕೂಡ ಸೂಕ್ಷ್ಮಮತಿಗಳಾಗುತ್ತಿದ್ದರು. ಏನೂ ಅರಿಯದ ಕಂತಿಯು ವಿಪರೀತ ಕೆಲಸಮಾಡಿ ಬಾಯಾರಿದಾಗ ನೀರಿದ್ದಂತೆಯೇ ಇದ್ದ ಆ ತೈಲವನ್ನೆಲ್ಲಾ ಕುಡಿದಳು. ಮೊದಮೊದಲು ಅದು ಸಿಹಿಯಾಗಿದ್ದುದರಿಂದ ಅದು ಪಾಕವೋ ಅಥವಾ ಷರಬತ್ತೋ ಇರಬೇಕೆಂದು ಕುಡಿದುಬಿಟ್ಟಳು. ಆದರೆ ಸ್ವಲ್ಪ ಹೊತ್ತಿನಲ್ಲೇ ಆಕೆಯ ಶರೀರದಾದ್ಯಂತ ಉರಿ ಪ್ರಾರಂಭವಾಯಿತು. ಆಕೆ ಸಂಕಟವನ್ನು

ತಾಳಲಾರದೆ ಪಕ್ಕದಲ್ಲೇ ಇದ್ದ ಒಂದು ಬಾವಿಗೆ ಹಾರಿಕೊಂಡಳು. ಆದರೆ ಅದರಲ್ಲಿ ನೀರು ಆಳವಾಗಿರಲಿಲ್ಲ. ಕುತ್ತಿಗೆಯ ವರೆಗೆ ಮಾತ್ರವಿತ್ತು. ದಿಕ್ಕುತೋಚದ ಆಕೆ ಣಮೋಕಾರವನ್ನು ಹೇಳುತ್ತಾ ಇದ್ದಳು. ಕೆಲಕಾಲಾನಂತರ ಆಕೆಗೆ ಆಗುತ್ತಿದ್ದ ಸಂಕಟ ಹಾಗೂ ಉರಿ ಮಾಯವಾಗಿ ಒಂದು ರೀತಿಯ ಆನಂದ, ಕಾಂತಿ, ಬುದ್ಧಿಯ ಪಟುತ್ವ ಉಂಟಾಯಿತು. ಅಲ್ಲಿಂದಲೇ ಆಕೆ ಹಲವು ಪದ್ಯ, ಸ್ತೋತ್ರಗಳನ್ನು ಕಾವ್ಯಮಯವಾಗಿ ಹೇಳತೊಡಗಿದಳು. ಇದ್ದಕ್ಕಿದ್ದಂತೆ ಕಂತಿಯು ಹೀಗೆ ಆಡುತ್ತಿರುವುದನ್ನು ಗಮನಿಸಿದ ಗುರುಗಳು ಒಂದು ವಿವರವನ್ನು ತಿಳಿದು ಚಕಿತರಾದರು. ಆ ವೇಳೆಗೆ ಈ ವಿಷಯ ರಾಜಾಸ್ಥಾನಕ್ಕೂ ಮುಟ್ಟಿರುತ್ತದೆ. ಅಲ್ಲಿದ್ದ ನಾಗಚಂದ್ರ ಕವಿಯು ಬಾವಿಯ ಬಳಿಗೆ ಓಡಿ ಬರುತ್ತಾನೆ. ಆಕೆಯನ್ನು ಮೇಲೆತ್ತಿಸಿ ಉಪಚರಿಸುತ್ತಾನೆ. ಆಕೆಯಲ್ಲಿ ಸಹಸ್ರಾರು ಪ್ರಶ್ನೆಗಳನ್ನು ಕೇಳುತ್ತಾನೆ. ಕಂತಿಯು ಅವೆಲ್ಲಕ್ಕೂ ಸಮರ್ಪಕವಾದ ಉತ್ತರವನ್ನು ಪದ್ಯರೂಪದಲ್ಲಿ ನೀಡುತ್ತಾಳೆ. ನಾಗಚಂದ್ರನು ಚಕಿತನಾಗಿ ತಲೆದೂಗುತ್ತಾನೆ. ಪುಣ್ಯವಶಾತ್ ತೈಲದ ನಿಮಿತ್ತವಾದರೂ ಜ್ಞಾನಾವರಣೀಯ ಕರ್ಮದ ಕ್ಷಯೋಪಶಮವಾಗಿ ನಿನ್ನಲ್ಲಿ ಣಮೋಕಾರ ಮಂತ್ರ ಮಹಿಮೆಯಿಂದ ಅಪೂರ್ವ ಜ್ಞಾನ ಉಂಟಾಗಿದೆ ಎಂದು ಹೇಳಿ ಆಕೆಯನ್ನು ಹಲವು ವಿಧದಲ್ಲಿ ಪರೀಕ್ಷಿಸಿ 'ಅಭಿನವವಾಗ್ದೇವಿ' ಎಂದು ಹೊಗಳಿ ಪದವಿಯಿತ್ತು ರಾಜಾಸ್ಥಾನಕ್ಕೆ ಕರೆದೊಯ್ದು ರಾಜನಿಗೂ ಸಭೆಗೂ ಪರಿಚಯಮಾಡಿಕೊಡುತ್ತಾನೆ. ಅಂದಿನಿಂದ ಕಂತಿಯು ಆಸ್ಥಾನದಲ್ಲಿ ಮನ್ನಣೆ ಪಡೆದು ಕವಯಿತ್ರಿ, ವಿದುಷಿಯಾಗಿರುತ್ತಾಳೆ.

ತನ್ನ ಉನ್ನತಿಗೆ ಕಾರಣರಾದ ಗುರುಗಳನ್ನೂ ನಾಗಚಂದ್ರನನ್ನೂ ತುಂಬಾ ಗೌರವದಿಂದ ಕಂಡು ವಿಧೇಯಳಾಗಿಯೇ ಇರುತ್ತಾಳೆ. ಹೀಗಿದ್ದರೂ ಕವಿತ್ವಕ್ಕೆ ಸಂಬಂಧಿಸಿದಂತೆ ಕಂತಿಗೂ ನಾಗಚಂದ್ರನಿಗೂ ಆಗಾಗ್ಗೆ ವಾಗ್ಯುದ್ಧಗಳೇ ಆಗಿ ಬಿಡುತ್ತವೆ. ಆ ಕಾಲದಲ್ಲಿ ಕಂತಿಯು ನಾಗಚಂದ್ರನಿಗೆ ಸರಿಮಿಗಿಲೆನಿಸಿ ನಿಂತವಳು. ಒಂದು ರೀತಿಯಲ್ಲಿ ಕಂತಿಯಿಂದ ನಾಗಚಂದ್ರನಿಗೆ ಕೀರ್ತಿಯೂ, ನಾಗಚಂದ್ರನಿಂದ ಕಂತಿಗೆ ಗೌರವವೂ ದೊರೆತಿದ್ದವು. ಹೀಗಾಗಿ ಕಂತಿ,ನಾಗಚಂದ್ರರು ಮಹಾ ಪ್ರತಿಭಾನ್ವಿತರೂ ಮಹಾ ಪಂಡಿತರೂ ಆಗಿದ್ದರು, ಈ ಇಬ್ಬರೂ ಜೈನ ಧರ್ಮೀಯರೇ ಆಗಿದ್ದರು. ಕಾಲ 1104-1141. ಅಭಿನವ ಪಂಪನೆಂದು ಹೆಸರು ಪಡೆದಿದ್ದ ನಾಗಚಂದ್ರನಿಗೆ ತನ್ನ ಕಾವ್ಯದ ಮತ್ತು ಕವಿತಾಶಕ್ತಿಯ ಬಗ್ಗೆ ಹೆಮ್ಮೆ ಇತ್ತು. ಇದನ್ನು ತಗ್ಗಿಸಿ ಆತನ ಉನ್ನತಿಗೆ ಕಾರಣಳಾದವಳು ಕಂತಿ ಎಂದು ಹೇಳಬಹುದು.



ಇಷ್ಟು ವಿಖ್ಯಾತಳಾಗಿದ್ದ ಕಂತಿಯಿಂದ ಹಲವು ಕಾವ್ಯಗಳು ರಚನೆಯಾಗಿದ್ದಿರಬೇಕು. ಆದರೆ ಅವಾವೂ ದೊರೆತಿಲ್ಲ. ಕಂತಿ ಪಂಪರ ಸಮಸ್ಯೆ ಎಂಬ ಖಂಡ ಕಾವ್ಯ ಮಾತ್ರ ದೊರೆತಿರುವುದರಿಂದ ಆಕೆಯ ಪ್ರತಿಭೆಯನ್ನು ಅರಿಯಲು ಸಾಧ್ಯವಾಯಿತು. ಈ ಸಮಸ್ಯೆಗಳಾದರೂ ಸಂಗ್ರಹಿಸಿ ಬರೆದಂತಿವೆ. ಈ ಸಮಸ್ಯೆಗಳೆಲ್ಲಾ ಒಗಟಿನಂತೆಯೂ. ಪ್ರಶ್ನೋತ್ತರ ರೂಪವಾಗಿಯೂ, ಹಾಸ್ಯಮಯವಾಗಿಯೂ ಕಾವ್ಯಮಯ ಪ್ರೌಢ ಶೈಲಿಯಲ್ಲಿದ್ದು ತುಂಬಾ ಅರ್ಥಗರ್ಭಿತವಾಗಿವೆ. ಆಗಾಗ್ಯೇ ಕಂತಿಗೂ ನಾಗಚಂದ್ರನಿಗೂ ವಿನೋದಕ್ಕೋ ಅಥವಾ ಪರಸ್ಪರ ಕೀಟಲೆಗೋ, ಸ್ಪರ್ಧೆಗೋ ವಾದವಿವಾದಗಳು ನಡೆಯುತ್ತಿದ್ದವು, ಇಬ್ಬರೂ ಪಂಡಿತರೂ ವಾಗ್ಮಿಗಳೂ ಆಗಿದ್ದುದರಿಂದ ಪರಸ್ಪರ ಒಡ್ಡುತ್ತಿದ್ದ ಸಮಸ್ಯೆಗಳನ್ನು ಲೀಲಾ ಜಾಲವಾಗಿ ಬಿಡಿಸಿ ರಾಜಾಸ್ಥಾನದ ಸಭಿಕರನ್ನು ನಗೆಗಡಲಿನಲ್ಲಿ ಮುಳುಗಿಸುತ್ತಿದ್ದರು. ಮತ್ತು ಚಕಿತರನ್ನಾಗಿ ಮಾಡುತ್ತಿದ್ದರು.

ಆ ಸಮಸ್ಯೆಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉದಾಹರಿಸಲಾಗಿದೆ -

ಒಮ್ಮೆ ನಾಗಚಂದ್ರನು 'ದನಮಂ ಕಡಿಕಡಿದು ಬಸದಿಗೆಳೆಯುತ್ತಿರ್ದರ್' ಎಂದು ಒಂದು ಸಮಸ್ಯೆಯನ್ನು ಒಡ್ಡಿದನು. ಅಹಿಂಸಾ ಧರ್ಮಾಚಾರ ಪ್ರಧಾನ ಸ್ಥಾನವಾದ ಜಿನದೇವಾಲಯ (ಬಸದಿಗೆ) ದನವನ್ನು ಕಡಿದು ಎಳೆಯುತ್ತಿರುವುದು ಎಲ್ಲಿಯಾದರೂ ಉಂಟೆ? ಈ ಒಗಟು ತುಂಬಾ ಅವಹೇಳನದ ಮಾತಾಗಿತ್ತು. ಕಂತಿಯು ಕೂಡಲೇ ಅದಕ್ಕೆ ಉತ್ತರವಾಗಿ ಹೇಳುತ್ತಾಳೆ-

ವನದವೊಳಗೆ ಪುಟ್ಟಿ ಬೆಳೆಯುತ
ತನಿಗಂಪಂ ಪತ್ತು ದೆಸೆಗೆ ಬೀರುತ್ತಿರ್ಪಾ
ಘನತರ ಸುರುಚಿರ ಸಚ್ಚಂ-
ದನಮಂ ಕಡಿಕಡಿದು ಬಸದಿಗೆಳೆಯುತ್ತಿರ್ದರ್॥

ಬಸದಿಯಲ್ಲಿ ಜಿನಾಭಿಷೇಕಕ್ಕೆ ಬೇಕಾದ ಸುಗಂಧ ಪೂರಿತವಾದ ಒಳ್ಳೆಯ ಚಂದನದ ಕೊರಡುಗಳನ್ನು ಕಡಿದು ತುಂಬುತ್ತಿದ್ದರು. ಎಂದು ಅರ್ಥ ಬರುವ ಮತ್ತು ನಾಗಚಂದ್ರನು ಒಡ್ಡಿದ ಆ ಸಮಸ್ಯೆಯ ವಾಕ್ಯಗಳನ್ನು ಕೊನೆಯ ಸಾಲಾಗಿ ಸೇರಿಸಿ ಒಂದು ಪದ್ಯವನ್ನೇ ರಚಿಸಿ ಹೇಳಿದಳು. ಸಭಿಕರೂ ನಾಗಚಂದ್ರನೂ ತಲೆದೂಗಿದರು.

ಮತ್ತೊಂದು ದಿನ ನಾಗಚಂದ್ರನು ಇದ್ದಕ್ಕಿದ್ದಂತೆ 'ನಾಯಿಂ ತಿನಲೇಳು ದಿನಕ್ಕೆ ಬುದ್ಧಿ ಸಮನಿಸುಗುಂ' ಎಂದು ಹೇಳುತ್ತಾನೆ.

ಅಂದರೆ ನಾಯನ್ನು ತಿಂದ ಏಳು ದಿನಕ್ಕೆ ಬುದ್ಧಿ ಸರಿಯಾಗುತ್ತದೆ.

ಕೂಡಲೇ ಕಂತಿಯು ನಸುನಕ್ಕು ಅವನ ಸಮಸ್ಯೆಯ ಸಾಲನ್ನೇ ಸೇರಿಸಿ ಒಂದು ಸರಿಯಾದ ಅರ್ಥ ಬರುವಂತೆ ಹೇಳುತ್ತಾಳೆ-

'ಆಯತ ಗಂಗುಂಗಿಯ ಬಲು।
ಪಾಯದೆಣ್ಣೆಯನು ತೆಗೆದು ಮತಿವರ್ಧನಗಂ।
ಹೇಯೋಪಾದೇಯಮಂ ತಿಳಿದು ದಿ।
ನಾಯಂ ತಿನಲೇಳು ದಿನಕ್ಕೆ ಬುದ್ಧಿಸಮನಿಸುಗುಂ।

ಅಂದರೆ ದೊಡ್ಡದಾದ ಗಂಗುಂಗೆ ಕಾಯ ಬೀಜದಿಂದ ಎಣ್ಣೆಯನ್ನು ತೆಗೆದುಜ್ಞಾನವೃದ್ಧಿಗೆ ಪ್ರತಿದಿನ ಕ್ರಮವರಿತು ಏಳು ದಿನ ಸೇವಿಸಿದರೆ ಸೂಕ್ಷ್ಮ ಬುದ್ಧಿಯುಂಟಾಗುತ್ತದೆ.

ಇದರಿಂದ ವಿದುಷಿಯಾದ ಕಂತಿಗೆ ವೈದ್ಯ ಶಾಸ್ತ್ರವು ಗೊತ್ತಿತ್ತೆಂದು ತಿಳಿಯುತ್ತದೆ.

ನಾಗಚಂದ್ರನು ಕಂತಿಯ ಜಾಣ್ಮೆಯನ್ನು ಅರಿಯಲು ಮತ್ತೊಂದು ಸಮಸ್ಯೆಯನ್ನು ಒಡ್ಡುತ್ತಾನೆ.

'ಮಗಳಿಗೆ ಸೋತವನು ಮುಕ್ತಿಗೈದಪ ಬೇಗಂ' ಅಂದರೆ ಮಗಳಿಗೆ ಮನಸೋತು ಅನುರಕ್ತನಾದವನು ಬೇಗ ಮುಕ್ತಿಗೆ ಹೋಗುತ್ತಾನೆ. ಇದು ಧರ್ಮಕ್ಕೆ-ಶೀಲಕ್ಕೆ-ನೀತಿಗೆ ಮಸಿ ಬಳಿಯುವ ಮಾತಾಗಿದೆ. ಇಂತಹುದೇ ರೀತಿಯಲ್ಲಿ ನಾಗಚಂದ್ರನು ಅಪಾರ್ಥವಾಗುವಂತಹ ಯಾವುದೋ ಒಗಟಿನ ಮಾತುಗಳಿಂದ ಕಂತಿಯನ್ನು ಸೋಲಿಸಲು ಯತ್ನಿಸುತ್ತಾನೆ. ಆದರೆ ಕಂತಿಯು ಯಾವುದಕ್ಕೂ ಜಗ್ಗದೇ ಕೂಡಲೇ ಸೂಕ್ತವಾದ ಅರ್ಥ ಬರುವಂತೆ ಆ ಸಾಲನ್ನೇ ಬಳಸಿಕೊಂಡು ಉತ್ತರಕೊಡುತ್ತಾಳೆ.

ಜಗದೊಳಿಹ ಜೀವ ಬಾಧೆಯು
ನೆಗಳಲು ಬೇಡೆಂಬ ಶಾಸ್ತ್ರಪದ್ಧತಿ ನೋಡುತ
ಮಿಗಿಲಾಗಿ ನಡೆವ ವ್ರತನೇ-
ಮಗಳಿಗೆ ಸೋತವನು ಮುಕ್ತಿಗೈದಪ ಬೇಗಂ॥

ಅಂದರೆ ಲೋಕದಲ್ಲಿ ಯಾರು ಜೀವ ಹಿಂಸೆಯನ್ನು ಮಾಡಬಾರದೆಂಬ ಜೈನ ಧರ್ಮವನ್ನು ನಂಬಿ ಶಾಸ್ತ್ರ ಪದ್ಧತಿಗನುಸಾರವಾಗಿ ವ್ರತ ನೇಮಗಳಿಗೆ



ಮನಸೋತವನು ಅಂದರೆ ಆಚರಿಸಿದವನು ಬಹುಬೇಗ ಮುಕ್ತಿಯನ್ನು ಹೊಂದುತ್ತಾನೆ.

ಈ ಉತ್ತರದಿಂದ ಕರತಾಡನದೊಂದಿಗೆ ಸಭಿಕರು ತಲೆದೂಗುತ್ತಾರೆ.

ಮತ್ತೊಂದು ದಿನ ಪಂಪನು 'ಸತ್ತವಳೆದ್ದು ಪೋದಳೇನಿದು ಚಿತ್ರಂ'

ಸತ್ತವಳು ಎಲ್ಲಿಯಾದರೂ ಎದ್ದು ಓಡಲು ಸಾಧ್ಯವೇ? ಆದರೆ ಈ ಮಾತಿನ ಅರ್ಥವೇ ಬೇರೆಯಾಗಿತ್ತು. ಕಂತಿಯೂ ಕೂಡಲೇ

ಅತ್ತೆಯ ಬೈಗುಳ ಮಾತಿಂ
ದತ್ತಿಗೆಯ ದೌರ್ಜನ್ಯದಿಂ ಗಂಡನ ಪೆಟ್ಟಿಂ।
ಮತ್ತಮುದಿಮಾವನ ನಿಂದೆಗೆ
ಬೇಸತ್ತ ವಳೆದ್ದೋಡಿ ಪೋದಳೇನಿದು ಚಿತ್ರಂ॥

ಅಂದರೆ ಅತ್ತೆಯ ಬೈಗಳ, ಅತ್ತಿಗೆಯ ದೌರ್ಜನ್ಯ ಗಂಡನ ಹೊಡೆತ, ಮುದಿಮಾವನ ನಿಂದೆಗಳಿಂದ ಬೇಸತ್ತವಳು (ಸೊಸೆ) ಎದ್ದು ಓಡಿದಳೆಂದರೆ ಏನು ಮಹಾವಿಚಿತ್ರ?

ಹೀಗೆ ಕಂತಿಯು ಪಂಪನ ಸಮಸ್ಯೆಯನ್ನು ಲೀಲಾಜಾಲವಾಗಿ ಬಿಡಿಸಿದುದನ್ನು ಕೇಳಿ ಎಲ್ಲರೂ ಚಕಿತರಾಗುತ್ತಾರೆ.

ಕಂತಿಯ ಪ್ರತಿಭೆ ಪಾಂಡಿತ್ಯಗಳನ್ನು ಹೊರಗೆಡಹ ಬೇಕೆಂದು ನಾಗಚಂದ್ರನು ಮತ್ತೊಮ್ಮೆ ಆಕೆಯನ್ನು ಹೀಯಾಳಿಸುವಂತೆ ಅರ್ಥ ಬರುವ ಸಮಸ್ಯೆಯೊಂದನ್ನು ಒಡ್ಡುತ್ತಾನೆ-

ಎಲೆ ಕಂತಿ ನೀಕುಣಿಯುವೆ
ತಲೆಯೊಳುನಾಂ ಚದುರೆ ಎಂದು ಲೀಲೆಯೊಳೆಂತು
ನೆಲೆಯಾಗಿ ಬಲ್ಲಿದೆಯಾದೊಡೆ
ಸಲೆಪೇಳ್ ನಿರೋಷ್ಠ್ಯ ಮಪ್ಪ ಕಂದಮನೊಂದಂ॥

ಅಂದರೆ ಎಲ್ಲೈ ಕಂತೀ ನೀನು ಕವಿತ್ವ ಮೊದಲಾದ ಕಲೆಗಳಲ್ಲಿ ಪಂಡಿತೆ ಎಂದೂ ಚತುರೆ ಎಂದೂ ಕುಣಿಯುತ್ತೀಯೇ. ನೀನು ಅಂತಹ ಚತುರೆಯಾದರೆ ತುಟಿಮುಟ್ಟದೆ ಉಚ್ಚರಿಸುವಂತಹ ಒಂದು ಕಂದಪದ್ಯವನ್ನು ನಿಂತ ನಿಂತಲ್ಲಿಯೇ ರಚಿಸಿ ಹೇಳು ನೋಡೋಣ,

ಕಂತಿಯು ಯಾವ ಉದ್ವೇಗಕ್ಕೂ ಒಳಗಾಗದೆ ಸಿಟ್ಟಾಗದೆ ನಸುನಗುತ್ತ ಉತ್ತರ ಕೊಡುತ್ತಾಳೆ-

ಸುರ ನರನಾಗಾಧೀಶ್ವರ
ಹೀರ ಕಿರೀಟಾಗ್ರಲಗ್ನ ಚರಣಸರೋಜ
ದೀರೋದ್ಧಾರ ಚರಿತೋ
ತ್ಸಾರಿತ ಕಲುಷೌಘ ರಕ್ಷಿಸೆನ್ನರುಹಾ॥

ಅಂದರೆ ಸಂಪದ್ಯುಕ್ತರಾದ ಸುರೇಂದ್ರ ನರೇಂದ್ರ ನಾಗೇಂದ್ರರುಗಳ ಕಿರೀಟದ ಮಣಿಗಳಲ್ಲಿ ಪ್ರಕಾಶಿಸುವ ಚರಣ ಕಮಲಗಳುಳ್ಳ (ಅವರು ನಮಸ್ಕರಿಸುವಾಗ ಪಾದಗಳು ಅವರ ಕಿರೀಟಗಳಲ್ಲಿ ಪ್ರತಿಬಿಂಬಿತವಾಗುತ್ತಿದ್ದವು) ಧೀರೊದ್ಧಾತನೇ ಪಾಪವನ್ನು ಹರಿಸುವ ಅರಹಂತನೇ ನಮ್ಮನು ರಕ್ಷಿಸು.

ಮತ್ತೆ ಕೆಲವು ಸಮಸ್ಯೆಗಳ ಸಂಕ್ಷಿಪ್ತ ವಿವರ ಹೀಗಿದೆ-

ನಾಗಚಂದ್ರ- ಕಳ್ಳಂ ಕುಡಿವುದನು ಕಂಡೆ ಜೈನರ ಮನೆಯೊಳ್ (ಇಲ್ಲಿ ಕಳ್ಳಂ ಎಂದರೆ ಹೆಂಡ)

ಕಂತಿ- ಗೋಡೆಯ ಕನ್ನವನೊಕ್ಕೆ ಕತ್ತಿಯಿಂ ಕೊರೆದು ನೆಲವಿನ ಮೊಸರಂ ಬೆಳ್ಳಿಯ ಬಟ್ಟಲೊಳು ಕಳ್ಳಂ ಕುಡಿವುದನು ಕಂಡೆ ಜೈನರ ಮನೆಯೊಳ್ (ಇಲ್ಲಿ ಕಳ್ಳಂ ಎಂದರೆ ಚೋರ)

ನಾಗ- 'ನಿನಗೆ ನಮಸ್ಕಾರ ಮಾಡೆ ಕೈವಲ್ಯ ಸುಖಂ'

ಕಂತಿ- ಮನ ಶುದ್ಧಿವಡೆದು ಪರಮ ಜಿನ-

ನಿನಗೆ ನಮಸ್ಕಾರ ಮಾಡೆ ಕೈವಲ್ಯಸಖಂ॥

ನಾಗ- ಇಲಿಯಂ ತಿಂಬುದಂ ಕಂಡೆ ಜೈನರ ಮನೆಯೊಳ್

ಕಂತಿ- ತಿಲತೈಲದೆ ಮಾಡಿದ ಚಿಕ್ಕಿಲಿಯಂ ತಿಂಬುದನು ಕಂಡೆ ಜೈನರ ಮನೆಯೊಳ್ (ಚಕ್ಕಲಿ)

ನಾಗ- ಗಜಮು ಬಟ್ಟೆಯಲಿ ಕಟ್ಟಿ ಪೆತ್ತರು ಪೆಗಲೊಳು

ಕಂತಿ- ಲೇಖಿಕ ಜನ ಕಾಗಜಮಂ ಬಟ್ಟೆಯಲಿ ಕಟ್ಟಿ ಪೊತ್ತರು ಪೆಗಲೊಳ್ (ಕಾಗದ)



ನಾಗ- ಯಿಸಮಂ ಸೇವಿಸುತ ಬಾಳ್ದರೇನಚ್ಚರಿಯೋ

ಕಂತಿ- ಬಿಸಿಮಾಳ್ದ ತುಪ್ಪದೊಳು ಪಾಯಿಸವಂ ಸೇವಿಸುತ ಬಾಳ್ದರೇನಚ್ಚರಿಯೋ (ಪಾಯಿಸ)

ನಾಗ- ಏರಿಗೆ ಹರಿಗೋಲನಾಕಿ ದಾಟುತಲಿರ್ಪರ್

ಕಂತಿ- ದಾರಿದ್ರವ ಕೆಡಿಸುವ ಕಾ-

ವೇರಿಗೆ ಹರಿಗೋಲ ಹಾಕಿ ದಾಟುತಲಿರ್ಪರ್ (ಕಾವೇರಿ) ಕಂತಿಯೇ ಪಂಪನಿಗೆ ಒಂದು ಸಮಸ್ಯೆ ಒಡ್ಡುತ್ತಾಳೆ- 'ನಿನ್ನ ಕವಿತ್ವದಲ್ಲಂ ಮಡಕೆ ಕುಡಿಕೆ ಅದಕ್ಕೆ ಪಂಪನು-

ಮಡಕೆ ನಿಮಿರ್ದಾಡೆ ಜಡೆಗಳ್
ಕುಡುಕೆ ಕೌಘ ಮುಮನ ಛಿವನತಿ ಕೋಪದೊಳಂ
ಅಡಕೆ ಮರುಳ್ಗುಳ್ ಪೆಣನಂ।
ಹೊಡೆಕೆಡದರ್ ದೈತ್ಯರಂದು ತ್ರಿಪದಸ್ಥಳದೊಳ್

ಹೀಗೆ ಅರ್ಥ ಗರ್ಭಿತ ರಸಪೂರಿತ ಸಮಸ್ಯೆಗಳು ಹಲವು. ಇದರಿಂದ ನಾಗಚಂದ್ರನು ಆಕೆಯನ್ನು ತುಂಬಾ ಮೆಚ್ಚುತ್ತಿದ್ದನು. ಕಂತಿಯು ಅಷ್ಟೆ.

ಹೀಗೆ ಕಂತಿ ಪಂಪರ ಸಮಸ್ಯೆಗಳು ಹಲವು ಇವೆ. ಅವೆಲ್ಲಾ ಓದುಗರಿಗೆ ಕುತೂಹಲವನ್ನು ಕೆರಳಿಸುವಂತವುಗಳಾಗಿವೆ.

ಅಭಿನವ ಪಂಪನೆಂದು ಪ್ರಖ್ಯಾತನಾದ ನಾಗಚಂದ್ರನ ಪ್ರತಿಭೆ ಮತ್ತು ಪಾಂಡಿತ್ಯವನ್ನು ಕಂತಿಯು ಬಹಳವಾಗಿ ಮೆಚ್ಚಿಕೊಂಡಿದ್ದಳಾದರೂ ಅದನ್ನು ಬಹಿರಂಗವಾಗಿ ತೋರಗೊಡದೆ ಇದ್ದಳು.

ತಾನು ಇಷ್ಟು ವಿಖ್ಯಾತ ಕವಿಯಾದರೂ ನನ್ನನ್ನು ಈಕೆ ಒಮ್ಮೆಯಾದರೂ ಪ್ರಶಂಸೆ ಮಾಡಲಿಲ್ಲ. ಒಂದು ಮೆಚ್ಚಿಕೆಯ ಮಾತನ್ನಾದರೂ ಆಡಲಿಲ್ಲವೆಂದು ನಾಗಚಂದ್ರನು ಹಲವುಬಾರಿ ಅಂದುಕೊಂಡದ್ದುಂಟು. ಆಕೆಯಿಂದ ತಾನು ಹೊಗಳಿಸಿಕೊಳ್ಳಲೇಬೇಕೆಂಬ ಹಂಬಲದಿಂದ ಓಮ್ಮೆ ನಾಗಚಂದ್ರನು ಒಂದು ಚಮತ್ಕಾರವನ್ನು ಮಾಡುತ್ತಾನೆ.

ತನ್ನ ಒಬ್ಬ ಸೇವಕನ ಮೂಲಕ 'ನಾಗಚಂದ್ರನು ಮರಣ ಹೊಂದಿದನು' ಎಂಬ ಸುದ್ದಿಯನ್ನು ಕಳಿಸುತ್ತಾನೆ. ಇದು ಕಂತಿಗೆ ಸಿಡಿಲೆರಗಿದಂತಾಗಿ ಗೋಳಾಡುತ್ತಾ ನಾಗಚಂದ್ರನ ಬಳಿಗೆಬರುತ್ತಾಳೆ. ನಾಗಚಂದ್ರನು ಸತ್ತವನಂತೆಯೇ ಮಲಗಿದ್ದನು.

ಕಂತಿಯು ದುಃಖದ ಕಾಲುವೆಯನ್ನೇ ಹರಿಸುತ್ತಾ ಪಂಪನ ಗುಣಗಾನ ಮಾಡುತ್ತಾ ಪ್ರಲಾಪಿಸಲಾರಂಭಿಸಿದಳು ಅದು ಚರಮ ಗೀತೆಯೇ ಆಗಿತ್ತು, 'ಹಾಯ್', ನಾಗಚಂದ್ರನು ಇಲ್ಲವಾದನೇ! ಓಹ್! ಇನ್ನಿಲ್ಲ ನಾಗಚಂದ್ರ ಹೇ ಕವಿರಾಯಾ, ಕವಿಪಿತಾ ಮಹಾ ಕವಿ ಕಂಠಾಭರಣ, ಕಾವ್ಯರ್ಷಿ, ಕವಿಶಿಖಾಮಣಿ ಕವಿಚಕ್ರೇಶಾ, ಕವೀಶ್ವರಾ ನೀನಿಲ್ಲದ ಈನಾಡು, ನೀನಿಲ್ಲದ ಈ ಆಸ್ಥಾನ ಎಲ್ಲವೂ ಶೂನ್ಯ. ನೀನಿಲ್ಲದ ಆಸ್ಥಾನವೇಕೆ?

ನಾನಿನ್ನು ಯಾರೊಂದಿಗೆ ವಾದಮಾಡಲಿ? ಯಾರಲ್ಲಿ ನನ್ನ ಕವಿತ್ವವನ್ನು ಪ್ರದರ್ಶಿಸಲೀ? ನಿನ್ನಿಂದ ನನಗೆ ಗೌರವವಿತ್ತೇ ಹೊರತು ನನಗಾವ ಗರ್ವವೂ ಇರಲಿಲ್ಲ. ನಿನ್ನ ಮುಂದೆ ನಾನು ಎಷ್ಟರವಳ' ಎಂದು ಗೋಳಾಡಿದಳು. ಅಷ್ಟೇ ಅಲ್ಲದೆ ಆ ಹಿಂದೆ ನಡೆದ ಹಲವು ಪ್ರಸಂಗಗಳನ್ನು ನೆನೆನೆನೆದು ಪ್ರಲಾಪಿಸಿದಳು. ದುಃಖದ ಉದ್ವೇಗದಿಂದ ಪ್ರಜ್ಞಾನ ಶೂನ್ಯಳಾದಂತೆ, ಹುಚ್ಚಳಂತೆ ಆಡುತ್ತಿದ್ದಳು.

ಇಷ್ಟೆಲ್ಲಾ ಕೇಳುತ್ತ ಮಲಗಿದ್ದ ನಾಗಚಂದ್ರನು ತನ್ನ ನಗುವನ್ನು ತಡೆಯಲಾರದೆ ಜಗ್ಗನೆದ್ದು ಆಹಾ! ನಾನೇ ಧನ್ಯ, ನಾನೇ ಗೆದ್ದೆ ಅಂತೂ ನೀನು ನನ್ನನ್ನು ಪ್ರಶಂಸಿದಿಯೆಲ್ಲಾ' ಎಂದು ಆ ನಟನೆಯ ರಹಸ್ಯವನ್ನು ತಿಳಿಸುತ್ತಾನೆ. ಸುತ್ತ ಮುತ್ತಲ ಜನ ಜಂಗುಳಿ ಎಲ್ಲಾ ನಗೆಗಡಲಿನಲ್ಲಿ ಮುಳುಗುತ್ತದೆ. ಆಗ ಕಂತಿಯು ನನಗೆ ನಾಚಿಕೆ, ಅವಮಾನವಾಯಿತೆಂದು ಭಾವಿಸದೆ ಆನಂದಾ ಶ್ರುವನ್ನು ಸುರಿಸುತ್ತಾ ನಾಗಚಂದ್ರನಿಗೆ ಯಶಸ್ಸನ್ನು ಕೋರಿದಳು.

ಹೀಗೆ ಪರಸ್ಪರ ಪ್ರತಿಭಾಸಂಪನ್ನರಾಗಿ ಪ್ರಕಾಶಿಸುತ್ತಿದ್ದ ಆ ಈರ್ವರೂ ಆ ಕಾಲದಲ್ಲಿ ರಾಜನಿಂದ ರಂಕನವರೆಗೂ, ಪಂಡಿತನಿಂದ ಪಾಮರನವರೆಗೂ ಶ್ರೀಮಂತನಿಂದ ಬಡವನವರೆಗೂ ಗೌರವ, ಪ್ರೀತಿ, ಆದರ ಘನತೆಗಳೊಂದಿಗೆ ಪ್ರಶಂಸೆಗೆ ಪಾತ್ರರಾಗಿದ್ದರು.

ಕಂತಿ-ಪಂಪರ ಸಮಸ್ಯೆಗಳೆಂಬ ಈ ಕಾವ್ಯಖಂಡ ಮಾತ್ರ ಈಕೆಯ ಕವಿತಾಸಾಮರ್ಥ್ಯವನ್ನು ತಿಳಿಸುತ್ತದೆ. ಕಂತಿಯ ನೈಜತೆಯನ್ನು ಪ್ರೌಢಿಮೆಯನ್ನೂ ಅರಿಯುವ ಗ್ರಂಥಗಳು ಲಭ್ಯವಾಗದಿರುವುದು ದುರದೃಷ್ಟಕರ. ಸಂಶೋಧಕರ ಪ್ರಯತ್ನದಿಂದ ಮುಂದಾದರೂ ಈಕೆಯ ಕಾವ್ಯಗಳಾವುವಾದರೂ ದೊರೆತರೆ ಈ ನಾಡಿನ-ಈ ನುಡಿಯು ಕೀರ್ತಿಕಲಶಕ್ಕೆ ಇನ್ನಷ್ಟು ಹೊಳಪುಂಟಾಗಿ ಈ ಕನ್ನಡ ಸಾಹಿತ್ಯ ಸಾಮ್ರಾಜ್ಯದಲ್ಲಿ ಪಂಪ ರನ್ನ ಜನ್ನಾದಿಗಳಂತೆ ಕಂತಿಯೂ ಕವೀಶ್ವರಿಯಾಗಿ ಅಭಿನವವಾಗ್ದೇವಿ ಎಂಬ ಹೆಸರು ಸಾರ್ಥಕವಾಗುವುದರಲ್ಲಿ ಸಂದೇಹವಿಲ್ಲ.



# 44. ಸುಲಭವಾಗಿ ಅರ್ಥವಾಗುವಂತಹ ಸರಳ ಕನ್ನಡದಲ್ಲಿ ಜೈನ ಸಾಹಿತ್ಯದ ರಚನೆಯ ಅವಶ್ಯಕತೆ

ಪರಮಪರಂಜ್ಯೋತಿ ಕೋಟಿಚಂದ್ರಾದಿತ್ಯ
ಕಿರಣ ಸುಜ್ಞಾನ ಪ್ರಕಾಶಾ ॥
ಸುರರ ಮಕುಟಮಣಿರಂಜಿತ ಚರಣಾಬ್ಜ ।
ಶರಣಾಗು ಪ್ರಥಮ ಜಿನೇಶಾ ॥

ಅನಾದಿಕಾಲದಿಂದಲೂ ಆಯಾ ಕಾಲಕ್ಕೆ ತಕ್ಕಂತೆ ಆಯಾ ದೇಶದ ಜನರಿಗೆ ತಿಳಿಯುವಂತಹ ಭಾಷೆಯಲ್ಲಿಯೇ ಧರ್ಮಬೋಧನೆ, ಧರ್ಮಪ್ರಸಾರ ಆಗುತ್ತಾ ಬಂದಿದೆ.

ಜಿನೇಂದ್ರ ಭಗವಂತನ ಓಂಕಾರ ದಿವ್ಯ ಧ್ವನಿಯೂ ಸರ್ವಭಾಷಾಮಯಿ ಯಾಗಿದ್ದು, ಅದು ಸಮವಸರಣದಲ್ಲಿದ್ದ ಎಲ್ಲಾ ಜೀವಗಳಿಗೂ ಅವರವರ ಭಾಷೆಗಳಲ್ಲಿ ಬೋಧೆಯಾಗುತ್ತಿತ್ತು ಅಂದರೆ ತಿಳಿಯುತ್ತಿತ್ತು, ಆದರೂ ಅಲ್ಲಿ ಅರ್ಧಮಾಗಧಿಭಾಷೆಯ ಮೂಲಕ ಪ್ರಚಾರವಾಗುತ್ತಿತ್ತು ಅದು ಆ ಒಂದು ದೇಶದ ಭಾಷೆಯಾಗಿತ್ತು. ಇದರಿಂದ ಭಗವದ್ವಾಣಿಯೂ ಒಂದು ಜನ ಸಾಮಾನ್ಯರ ಭಾಷಾಮಾಧ್ಯಮದ ಮೂಲಕ ಪ್ರಸಾರವಾಗುತ್ತಿತ್ತೆಂದು ಗೊತ್ತಾಗುತ್ತದೆ.

ಪ್ರಾಚೀನ ಕಾಲದಿಂದಲೂ ಜೈನ ಸಾಹಿತ್ಯ ರಚನೆಯು ವಿಪುಲವಾಗಿ ಆಗಿದೆ. ಈ ಜೈನ ಸಾಹಿತ್ಯವು ವಿವಿಧ ಭಾಷೆಗಳೆಂಬ ವಾಹಿನಿಗಳಾಗಿ ಪ್ರವಹಿಸಿ ಜಿನವಾಣಿ ಎಂಬ ಸಾಗರದಲ್ಲಿ ಸೇರಿದೆ. ಅದರಿಂದಾಗಿ ಈ ಜಿನವಾಣಿಯು ವಿಶ್ವದಷ್ಟು ವಿಶಾಲವಾದುದು. ಶ್ರುತ ಭಕ್ತಿಯಲ್ಲಿ ಹೇಳಿದ್ದಾರೆ-

ಅರ್ಹದ್ವಕ್ತ್ರಪ್ರಸೂತಂ ಗಣಧರರಚಿತಂ ।
ದ್ವಾದಶಾಂಗಂ ವಿಶಾಲಂ ॥
ಚಿತ್ರಂ ಬಹ್ವರ್ಥಯುಕ್ತಂ ಮುನಿಗಣವೃಷಭೈ ।
ಧಾರಿತಂ ಬುದ್ಧಿಮದ್ಭಿಃ ॥
ಮೋಕ್ಷಾಗ್ರದ್ವಾರಭೂತಂ ವ್ರತಚರಣಫಲಂ ।

ಜ್ಞೇಯಭಾವಪ್ರದೀಪಂ ॥
ಭಕ್ತ್ಯಾ ನಿತ್ಯಂ ಪ್ರವಂದೇ ಶ್ರುತಮಹಮಖಿಲಂ ।
ಸರ್ವಲೋಕೈಕಸಾರಂ ॥

ಅಂದರೆ ಅರಹಂತ ಪರಮೇಷ್ಠಿಗಳಿಂದ ಓಂಕಾರ ದಿವ್ಯಧ್ವನಿಯ ಮುಖಾಂತರ ಹೇಳಲ್ಪಟ್ಟಿದ್ದೂ, ಗಣಧರರಿಂದ ರಚಿಸಲ್ಪಟ್ಟದ್ದೂ, ಬಹುವಿಸ್ತಾರವಾದುದೂ, ಚಿತ್ರ ವಿಚಿತ್ರಗಳಿಂದ ಕೂಡಿದುದೂ, ಅನೇಕಾರ್ಥಗಳಿಂದ ಕೂಡಿರುವುದೂ, ಮುನಿಶ್ರೇಷ್ಠರಿಂದ ಧರಿಸಲ್ಪಟ್ಟುದೂ, ಮೋಕ್ಷಕ್ಕೆ ಹೆಬ್ಬಾಗಿಲಿನಂತಿರುವುದೂ, ವ್ರತಾಚಾರಗಳ ನಿಯಮ ಮತ್ತು ಅವುಗಳ ಫಲಗಳಿಂದ ಕೂಡಿರುವುದೂ, ಸುಲಭವಾಗಿ ತಿಳಿಯುವುದಕ್ಕೆ ಯೋಗ್ಯವಾದ ವಿಚಾರಗಳಿಂದ ತುಂಬಿರುವುದೂ, ಸರ್ವಲೋಕದ ಸಾರಭೂತವಾದದ್ದೂ ಆದ ದ್ವಾದಶಾಂಗವೂ ಅನೇಕಾಂತವೂ ಆದ ಜಿನವಾಣಿಗೆ ಯಾವಾಗಲೂ ಭಕ್ತಿಯಿಂದ ವಂದಿಸುತ್ತೇನೆ.

ಇಷ್ಟು ಮಹತ್ವಪೂರ್ಣವಾದ ಜೈನ ಸಾಹಿತ್ಯ ಸಾಗರವು ಬಹು ವಿಶಾಲವಾದುದು. ಅದಕ್ಕೆ ಇನ್ನೊಂದು ನಿದರ್ಶನ-

ಭಗವಾನ್ ಮಹಾವೀರರು ಸಮವಸರಣದಲ್ಲಿ ವಿರಾಜಮಾನರಾಗಿ ವಿಹರಿಸಿ 30 ವರ್ಷಗಳ ಪರ್ಯಂತ ಓಂಕಾರ ದಿವ್ಯಧ್ವನಿಯ ಮೂಲಕ ಬೋಧಿಸಿದ್ದನ್ನೆಲ್ಲಾ ಗೌತಮ ಗಣಧರರು ಸಂಗ್ರಹಿಸಲಾಗಲಿಲ್ಲ. ಗಣಧರರು ಸಂಗ್ರಹಿಸಿ ತಿಳಿಸಿದ್ದುದನ್ನೆಲ್ಲಾ ಶ್ರುತಕೇವಲಿಗಳು ಜ್ಞಾಪಕದಲ್ಲಿ ಉಳಿಸಿಕೊಳ್ಳಲಾಗಲಿಲ್ಲ. ಶ್ರುತಧರಾಚಾರ್ಯರುಗಳಿಗೆ ಎಷ್ಟು ಜ್ಞಾಪಕವಿತ್ತೋ ಅಷ್ಟನ್ನು ಬರೆದಿಡಲಾಗಲಿಲ್ಲ ಆಚಾರ್ಯರೂ, ಪಂಡಿತರೂ, ಕವಿಗಳು ಎಷ್ಟೆಷ್ಟು ಬರೆದಿಟ್ಟಿದ್ದರೋ ಅಷ್ಟೆಲ್ಲಾ ಈಗ ಉಳಿದಿಲ್ಲ ಎಷ್ಟು ಉಳಿದಿದೆಯೋ ಅಷ್ಟೆಲ್ಲಾ ಪುಸ್ತಕರೂಪದಲ್ಲಿ ಅಚ್ಚಾಗಿಯೇ ಇಲ್ಲ ಇನ್ನೂ ಎಷ್ಟೋ ಗ್ರಂಥಗಳು ಓಲೆಗರಿ ರೂಪದಲ್ಲೇ ಇವೆ. ಈಗ ಎಷ್ಟು ಅಚ್ಚಾಗಿವೆಯೋ ಅವನ್ನೆಲ್ಲಾ ನಮ್ಮ ಜೀವಿತ ಕಾಲದಲ್ಲಿ ಒಮ್ಮೆ ಓದಲು ಆಗುವುದಿಲ್ಲ ಎಂದ ಮೇಲೆ ಜಿನವಾಣಿ ಸಾಹಿತ್ಯದ ವಿಶಾಲತೆ ಎಷ್ಟೆಂದು ಊಹಿಸಬಹುದು.

ಇಷ್ಟಾದರೂ ಈಗಾಗಲೇ ಹಲವು ಗ್ರಂಥಗಳು ಪ್ರಕಟವಾಗಿದ್ದರೂ ಇವು ಶ್ರೀ ಸಾಮಾನ್ಯನು ಸುಲಭವಾಗಿ ತಿಳಿಯುವಂತಹ ಪ್ರಕಟನೆಗಳು ಹೊರಬಿದ್ದಿಲ್ಲ. ಅದರಲ್ಲೂ ಕನ್ನಡ ಭಾಷೆಯಲ್ಲಿ ತೀರಾ ಕಮ್ಮಿ, ಜೈನ ಸಾಹಿತ್ಯದ ರಚನೆಯು ಅಪಭ್ರಂಶ, ಪ್ರಾಕೃತ, ಸಂಸ್ಕೃತ, ಹಳೆಗನ್ನಡ ಮುಂತಾದ ಭಾಷೆಗಳಲ್ಲಿವೆ. ಅವೆಲ್ಲಾ ತುಂಬಾ ಮಹತ್ವಪೂರ್ಣವಾದ ವಿಷಯಗಳನ್ನೊಳಗೊಂಡಿವೆ. ಅವುಗಳ ರಚನಾ



ಕಾಲಕ್ಕೆ ಅಂತಹ ಶೈಲಿ, ಭಾಷೆ, ಪ್ರೌಢಿಮೆಗಳಲ್ಲಿ ರಚನೆ ಆಗಬೇಕಾಗಿತ್ತು, ಅವುಗಳನ್ನು ಹೇಳುವ ಮತ್ತು ಕೇಳುವವರೂ ಅಷ್ಟೇ ಜ್ಞಾನಿಗಳಾಗಿರುತ್ತಿದ್ದರು. ಆದರೆ ಆ ಗ್ರಂಥಗಳ ಒಳಮರ್ಮ ತತ್ವಸಾರವು ಇಂದಿನ ಪೀಳಿಗೆಯ ಬುದ್ಧಿ ಮಟ್ಟಕ್ಕೆ ಎಟಕದಾಗಿದೆ. ಅಥವಾ ತಿಳಿಯದಾಗಿದೆ.

ಈ ಕಾಲದಲ್ಲಿ ಬಹುಮಂದಿ ಹೊಟ್ಟೆಯಪಾಡಿಗೇ ಬಿಡುವಿಲ್ಲದೆ ದುಡಿಯುವ ಉದ್ಯೋಗವೇ ಪ್ರಧಾನವಾಗಿರುವಾಗ ಕ್ಲಿಷ್ಟವಾದಸಾಹಿತ್ಯವನ್ನು ಓದುವ ಮತ್ತು ಅರ್ಥಮಾಡಿಕೊಳ್ಳುವ ವ್ಯವಧಾನ, ತಾಳ್ಮೆ, ಬಿಡುವು ಇಲ್ಲದಿರುವುದರಿಂದ ಅಲ್ಪ ಸ್ವಲ್ಪ ಓದುವ ಅಭಿರುಚಿಯು ಕಥೆ ಕಾದಂಬರಿಗಳ ಕಡೆ ತಿರುಗಿ ಬಿಟ್ಟಿದೆ. ಆದರಿಂದಾಗಿ ಪತ್ರಿಕೆ-ಕಾದಂಬರಿ-ಕಥೆಗಳನ್ನು ಓದುವಷ್ಟು ಆಸಕ್ತಿ ನಮ್ಮ ಧರ್ಮಸಾಹಿತ್ಯದ ಓದಿನಲ್ಲಿ ಇಲ್ಲ. ಆದಕಾರಣ ಧರ್ಮದಬಗ್ಗೆ ಹೆಚ್ಚು ತಿಳಿವಳಿಕೆಯಾಗಿಲ್ಲ, ತಿಳಿವಳಿಕೆ ಯಾವಾಗ ಇಲ್ಲವೋ ನಂಬಿಕೆಯಾಗಲೀ ಆಚಾರವಾಗಲೀ ಉಳಿಯುವುದಿಲ್ಲ. ಶಿಥಿಲತೆಯುಂಟಾಗುತ್ತದೆ. ತತ್ತ್ವ ಮತ್ತು ಧರ್ಮದ ತಿಳಿವಳಿಕೆಯೂ ಶಾಸ್ತ್ರ ಮತ್ತು ಗುರುಗಳಿಂದಾಗಬೇಕು. ಪೂರ್ವಾಚಾರ್ಯರ ಮೂಲವನ್ನು ಉಳಿಸಿಕೊಂಡು ಅವುಗಳ ಸರಳ ಕನ್ನಡ ಭಾಷೆಯ ಅನುವಾದ ವ್ಯಾಖ್ಯಾನವಾಗಿ ಚಿಕ್ಕ ಚಿಕ್ಕಪುಸ್ತಕಗಳ ರೂಪವಾಗಿ ಪ್ರಕಟವಾಗಿ ಹೊರಬಂದರೆ ಒಳ್ಳೆಯದು ಕಥಾಸಾಹಿತ್ಯಗಳ ಮೂಲಕ ಧರ್ಮಬೋಧೆಯು ಆಗುವಂತೆ ಇರುವ ರಚನೆಗಳು ಹೆಚ್ಚಾಗಬೇಕು. ಅವುಗಳ ಬೆಲೆಯೂ ಸಾಮಾನ್ಯನೂ ಕೊಂಡು ಓದುವಂತೆ ಇರಬೇಕು.

ಎಷ್ಟೋ ಗ್ರಂಥಗಳು ಪ್ರಕಟವಾಗಿದ್ದರೂ ಬಿಕರಿಯಾಗಿಲ್ಲ. ಕಾರಣ ಅವು ಅರ್ಥವಾಗದ ಭಾಷೆಯಲ್ಲಿಯೋ ಬಹಳ ಗಾತ್ರವಾದವುಗಳೋ ಅಥವಾ ಬಹಳ ಬೆಲೆ ಇರುವುದರಿಂದಲೋ ಅವು ಖರ್ಚಾಗಿಲ್ಲ. ಮುಖ್ಯವಾಗಿ ಅರ್ಥವಾಗದಿರುವುದೇ ಕಾರಣ. ಕೊಂಡು ತಂದರೂ ಅದನ್ನು ಒಂದೆರಡು ಪುಟ ಓದಿ ನಿರಾಶನಾಗಿ ಸುಮ್ಮನಾಗುತ್ತಾನೆ. ಅವನ ಮಟ್ಟಿಗೆ ಆ ಗ್ರಂಥ ನಿರರ್ಥಕವೂ ನಿರುಪಯೋಗವೂ ಆಗಿಬಿಟ್ಟು ಅದರ ಮೇಲೆ ಆಸಕ್ತಿ ಕಮ್ಮಿಯಾಗುತ್ತದೆ. ಒಮ್ಮೆ ನಾನು ಒಂದು ಸಭೆಯಲ್ಲಿ ಓರ್ವ ವಿದ್ವಾಂಸರ ಭಾಷಣ ಕೇಳುತ್ತಿದ್ದೆ, ಆದರೆ ಅದು ನನಗೆ ಅರ್ಥವಾಗಲಿಲ್ಲ. ಕಾರಣ ಅವರು ಅವರ ಮಾತೃಭಾಷೆಯಾದ ಮರಾಠಿಯಲ್ಲಿ ಮಾತಾಡುತ್ತಿದ್ದರು. ಅವರ ಭಾಷಣ ಬಹಳ ಮಹತ್ವಪೂರ್ಣವೂ ವಿದ್ವತ್‌ಪೂರ್ಣವೂ ಪರಿಣಾಮಕಾರಿಯೂ ಆಗಿತ್ತೆಂದು ಸಭಿಕರು ಆಗಾಗ ಚಪ್ಪಾಳೆ ತಟ್ಟುತ್ತಾ ನಗುತ್ತಾ ಭೇಷ್ ಭೇಷ್ ಎನ್ನುತ್ತಾ ತಲೆದೂಗುತ್ತಿದ್ದುದರಿಂದ ಗೊತ್ತಾಯಿತು. ನಾನು ಅಕ್ಕಪಕ್ಕದವರು ನಕ್ಕಾಗ ನಗುತ್ತಿದ್ದೆ-ಚಪ್ಪಾಳೆ ತಟ್ಟಿದಾಗ

ತಟ್ಟುತ್ತಿದ್ದೆ. ಆ ಸಭೆಯಲ್ಲಿ ಬಹು ಮಂದಿಗೆ ಆ ಭಾಷೆ ಬರುತ್ತಿತ್ತು. ನಾನು ಆ ಭಾಷಣದ ರಸಾಸ್ವಾದಮಾಡಿ ಆನಂದಿಸಲಾಗಲಿಲ್ಲ. ಅಂತೂ ಅವರ ವಾಗ್ಝರಿ ನನ್ನನ್ನು ಅತ್ತ ಸೆಳೆದಿತ್ತಾದರೂ ಅರ್ಥವಾಗದೆ ಆಕಳಿಕೆಯೂ ಬರುತ್ತಿತ್ತು, ಆದರಿಂದಾಗಿ ಒಂದು ಆಭಾಸವಾಯಿತು. ನನಗೆ ಹಿಂದುಗಡೆ ಪಟ ಪಟ ಎಂಬ ಶಬ್ದವಾಯಿತು. ಕೂಡಲೇ ನಾನು ಚಪ್ಪಾಳೆ ತಟ್ಟಿದೆ ಅಕ್ಕಪಕ್ಕದವರು ನನ್ನನ್ನು ನೋಡಿ ನಕ್ಕರು ಕಾರಣ ಹಿಂದಿನಿಂದ ಒಂದು ಮಗು ಚಪ್ಪಲಿ ಹಾಕಿಕೊಂಡು ಓಡಿ ಬರುತ್ತಿತ್ತು ಅದು ಹಾಕುತ್ತಿದ್ದ ಕಾಲಿನ ಶಬ್ದ ಕರತಾಡದಂತೆ ತೂಕಡಿಸುತ್ತಿದ್ದ ನನಗೆ ಚಪ್ಪಾಳೆಯಂತೆ ಏಕೆ ಹೀಗಾಯಿತು?- ನನಗೆ ಆ ಭಾಷೆ ಅರ್ಥವಾಗಲಿಲ್ಲ. ಇದರಂತೆ ಪ್ರೌಢವಾದ ಶೈಲಿಯಲ್ಲಿ ಉದ್ದ ಉದ್ದವಾದ ಸಂಸ್ಕೃತ, ಪ್ರಾಕೃತ, ಹಳಗನ್ನಡದ ಭಾಷಾಶಬ್ದಗಳನ್ನು ಹೆಚ್ಚು ಬಳಸಿ ಬರೆದ ಗ್ರಂಥಗಳು ಜನಸಾಮಾನ್ಯರೆಲ್ಲ ಓದಲಾಗುವುದಿಲ್ಲ. ಈ ಕಾಲದಲ್ಲಿ ಎಲ್ಲರೂ ಪಂಡಿತರಲ್ಲ. ವಿದ್ವಾಂಸರಲ್ಲ. ವ್ಯವಹಾರಿಕವಾದ ಈ ಕಾಲದಲ್ಲಿ ಧಾರ್ಮಿಕ ವಿದ್ಯೆಯ ಮಟ್ಟ ಕಮ್ಮಿ ಇರುವುದರಿಂದ ಈ ಕಾಲದ ಜನತೆಗೆ ತಿಳುವಳಿಕೆಗೆ ತಕ್ಕ ರಚನೆಗಳು ಹೊರಬಂದು ಜನರಲ್ಲಿ ಧರ್ಮಗ್ರಂಥಗಳ ಅಧ್ಯಯನದ ಆಸಕ್ತಿಯನ್ನು ಹೆಚ್ಚಿಸಬೇಕು.

ಸುಲಭವಾದ ರಚನೆಯಾಗಬೇಕು. ಸುಲಭವಾಗಿ ತಿಳಿಯುವಂತಿರಬೇಕು. ಭಾಷೆಯು ಸರಳ ಸುಂದರ ಶೈಲಿಯಲ್ಲಿರಬೇಕು ಎಂಬ ಮಾತು ಇಂದಿನದಲ್ಲ. ಬಹಳ ಹಳೆಯಕಾಲದ್ದು -

ಇಲ್ಲಿಗೆ ಒಂದು ಸಾವಿರ ವರ್ಷಗಳ ಹಿಂದೆ ಮಹಾಪುರಾಣದ ರಚನಾಕಾರರಾದ ಶ್ರೀ ಜಿನಸೇನಾಚಾರ್ಯರು ಪುರಾಣವನ್ನು ರಚನೆ ಮಾಡುವ ಕಾಲಕ್ಕೆ ಪ್ರಾರಂಭದಲ್ಲಿ ಸ್ವಲ್ಪ ಅಡಚಣೆಯಾದದ್ದು ಅವರಿಗೆ ಗೊತ್ತಾಯಿತು. ಅಷ್ಟಾಂಗ ನಿಮಿತ್ತ ಜ್ಞಾನಿಗಳಾದ ಅವರಿಗೆ ಈ ಪುರಾಣ ಪೂರ್ತಿಯಾಗುವವರೆಗೂ ನನ್ನ ಆಯುಷ್ಯವಿಲ್ಲವೆಂದು ತಿಳಿದು ಇದನ್ನು ಪೂರ್ತಿಬರೆದು ಪೂರೈಸುವ ಯೋಗ್ಯತೆಯುಳ್ಳ ಶಿಷ್ಯರನ್ನು ಪರೀಕ್ಷಿಸಬೇಕೆಂದು ಯೋಚಿಸಿದರು.

ಎದುರಿಗಿರುವ ಒಂದು ಮರದ ಕಡೆ ಕೈ ತೋರಿಸಿ ಅದನ್ನು ವರ್ಣಿಸುವಂತೆ ತನ್ನ ಶಿಷ್ಯರಿಗೆ ಹೇಳಿದರು. ಮೊದಲು ದಶರಥರೆಂಬ ಯತಿಗಳು ಹೇಳಿದರು 'ಶುಷ್ಕಂ ಕಾಷ್ಟಂ ತಿಷ್ಠತ್ಯಗ್ರೇ' ಎಂದು ಹೇಳುತ್ತಾ ಮುಂದುವರಿಸುತ್ತಿದ್ದ ಅವರನ್ನು ತಡೆದು, ಜಿನಸೇನರು ಹೇಳಿದರು ಸಾಕು ಸಾಕು ಈ ಶಬ್ದರಚನೆ ತುಂಬಾಕಠಿಣ, ಒರಟು ಕರ್ಕಶ ಕ್ಲಿಷ್ಟವಿದ್ದು ಈ ರೀತಿ ಇದೇ ಶೈಲಿಯಲ್ಲಿ ಪುರಾಣ ರಚನೆ ಆದರೆ ಅಂತಹ



ಪುರಾಣವನ್ನು ಓದಿ ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಮುಂದಿನ ಪೀಳಿಗೆಗೆ ಇಲ್ಲವಾಗುವುದು ಆದ್ದರಿಂದ ಸುಲಭವೂ ಸರಳವೂ ಆದ ಶೈಲಿಯಲ್ಲಿ ಹೇಳುವ ಸಾಮರ್ಥ್ಯ ಯಾರಿಗಿದೆ ಎಂದು ಹೇಳಲು ಅವರು ಇನ್ನೊಬ್ಬ ಶಿಷ್ಯರಾದ ಶ್ರೀ ಗುಣಭದ್ರಾಚಾರ್ಯರು ಆ ಮರದ ವರ್ಣನೆಯನ್ನು ಮಾಡುತ್ತಾ 'ನೀರಸ ತರುರಿಹ ಭಾತಿ ಪುರಸ್ತಾತ್' ಎಂದರು. ಅಂದರೆ ಒಂದು ಒಣ ಮರ ಮುಂದೆ ನಿಂತಿದೆ ಎಂಬ ಅರ್ಥಬರುವ ಈ ಮಾತಿನ ಸರಳವೂ ಸುಲಭವೂ ಸುಂದರವೂ ಆದ ಶಬ್ದರಚನೆಯಿಂದ ಶ್ರೀ ಗುಣಭದ್ರರೇ ಬರೆದು ಪೂರೈಸುವಂತೆ ತಿಳಿಸಿದರು. ದಶರಥಾಚಾರ್ಯರು ಇದರಿಂದ ಕುಪಿತರಾಗಲಿಲ್ಲ. ತನ್ನ ಒರಟುತನಕ್ಕೆ ಪಶ್ಚಾತ್ತಾಪ ಪಟ್ಟು ಗುರುಗಳಲ್ಲಿ ಕ್ಷಮೆ ಕೇಳಿ ಗುಣಭದ್ರಾಚಾರ್ಯರಿಗೆ ಸಹಾಯಕರಾಗಿ ನಿಂತರು. ಅದರಂತೆ ಆದಿಪುರಾಣದ ಪೂರ್ತಿ ರಚನೆಯಾಗುವ ಮುನ್ನವೇ ಭಗವದ್ ಜಿನಸೇನಾಚಾರ್ಯರು ಸಮಾಧಿ ಮರಣವನ್ನು ಹೊಂದಿದರು ಅವರೇ ಮಹಾಪುರಾಣವನ್ನು ಪೂರ್ತಿರಚಿಸಿದ್ದರೆ ಅದು ಅದೆಷ್ಟು ದೊಡ್ಡದಾಗುತ್ತಿತ್ತೋ ಗೊತ್ತಿಲ್ಲ. ಆದಿಪುರಾಣ ಒಂದೇ 10 ಸಾವಿರ ಶ್ಲೋಕ ಪ್ರಮಾಣದಲ್ಲಿ ಬರೆದು ಮುಗಿಸಿದ್ದಾರೆ. ಈಗ ಇರುವ ಜೈನವೇದವೆನಿಸಿದ ಪ್ರಥಮಾನುಯೋಗವಾದ ಮಹಾಪುರಾಣವು ಸುಲಭ ಗ್ರಹಿಕೆಗಾಗಿಯೇ ರಚನೆಯಾದುದು. ಅದು ಹಿಂದೆ ಪ್ರಾಕೃತದಲ್ಲಿ ಸೂತ್ರ ರೂಪದಲ್ಲಿತ್ತು. ಆ ಸೂತ್ರಗಳು ಮುಂದಿನ ಪೀಳಿಗೆಗೆ ಸುಲಭವಾಗಿ ಅರ್ಥವತ್ತಾಗಿ ಬರೆದರು. ಈ ಪುರಾಣವೂ ಸಂಸ್ಕೃತದಲ್ಲಿತ್ತಾದ್ದರಿಂದ ಅರ್ಥವಾಗುವುದು ಕಷ್ಟವಾಗಿತ್ತು. ಅದನ್ನು ಹಿಂದೆ ಆಸ್ಥಾನ ವಿದ್ವಾನ್‌ರಾಗಿದ್ದ ಶ್ರೀ ಶಾಂತರಾಜಶಾಸ್ತ್ರಿಗಳು ಸರಳಗನ್ನಡ ಅನುವಾದ ಮಾಡಿದರು ಅದನ್ನು ವೈನಾಡಿನ ಧರ್ಮಾತ್ಮರು ಪ್ರಕಾಶಗೊಳಿಸಿದ್ದರೂ ಆ ಪ್ರತಿಗಳೂ ಮತ್ತೆ ಮುದ್ರಣವಾಗಿವೆ. ಇತ್ತೀಚೆಗೆ ಶ್ರೀ ಮಿರ್ಜೀ ಅಣ್ಣಾರಾಯರು ಮಹಾಪುರಾಣಸಾರವೆಂದು ತೀರಾ ಸುಲಭವಾಗಿ ತಿಳಿಯುವಂತೆ ಬರೆದಿದ್ದರೂ ಅವೂ ಅಲಭ್ಯವಾಗಿವೆ. ಶ್ರೀ ಜಿ. ಬ್ರಹ್ಮಪ್ಪನವರೂ ಬರೆದಿದ್ದಾರೆ.

'ಹೊಸಯುಕ್ತಿ ಹಳೆತತ್ತ್ವದೊಡಗೂಡೆ ಧರ್ಮ' ಎಂಬಂತೆ ಪೂರ್ವಾಚಾರ್ಯರುಗಳ ಮೂಲವನ್ನು ಉಳಿಸಿಕೊಂಡು ಅವುಗಳ ಅರ್ಥಮೌಲ್ಯ ಕೆಡದಂತೆ ಸರಳಗನ್ನಡದಲ್ಲಿ ಗ್ರಂಥಗಳು ಹೆಚ್ಚು ಪ್ರಕಟವಾಗಬೇಕು. ಮಹಾಪುರಾಣದಂತಹ ಗ್ರಂಥಗಳು ಎಷ್ಟೇ ಗಾತ್ರವಾಗಿದ್ದರೂ ಚಿಂತೆ ಇಲ್ಲ ಅದರಲ್ಲಿ ಹಲವು ತತ್ತ್ವ, ಕಥೆ, ಧರ್ಮ, ಸಿದ್ಧಾಂತಗಳು ತುಂಬಿರುವುದರಿಂದ ಅಂಥವು ಒಂದೊಂದು ಇದ್ದರೆ ಸಾಕು.

ಮೂಲವನ್ನು ಬಿಟ್ಟು ನಾನು ಬರೆಯಬೇಕು ಕವಿಯಾಗಬೇಕು, ಸಾಹಿತಿಯಾಗಬೇಕು ಎಂದು ಧರ್ಮಸಾಹಿತ್ಯಜ್ಞಾನದ ಬಂಡವಾಳವಿಲ್ಲದ ಬಡಾಯಿಯಾಗಿ ಬರೆದರೆ ಹೇಳುವ, ನಿರೂಪಿಸುವ ವಿಷಯವನ್ನು ನೇರವಾಗಿ ತಿಳಿಸದೆ ತಿರುಗು ಮುರುಗುಮಾಡಿದರೆ ತುಂಬಾ ಕ್ಲಿಷ್ಟವಾದ ರಚನೆಯಾಗುತ್ತದೆ. ''ಸಕಲ ಲಕ್ಷಣಕ್ಕಾಗಿ ಬಿರಿಸು ಮಾಡಿದರದು ಪುಸ್ತಕದ ಬದನೆಕಾಯಾಗಬಹುದು' ಎಂದು ರತ್ನಾಕರ ಕವಿಗಳು ಹೇಳಿರುವಂತೆ ರಚನೆಯು ಕ್ಲಿಷ್ಟವಾದರೆ ಅದು ಉಪಯೋಗಕ್ಕೆ ಬರುವುದಿಲ್ಲ.

ಇತ್ತೀಚೆಗೆ ಹಲವು ಪೂರ್ವಾಚಾರ್ಯರ ಗ್ರಂಥಗಳು ಪ್ರಕಟವಾಗಿವೆ. ಆದರೆ ಅವು ಹಳೆಗನ್ನಡದಲ್ಲೇ ಅಚ್ಚಾಗಿವೆ. ಉದಾಹರಣೆಗೆ ಪದಾರ್ಥಸಾರ, ಗೊಮ್ಮಟಸಾರ ಇತ್ಯಾದಿ. ಆದಕ್ಕೆ ಸರಳಗನ್ನಡದ ವ್ಯಾಖ್ಯಾನವಾಗಿದ್ದರೆ ಅವುಗಳ ಉಪಯೋಗ ಹೆಚ್ಚಾಗುತ್ತಿತ್ತು, ಸರಳ ಸುಲಭವಾಗಿ ಅರ್ಥವಾಗುವಂತಹ ಭರತೇಶ ವೈಭವಕ್ಕೇ ಸರಳಗನ್ನಡದಲ್ಲಿ ಅನುವಾದವಾಗಿ ಪುಸ್ತಕಗಳು ಹೊರಬಂದಿವೆ ಅಂದಮೇಲೆ ಪೂರ್ತಿ ಹಳೆಗನ್ನಡ, ಸಂಸ್ಕೃತ, ಪ್ರಾಕೃತದಲ್ಲೇ ಗ್ರಂಥಗಳು ಅಚ್ಚಾದರೆ ಜನರಿಗೆ ಉಪಯೋಗವಾಗುತ್ತವೆಯೇ?

ಕೆಲವು ಮೂಲಗ್ರಂಥಗಳು ಅನುವಾದವಾಗಿದ್ದರೂ ಅವೂ ತುಂಬಾ ಕ್ಲಿಷ್ಟವಾಗಿವೆ. ಅದಕ್ಕೇ ರಚನಾಕಾರನಿಗೆ ಸ್ವಲ್ಪ ಸಹಜತೆ ಇರಬೇಕು ಎನುತ್ತಾರೆ. **''ಮಳೆ ಇಲ್ಲದೆ ಪೊಯ್ನೀರಿಂ ಬೆಳಗುಮೇ ಧರೆ, ಮರುಗಿ ಕುದಿದು ಶಾಸ್ತ್ರದ ಬಲದಿದಲ್ಪಿಂ ಪೇಳ್ದೊಡಂ ಅದು ಕೋಮಳಮಕ್ಕುಮೇ ಸಹಜಮಿಲ್ಲದಾತನ ಕಬ್ಬಂ''** ಎಂದು ನಯಸೇನ ಕವಿಗಳು ಹೇಳಿದ್ದಾರೆ. ಜಗತ್ತಿನಲ್ಲಿ ಮಳೆ ಹುಯ್ದರೆ ಬೆಳೆ ಸಮೃದ್ಧವೇ ವಿನಹ ಕೇವಲ ನೀರನ್ನು ಹೊತ್ತು ಹುಯ್ದು ಬೆಳೆ ಬೆಳೆಯಲು ಸಾಧ್ಯವೇ? ಹಾಗೇ ನಾನೂ ಬರೆಯಬೇಕು ಎಂದು ಇಣಿಕಿ ತಿಣಿಕಿ ಬರೆದೂ ಅಳಿಸಿ ಅವರಿವರ ಕೃತಿಗಳ ವಿಷಯವನ್ನು ಕದ್ದು ಬರೆದರೆ ಅದು ಕೋಮಲವೂ ಸುಲಭ ಗ್ರಾಹ್ಯವೂ ಆಗಿರುವುದೇ? ಎಂದು ನಯಸೇನರು ಪೊಳ್ಳು ಜೊಳ್ಳು ಕವಿಗಳಿಗೆ ಛೀಮಾರಿ ಹಾಕಿದ್ದಾರೆ.

ಈ ರಚನಾಸಾಮರ್ಥ್ಯ ಕೆಲವರಿಗೆ ಹಿಂದಿನ ಸಂಸ್ಕಾರದಿಂದ ಬಂದಿರಬಹುದು. ಅಂಥವರು ಸಹಜ ಕವಿಗಳು. ಅವರು ಮಾಡಿದ ರಚನೆಗಳು ತುಂಬಾ ಪ್ರಭಾವ ಬೀರುತ್ತವೆ. ಅಂದ ಮಾತ್ರಕ್ಕೆ ಇನ್ನಿದ್ದವರು ಬರೆಯಬಾರದು. ಎಲ್ಲರಿಗೂ ಹಳೆಯ ಸಂಸ್ಕಾರವೇ ಬೇಕು ಎಂದಲ್ಲ. ತಾವು ಬರೆಯಬೇಕೆಂಬ ಆಕಾಂಕ್ಷೆ ಇರುವವರು



ಪೂರ್ವಾಚಾರ್ಯರ ಗ್ರಂಥಗಳನ್ನು ಆಳವಾಗಿ ಅಭ್ಯಾಸ ಮಾಡಬೇಕು. ತಿಳಿದವರಿಂದ ಕೇಳಿ ತಿಳಿಯಬೇಕು. ವಿಷಯವನ್ನು ತಾನು ಮೊದಲು ಅರಿತು ಮನನ ಮಾಡಬೇಕು. ಹಿಂದಿನ ಕವಿಗಳ ಕಾವ್ಯದ ರಸಾ ಸ್ವಾದವನ್ನು ಮೊದಲು ತಾವು ಗ್ರಹಿಸಿ ನಂತರ ರಚನೆಗೆ ತೊಡಗಬೇಕು. **''ರಸಮಂ ನಾಲಗೆ, ಕವಿತಾರಸಮಂ ಕವಿ, ಕುಸುಮರಸಮನಳಿಮಾಲೆ, ಸುಧಾರಸಮಂ ಸುರರ್, ಅಕ್ಷಯಸುಖರಸಮಂ ಪರಮಾತ್ಮನರಿವನ್''** ಎಂದು ನಾಗಚಂದ್ರ ಕವಿಗಳು ಹೇಳಿರುವಂತೆ ನಾಲಿಗೆ ರುಚಿಯನ್ನು ತಿಳಿಯುತ್ತದೆ. ಕವಿಗೆ ಕಾವ್ಯದ ರಸ ರುಚಿಸುತ್ತದೆ. ಹೂವಿನ ಸೌರಭ್ಯದ ಸವಿ ದುಂಬಿಗೆ ಗೊತ್ತಾಗುತ್ತದೆ. ಅಮೃತದ ರುಚಿ ದೇವತೆಗಳಿಗೆ ಮಾತ್ರ ಗೊತ್ತು ಹಾಗೇ ಅಕ್ಷಯ ಸುಖದ ಸವಿಯ ಅನುಭವ ಸಿದ್ಧಪರಮಾತ್ಮನಿಗೆ ಮಾತ್ರ ಗೊತ್ತು. ಹಾಗೆ ಮೊದಲು ಪೂರ್ವಾಚಾರ್ಯರ, ಕವಿಗಳ ಕಾವ್ಯಕುಸುಮದ ಸೌರಭವನ್ನು ಹೀರುವಂತಹ ದುಂಬಿಯಾಗಿ ಅಂದರೆ ಅವುಗಳ ಸಾರವನ್ನು ಗ್ರಹಿಸಿ ಅವುಗಳ ಮಹತ್ವವನ್ನು ತಿಳಿದು ತನ್ನ ರಚನೆಗೆ ಬೇಕಾದ ಪೂರಕ ಗ್ರಂಥಗಳ ಆಧಾರದಿಂದ ರಚಿಸಿದರೆ ತನ್ನ ರಚನೆಗೆ ಮಹತ್ವ ದೊರೆಯುತ್ತದೆ. ಅದು ಸುಲಭ ಗ್ರಾಹ್ಯವಾಗಿದ್ದಲ್ಲಿ ಹೆಚ್ಚು ಜನಪ್ರಿಯವಾಗಿ ಸದುಪಯೋಗವಾಗುತ್ತದೆ.

ಯಾರೋ ಒಬ್ಬರು ಓರ್ವ ಸಾಹಿತಿಯನ್ನು ಕೇಳಿದರು ''ಏನ್ರೀ ನಿಮ್ಮ ಪುಸ್ತಕ ಸ್ವಲ್ಪವೂ ಅರ್ಥವಾಗುತ್ತಿಲ್ಲ.'' ಅದಕ್ಕೆ ಆ ಸಾಹಿತಿಗಳು ಹೇಳಿದರು. ''ನಿಮಗೆ ಅರ್ಥವಾಯಿತೋ ಇಲ್ಲವೋ ನನಗೆ ತಿಳಿಯದು, ಆದರೆ ನನಗೆ ಮಾತ್ರ ಅರ್ಥವಾಯಿತು.'' ಎಂದು ಬೆರಳನ್ನು ಮೀಟಿ ಜೇಬಿನ ಕಡೆ ಕೈ ತೋರಿಸಿದರಂತೆ. ಅಂದರೆ ಅವರ ಪುಸ್ತಕಗಳು ಯಾರದೋ ಶಿಫಾರಸ್‌ನಿಂದ ಪಠ್ಯ ಪುಸ್ತಕವಾಗಿದ್ದವು ಹಣ ತುಂಬಾ ಬಂದಿತು. ಅರ್ಥವಾಗಲೀ ಬಿಡಲಿ ಅವರಿಗಂತೂ ಅರ್ಥ ಬಂದಿತ್ತು ಅಂದರೆ ಜೇಬು ತುಂಬಿತ್ತು. ಹೀಗೆ ಕೆಲವರಿಗೆ ಆಕಸ್ಮಾತ್ ಛಾನ್ಸ್ ಒದಗಿಬಿಡುತ್ತವೆ.

ಇಂದಿನ ಪೀಳಿಗೆಗೆ ಧರ್ಮದ ಮಾರ್ಗದರ್ಶನ ಬೇಕು. ಅದು ಇಲ್ಲದ್ದರಿಂದಲೇ ಅಶಾಂತಿ, ಕ್ರಾಂತಿ, ಅನೈತಿಕತೆ, ಅನಾಚಾರಗಳು ಹೆಚ್ಚಾಗಿವೆ. ಇವು ಧರ್ಮದ ತಿಳಿವಳಿಕೆ ಇಲ್ಲದ್ದರಿಂದ ಮತ್ತು ಈ ತಿಳಿವಳಿಕೆಯನ್ನು ಹೇಳುವ ಪ್ರಚಾರಕರೂ ಇಲ್ಲದ್ದರಿಂದಲೂ ಧರ್ಮದ ಪ್ರಚಾರ ಮಾಡುವ ಸರಳ ಸುಲಭ ಸಾಹಿತ್ಯ ಇಲ್ಲದೇ ಇರುವುದೂ ಕಾರಣವಾಗಿದೆ.

ಜನರಲ್ಲಿ ಓದುವ ಹವ್ಯಾಸ ಹೆಚ್ಚಾಗಬೇಕು. ಹಾಗೆಂದರೆ ಸಮಯವಿಲ್ಲ ಎನ್ನುತ್ತಾರೆ. ಅಂದಾಗ ಸಿನಿಮಾ ನೋಡಲು, ಕಾದಂಬರಿ ಓದಲು ಇಸ್ಪೀಟ್ ಆಡಲು,

ಹರಟೆ ಹೊಡೆಯಲು, ಗೇಲಿಮಾಡಲೂ, ಬೀದಿ ಬೀದಿ ತಿರುಗಲೂ ಸಮಯವಿದೆಯಲ್ಲವೆ? ಇದ್ದದ್ದರಲ್ಲಿಯೇ ಬಿಡುವು ಮಾಡಿಕೊಂಡು ದಿನದಲ್ಲಿ 10-15 ನಿಮಿಷವಾದರೂ ಈ ಧಾರ್ಮಿಕ ಸಾಹಿತ್ಯವನ್ನು ಓದಲು ತೊಡಗಿದರೆ ಇಡೀ ಜೀವಮಾನದಲ್ಲಿ ಹಲವು ಗ್ರಂಥಗಳನ್ನು ಓದಿ ಮುಗಿಸಬಹುದು. ಧರ್ಮದ ಗ್ರಂಥಗಳ ಓದಿನಿಂದ ಆಗುವ ಉಪಯೋಗವನ್ನು ಹೀಗೆ ಹೇಳಿದ್ದಾರೆ.

ಅಣ್ಣಾಣವಿಣಾಸೋ। ಣಾಣದಿವಾರಯಸ್ಸ ಉಪ್ಪತ್ತಿ
ಪಡಿಸಮಯಂ ಅಂಸಖೇಜ್ಜ
ಗುಣಸೇಢೀ ಕಮ್ಮ ಣಿಜ್ಜರಾ ಹೋಇ ।

ಅಂದರೆ ಓದಿನಿಂದ ಅಜ್ಞಾನದ ವಿನಾಶವೂ, ಸುಜ್ಞಾನ ಪ್ರಕಾಶವೂ, ಕರ್ಮನಿರ್ಜರೆಯೂ, ಆತ್ಮೋನ್ನತಿಯೂ ಆಗುತ್ತದೆ. ಅದಕ್ಕೇ "ಸ್ವಾಧ್ಯಾಯಂ ಪರಮಂ" ತಪಃ ಎಂದಿದ್ದಾರೆ. ಈ ಸ್ವಾಧ್ಯಾಯದಿಂದ ಏಕಕಾಲದಲ್ಲಿ ಹಲವು ಉಪಯೋಗಗಳಾಗಿ ಬಾಳು ಹಸನಾಗುತ್ತದೆ.

ನಮ್ಮ ಹಿರಿಯರು ಮಕ್ಕಳಿಗೆ ಧರ್ಮಗ್ರಂಥಗಳನ್ನು ಓದಲು ಪ್ರೇರೇಪಿಸ ಬೇಕು. ಶಿಕ್ಷಣ ಶಿಬಿರಗಳನ್ನು ಏರ್ಪಡಿಸುವುದು, ಧಾರ್ಮಿಕ ಸಭೆ ಉಪನ್ಯಾಸಗಳಿಗೆ ಕಡ್ಡಾಯವಾಗಿ ಬಂದು ಕೇಳುವಂತೆ ತಿಳಿಸಬೇಕು.

ನಮ್ಮಲ್ಲಿ ಶಿಶುಸಾಹಿತ್ಯ ಬಹು ಕಮ್ಮಿ. ಈ ಕೊರತೆಯನ್ನು ಗುರುಹಿರಿಯರೂ, ಸಾಹಿತಿಗಳೂ, ಪಂಡಿತರೂ, ವಿದ್ವಾಂಸರೂ ಈ ಕಡೆ ಗಮನ ಹರಿಸಿ ತುಂಬಬೇಕು. ದಪ್ಪ ದಪ್ಪ ಅಕ್ಷರದ, ಬಣ್ಣ ಬಣ್ಣದಿಂದ ಕೂಡಿದ ಚಿಕ್ಕ ಚಿಕ್ಕ ಧಾರ್ಮಿಕ ಕಥೆಗಳೂ ಸ್ಥೂಲವಾಗಿ ಧಾರ್ಮಿಕ ತತ್ತ್ವಗಳನ್ನು ತಿಳಿಸುವ ಕಿರುಹೊತ್ತಿಗೆಗಳೂ ಪ್ರಕಟವಾಗಿ ಮಕ್ಕಳನ್ನು ಆಕರ್ಷಿಸಿ ಓದುವಂತೆ ಪ್ರೋತ್ಸಾಹಿಸುವಂತೆ ಪ್ರಯತ್ನಿಸಬೇಕು. ಕೆಲವರು ಹಣದ ಆಸೆಯಿಂದ ಹಣ ಕೊಟ್ಟವರು ಹೇಳಿದಂತೆ ಬರೆಯತೊಡಗಿದ್ದಾರೆ. ಇದರಿಂದ ಧರ್ಮದ ಮೂಲ ಸಿದ್ಧಾಂತವು ಕಲುಷಿತವಾಗಿ ಜೊಳ್ಳು-ಪೊಳ್ಳಾಗುತ್ತದೆ. ಮುಂದಿನ ಜನಾಂಗ ಯಾವುದು ಸತ್ಯ ಯಾವುದು ಅಸತ್ಯ ಎಂದು ನಿರ್ಣಯಿಸುವುದು ಕಷ್ಟವಾಗುತ್ತದೆ.

ಜೈನ ಧರ್ಮವು ಆಚಾರ ಪ್ರಧಾನವಾದುದು ಆದರೆ ಇಲ್ಲಿಯೂ ಯಾರಿಂದಲೋ ಹೇಗೋ ಕೆಲವು ಮೂಢನಂಬಿಕೆಗಳು ನುಸುಳಿ ಬಂದಿವೆ. ಅದಕ್ಕೆ ಆಧಾರವೇ ಇಲ್ಲ ಇಂತಹವುಗಳನ್ನು ತೊಲಗಿಸಲು ಬೇಕಾದ ಸಾಹಿತ್ಯ ರಚನೆಯೂ ಆಗಬೇಕು.



ಜೈನ ಧರ್ಮದ ಯಾವುದೇ ಆಚಾರವೂ ಕಡ್ಡಾಯವಾಗಿ ಒಮ್ಮೆಲೆ ಎಲ್ಲವನ್ನು ಮಾಡಿರಿ ಎಂಬ ಒತ್ತಾಯವಿಲ್ಲ. ತನಗೆ ಶಕ್ತಿ ಇದ್ದಷ್ಟನ್ನು ಮಾಡಬಹುದಾಗಿದೆ. ಮಾಡುವಷ್ಟನ್ನಾದರೂ ಚೆನ್ನಾಗಿ ತಿಳಿದು ಮಾಡಿದರೆ ಫಲ ಹೆಚ್ಚು, ವಿಚಾರಪೂರಿತವಾದ ಆಚಾರಕ್ಕೆ ಮಹತ್ವ ಹೆಚ್ಚು. ಇಂತಹ ಆಚಾರ- ವಿಚಾರಗಳನ್ನು ಪ್ರಚಾರ ಮಾಡಲು ಸರಳ ಶೈಲಿಯ ಸುಲಭ ಗ್ರಹಿಕೆಯ ಸಾಹಿತ್ಯ ಹೊರ ಬರಬೇಕು. ರಚನೆಯು ಪದ್ಯಕ್ಕಿಂತ ಗದ್ಯವಿದ್ದರೆ ಬಹಳ ಒಳ್ಳೆಯದು. ಆದರೂ ಸುಲಭವಾಗಿ ಅರ್ಥವಾಗುವಂತಹ ಪದ್ಯಗಳಿದ್ದರೆ ಇನ್ನೂ ಪರಿಣಾಮಕಾರಿ.

ಉದಾಹರಣೆಗೆ

ಸತ್ಪುರುಷರ ಕಡುಕೋಪವು ತಾಪವು ।
ನಿಮಿಷಾರ್ಧದಿ ಮರೆತೋಗುವುದು ।
ನಿಷ್ಫಲಭ್ರಾಂತಿಯ ಮೂರ್ಖರ ದ್ವೇಷವು ।
ಮರಣಾಂತ್ಯದಿ ಸಹ ನಿಲ್ಲುವುದು. ॥

ಅರಸರ ವೈಭವ ಸುರರ ವಿಮಾನವು ।
ಧನಯೌವನ ಸಂಪದವೆಲ್ಲಾ ।
ನಿರುತವು ನೆನೆದರೆ ಇಂದ್ರಿಯಭೋಗವು ।
ಎಂದೂ ನಿಲ್ಲದು ಸ್ಥಿರವಿಲ್ಲ. ॥

ನರುಗಬ್ಬಿ ನೊಳಗಣ ಸವಿಯ ಕಾಣದೆ ಪಶು ।
ಹೊರಗಣೆಲೆಯ ಸವಿವಂತೆ ।
ಒಳಗರಿದಾತ್ಮ ತತ್ತ್ವವ ಕಾಣದೆ ಜನ ।
ಹೊರಗೆಳಸುವರಂಗಸುಖಕೆ ॥

ಇತ್ಯಾದಿ ರಚನೆಗಳಲ್ಲಿ ಧರ್ಮ ಮತ್ತು ತತ್ತ್ವಗಳು ಸುಲಭವಾಗಿ ತಿಳಿಯುತ್ತವೆ. ಜೈನಾಚಾರದ ಮೂಲಗುಣಗಳೆನಿಸಿದ ಮಧು, ಮದ್ಯ, ಮಾಂಸ ತ್ಯಾಗ ಅಹಿಂಸಾಪಾಲನೆ, ಸತ್ಯ ಹೇಳುವುದು, ಕಳವು ಮಾಡದಿರುವುದು, ಶೀಲ ಪಾಲನೆ, ಅತ್ಯಾಸೆ ಮಾಡದಿರುವುದು, ರಾತ್ರಿಭೋಜನ ತ್ಯಾಗ, ನೀರನ್ನು ಶೋಧಿಸಿ ಕುಡಿಯುವುದು ಮತ್ತೆ ಜಿನೇಂದ್ರಭಕ್ತಿ, ಜಿನಗುರು ಸೇವೆ, ಶಕ್ತಿ ಇದ್ದಷ್ಟು ದಾನ ಧರ್ಮ ಪರೋಪಕಾರ, ಸಧರ್ಮೀಯರಲ್ಲಿ ವಾತ್ಸಲ್ಯ ಮುಂತಾದವುಗಳನ್ನು ತಿಳಿಸಿ, ಉಳಿಸಿ, ಬೆಳೆಸುವಂತಹ ಸರಳ ಸುಂದರ ಸಾಹಿತ್ಯ ರಚನೆಯಾಗಿ ಅವು ಶ್ರೀ ಸಾಮಾನ್ಯನಿಗೂ ತಲುಪಿ ಮನೆ ಮನೆಗೂ ಮನಮನಕ್ಕೂ ಮುಟ್ಟಿ ಅವು

ಆದರ್ಶಬಾಳುವೆಯ ದಾರಿ ದೀಪವಾಗಬೇಕು. ಇದಕ್ಕೆ ಸಮಾಜದ ಮುಖಂಡರು ಮಠಾಧಿಪತಿಗಳು ಇತ್ತ ಗಮನಹರಿಸಿ ಸಾಹಿತಿಗಳಿಂದ ವಿದ್ವಾಂಸರಿಂದ ಸರಳಗನ್ನಡದ ಪುಸ್ತಕಗಳು ರಚನೆಯಾಗಿ ಪ್ರಕಟವಾಗುವಂತೆ ಮಾಡಬೇಕು. ಷಟ್‌ಖಂಡಾಗಮವು ಬೆಳುಗೊಳದ ಶ್ರೀಗಳ ನೇತೃತ್ವದಲ್ಲಿ ಕನ್ನಡಕ್ಕೆ ಅನುವಾದವಾಗಿ ಪ್ರಕಟವಾಗುತ್ತಿವೆ. ಇದು ಆಗತ್ಯವಾಗಿ ಆಗಬೇಕಾಗಿದ್ದ ಕಾರ್ಯ. ಈ ಬೃಹದ್ ಕಾರ್ಯವನ್ನು ಕೈಗೊಂಡ ಪೂಜ್ಯರು ನಿಜಕ್ಕೂ ಧನ್ಯರು.

# 45. ಆಚಾರ, ವಿಚಾರ, ಪ್ರಚಾರ

ಧರ್ಮಪಾಲನೆಯಲ್ಲಿ ಆಚಾರವೇ ದೊಡ್ಡದು. ವಿಚಾರ ಅದಕ್ಕೂ ದೊಡ್ಡದು. ಆಚಾರ ಮತ್ತು ವಿಚಾರಗಳನ್ನು ಸೇರಿಸುವ ಕೊಂಡಿಯೇ ಪ್ರಚಾರ.

ಆಚಾರಃ ಪ್ರಥಮೋ ಧರ್ಮಃ ನೃಣಾಂ ಶ್ರೇಯಸ್ಕರೋ ಮಹಾನ್ ।
ಇಹಲೋಕೇ ಪರಾ ಕೀರ್ತಿ ಪರತ್ರೇ ಪರಮಂ ಸುಖಮ್ ॥

ಅಂದರೆ-ಆಚಾರವೇ ಪ್ರಥಮ ಧರ್ಮದ ಚಿಹ್ನೆಯಾಗಿದೆ. ಆಚಾರವಂತನಿಗೆ ಶ್ರೇಯೋಭಿವೃದ್ಧಿಯೂ, ಇಹಲೋಕದಲ್ಲಿ ಅಪಾರ ಕೀರ್ತಿಯೂ, ಪರದಲ್ಲಿ ಸುಖವೂ ಉಂಟಾಗುತ್ತವೆ.

ಹೀಗೆ ಜೈನಧರ್ಮವಂತೂ ಆಚಾರಪ್ರಧಾನವಾದುದು. ಇದು ಅಹಿಂಸೆ ಎಂಬ ಬಲವಾದ ಬುನಾದಿ (ತಳಹದಿ)ಯ ಮೇಲೆ ರೂಪಿತವಾಗಿದೆ. ಅಹಿಂಸೆಯೇ ಧರ್ಮದ ಮೂಲ. ಈ ಅಹಿಂಸೆಯನ್ನು ಆಚರಿಸಿಯೇ ಕಾರ್ಯತಃ ತೋರಿಸಬೇಕು. ಆಚಾರದಲ್ಲಿ ನಿರತರೂ, ನಿಪುಣರೂ ಆದವರೇ ಆಚಾರ್ಯರು. ಅಂತಹ ಜೈನಾಚಾರ್ಯರು "ನೀನೂ ಇರು, ಇತರರೂ ಇರಲಿ" ಎಂಬ ವಿಶಾಲವಾದ ಮನೋಭಾವನೆಯ ಜೀವಹಿತವಾದ ಲೋಕಕಲ್ಯಾಣಕರವಾದ ಬೋಧೆಯನ್ನು ನೀಡಿದ್ದಾರಲ್ಲದೆ ತಾವೂ ನಡೆದು ತೋರಿಸಿದ್ದಾರೆ. ನಡೆ-ನುಡಿಯಿಂದಲೇ ಪುಣ್ಯ-ಪಾಪಗಳು ರೂಪಿತವಾಗುತ್ತವೆ. ಇವುಗಳ ಬಂಧದಿಂದಲೇ ಸುಖ-ದುಃಖಗಳ ಅನುಭವವಾಗುತ್ತದೆ. ಇದನ್ನೇ ಆಚಾರ್ಯರು "ಪರೋಪಕಾರಃ ಪುಣ್ಯಾಯ, ಪಾಪಾಯ ಪರಪೀಡನಂ" ಎಂದಿದ್ದಾರೆ. ಇದರಂತೆ ಪರರಿಗೆ ಉಂಟಾಗಿರುವ ನೋವು ಸಂಕಟ ದುಃಖ ಇವುಗಳನ್ನು ನಿವಾರಿಸಲು ಮಾಡುವ ಉಪಕಾರವು ದಯೆ, ಕರುಣೆ,



ಅಹಿಂಸೆ, ಅನುಕಂಪದಿಂದ ಕೂಡಿರುತ್ತದೆ. ಅದು ಅಂತಃಕರಣದಲ್ಲಿ ಸುಸ್ಥಿತವಾದ ಶಾಂತಭಾವನೆಯಿಂದ ಹೊರಹೊಮ್ಮಿ ಉಪಕಾರವನ್ನು ಮಾಡಿಸುತ್ತದೆ. ಆ ಸಂದರ್ಭದಲ್ಲಿ ಮನ, ವಚನ, ಕಾಯಗಳ ಕ್ರಿಯೆಯು ಶುಭವಿದ್ದು ಪುಣ್ಯಸಂಚಯವಾಗುತ್ತದೆ. ಇದೇ ಅಹಿಂಸೆಯ ಕಾರ್ಯರೂಪ. ಇದಕ್ಕೆ ವಿರುದ್ಧವಾಗಿ ಪರರಿಗೆ ದುಃಖ, ನೋವು, ಸಂಕಟಗಳನ್ನು ಉಂಟು ಮಾಡುವಾಗ ಕ್ರೋಧ, ಮಾನ, ಮಾಯಾದಿಗಳಿಂದ ಪ್ರೇರಿತರಾಗಿ ಪರಪೀಡೆಯನ್ನು ಮಾಡುತ್ತಾರೆ. ಆಗ ಮನ, ವಚನ, ಕಾಯಗಳ ಕ್ರಿಯೆಯು ಅಶುಭವಾಗಿ ಪಾಪಕರ್ಮ ಸಂಚಯವಾಗುತ್ತದೆ ಇದೇ ಹಿಂಸಾಕ್ರಿಯೆ. ಹೀಗೆ ಸದಾಚಾರದಿಂದ ಸುಖ ಮತ್ತು ಸದ್ಗತಿಯೂ, ದುರಾಚಾರದಿಂದ ದುಃಖ ಮತ್ತು ದುರ್ಗತಿಯೂ ಜೀವನಿಗೆ ಉಂಟಾಗುತ್ತದೆ. ಕ್ರಿಯಾಪ್ರಧಾನವೂ ಭಾವಶುದ್ಧಿ ಪೂರ್ವಕವೂ ಆದ ಅಹಿಂಸೆಯನ್ನು ತನ್ನ ಧರ್ಮದ ಮೂಲವನ್ನಾಗಿ ಬೋಧಿಸಿರುವ ಜೈನಧರ್ಮದ ಆಶ್ರಯದಿಂದ ಮಾನವ ದೇವನಾಗಬಲ್ಲ. ಜೀವ ಜೀವನ್ಮುಕ್ತನಾಗ ಬಲ್ಲದು, ಪತಿತ ಪಾವನನಾಗಬಲ್ಲ.

ಚಾರಿತ್ರ್ಯವು ಮಾನವ ಜನ್ಮದ ಸರ್ವೋತ್ತಮವಾದ ಆಭರಣದಂತೆ ಭೂಷಿತವಾಗಿದೆ. ವಾಸ್ತವಿಕವಾಗಿ ಪಶು ಮತ್ತು ಮಾನವರ ಭೇದವಿಂಗಡಣೆಯು ಈ ಚಾರಿತ್ರ್ಯದ ಕಾರ್ಯಾಚರಣೆಯಿಂದಲೇ ಆಗಿದೆ. ಪಶುವಿಗಿಂತ ಮಾನವನಲ್ಲಿ ಕಾಣುವ ಹೆಚ್ಚುಗಾರಿಕೆಯೆಂದರೆ ಚಾರಿತ್ರ್ಯವೇ ಅಥವಾ ಆಚಾರವೇ ಆಗಿದೆ. ಆದುದರಿಂದ ಚಾರಿತ್ರಹೀನನನ್ನು ಪಶುಸಮಾನನೆಂದು ಪರಿಗಣಿಸಲಾಗಿದೆ. "ಚಾರಿತ್ರೇಣ ವಿನಾ ಜೀವಾಃ ಪೃಥಿವ್ಯಾಂ ಪಶವೋ ಮತಾಃ॥" ಎಂದಿದ್ದಾರೆ ತಿಳಿದವರು. ಹಾಗೂ ಚಾರಿತ್ರ್ಯ ಗುಣದ ಪೂರ್ಣ ವಿಕಾಸವುಳ್ಳವನನ್ನೇ ಮಾನವನೆಂದು ತಿಳಿಯಲಾಗಿದೆ.

ಭಗವಾನರು ಆಚಾರವನ್ನು ಎರಡು ಪ್ರಕಾರವಾಗಿ ಬೋಧಿಸಿದ್ದಾರೆ. ಒಂದು ಶ್ರಾವಕಾಚಾರ, ಮತ್ತೊಂದು ಯತಿ ಆಚಾರ ಮೊದಲನೆಯದು ಗೃಹಸ್ಥಧರ್ಮ, ಎರಡನೆಯದು ಮುನಿಧರ್ಮ. ಒಂದು ಪ್ರವೃತ್ತಿಮಾರ್ಗ, ಮತ್ತೊಂದು ನಿವೃತ್ತಿಮಾರ್ಗ. ಮೊದಲನೆಯದು ಎರಡನೆಯದಕ್ಕೆ ಪೋಷಕವಾಗಿದೆ. ಮೊದಲು ಗೃಹಸ್ಥನಾಗಿ ಸದಾಚಾರವನ್ನು ಪಾಲಿಸಿ ಪರಿಣತನಾಗಿ ಮುಂದೆ ಯತ್ಯಾಚಾರವನ್ನು ಪಾಲಿಸಲು ಅರ್ಹನಾಗುತ್ತಾನೆ.

ಮಾನವನ ಅಂತಿಮ ಗುರಿ ಮೋಕ್ಷವನ್ನು ಹೊಂದುವುದು. ಅಂದರೆ ಜನ್ಮ-ಜರಾ-ಮರಣವೆಂಬ ತಾಪತ್ರಯದಿಂದ ಬಿಡುಗಡೆ ಹೊಂದಿ ನಿತ್ಯ ಸುಖವನ್ನು

ಪಡೆಯುವುದು. ಇದನ್ನು ಪಡೆಯಲು ಮಹಾವ್ರತಿಯಾಗಿ ಅಂತರಂಗ ಬಹಿರಂಗ ಪರಿಗ್ರಹಗಳನ್ನು ತ್ಯಜಿಸಿ ಪರಿಣಾಮ ಶುದ್ಧನಾಗಿ ಜ್ಞಾನ, ಧ್ಯಾನ, ತಪೋನಿರತನಾಗಿ ಗತಿಚಕ್ರದಲ್ಲಿ ಸುತ್ತಲು ಕಾರಣವಾದ, ತಾಪತ್ರಯಗಳಿಗೆ ಕಾರಣವಾದ ಕರ್ಮವನ್ನು ನಿರ್ಮೂಲ ಮಾಡಬೇಕು. ಈ ಆಚಾರದಲ್ಲಿ ನಿರತರಾದವರೇ ನಿರ್ಗ್ರಂಥ ಮುನಿಗಳು. ಇವರೇ ಮಹಾತ್ಮರು. ಇವರೇ ಮಹಾತ್ಯಾಗಿಗಳು. ಇವರ ಆಚಾರ ಮೇಲ್ದರ್ಜೆಯದು. ಇದಕ್ಕೆ ಪೋಷಕವಾಗಿ ಅಥವಾ ಇದಕ್ಕೆ ಕೆಳಮಟ್ಟದ್ದು ಶ್ರಾವಕಾಚಾರ. ಅಣುವ್ರತ, ಗುಣ ವ್ರತ, ಶಿಕ್ಷಾ ವ್ರತಗಳನ್ನು ಪಾಲಿಸುತ್ತ ಅನಾದಿಕಾಲದಿಂದ ಅಂಟಿಬಂದಿದ್ದ ಮಿಥ್ಯಾತ್ವವನ್ನು ಬಿಟ್ಟು ಸಮ್ಯಕ್ತ್ವವನ್ನು ಗ್ರಹಿಸಿ, ಅಹಿಂಸಾದಿ ವ್ರತಗಳನ್ನು ತನ್ನ ಯಥಾಶಕ್ತಿ ಪಾಲಿಸುತ್ತ ನಿಜವಾದ ದೇವ, ಗುರು, ಶಾಸ್ತ್ರಗಳಲ್ಲಿ ನಂಬಿಕೆ, ಶ್ರದ್ಧೆ, ಭಕ್ತಿಗಳನ್ನಿಟ್ಟು ತನಗೂ ಇತರರಿಗೂ ನೋವಾಗದಂತೆ ನಡೆಯುವವನೇ ಶ್ರಾವಕ. ಧರ್ಮದಲ್ಲಿ ಶ್ರದ್ಧಾವಂತನೂ, ವಿವೇಕಿಯೂ, ಕ್ರಿಯಾಶೀಲನೂ ಆದವನೇ ಶ್ರಾವಕ. ಈತ ದೇವಪೂಜಾದಿ ಸತ್ಕಾರ್ಯಗಳಲ್ಲಿ ತೊಡಗಿ ಸರಳ ಸತ್ಯ ವ್ಯವಹಾರ ನಡೆಸಿ ಮುಂದೆ ದಾರ್ಶನಿಕಾದಿ ನೆಲೆಗಳೆಂಬ ಮೆಟ್ಟಲು ಹತ್ತಿ ಉತ್ಕೃಷ್ಟ ಶ್ರಾವಕ ನೆನಿಸುತ್ತಾನೆ. ಈ ವೇಳೆಗಾಗಲೇ ಆತನಲ್ಲಿ ನೇಮ, ನಿಷ್ಠೆ, ವ್ರತ, ಉಪವಾಸಾದಿಗಳ ಪಾಲನೆಯಲ್ಲಿ ಪರಿಪಕ್ವತೆಯುಂಟಾಗಿದ್ದು ಸತ್ಪರಿಣಾಮಿಯಾಗಿರುತ್ತಾನೆ ಈತನ ವ್ಯವಹಾರವೂ ನಿಶ್ಚಯಕ್ಕೆ ಅಡಿಪಾಯವಾಗಿರುತ್ತದೆ ಈ ವ್ಯವಹಾರವೂ ಮಾಯಾಚಾರವಿಲ್ಲದೆ, ಆಡಂಬರವಿಲ್ಲದೆ, ಮೋಸ, ವಂಚನೆ, ಠಕ್ಕುಗಳಿಲ್ಲದೆ ಸರಳ, ಸಾತ್ವಿಕವಾಗಿದ್ದರೆ ಅದು ಸದ್‌ವ್ಯವಹಾರವೆನಿಸುತ್ತದೆ. ಈ ಚಾರಿತ್ರದಲ್ಲಿ ಶೀಲ ಪಾಲನೆಗೆ ಬಹಳ ಮಹತ್ವವುಂಟು, ಪೂಜ್ಯತೆಯುಂಟು. ಇವರ ಮಾತಿಗೆ ಬೆಲೆಯುಂಟು. ಈ ಆಚಾರವು ವಿಚಾರದಿಂದ ಕೂಡಿದ್ದರೆ ಮಾತ್ರ ಸದಾಚಾರವೆನಿಸುತ್ತದೆ. ಜೈನ ಧರ್ಮದಲ್ಲಿ ಪ್ರತಿಯೊಂದು ಆಚಾರವೂ ಅದು ಅಣುವ್ರತವಾಗಲೀ, ಮಹಾವ್ರತವಾಗಲೀ ಅದರಲ್ಲಿ ಒಂದಲ್ಲ ಒಂದು ವಿಚಾರಪೂರಿತ ಉದ್ದೇಶವಿದ್ದೇ ಇರುತ್ತದೆ. ವಿಚಾರವಿಲ್ಲದ ಆಚಾರ ಅಂಧಶ್ರದ್ಧೆ ಎನಿಸುತ್ತದೆ. ಕುರುಡು ನಂಬಿಕೆ ಎನಿಸುತ್ತದೆ. ಕಂದಾಚಾರವೆನಿಸುತ್ತದೆ. ಈಗ 'ಮಡಿ' ಎಂಬ ಆಚಾರದ ಒಂದಂಶವನ್ನೇ ತೆಗೆದುಕೊಂಡರೆ ಈ ಮಡಿಯ ಪೂರ್ಣ ವಿವರ, ಅರ್ಥ, ಉದ್ದೇಶದ ವಿಚಾರವನ್ನು ಅರಿತು ಅನುಸರಿಸುವವರು ವಿರಳ. ಏನೋ ಹಿಂದಿನವರು ಮಾಡುತ್ತಿದ್ದರು. ಅದನ್ನು ನಾವೂ ಮಾಡುತ್ತಿದ್ದೇವೆಂಬ ಪರಿಪಾಟಿ ಬಂದಿದೆ. ಬೇರೆಯವರು ನಮ್ಮನ್ನು ಮುಟ್ಟಬಾರದು ಎಂಬ ಒಂದೇ ದೃಷ್ಟಿಯನ್ನಿಟ್ಟುಕೊಂಡು ಎಗರಾಡುವ ಕ್ರಿಯೆಯೇ ಮಡಿ ಎಂದು ಬಾಹ್ಯಾಚರಣೆಯಾಗಿದೆ. ಇದು ಕೇವಲ ಹೊರದೃಷ್ಟಿ, ಬಾಹ್ಯಾಡಂಬರ



ಅಷ್ಟೇ. ಎಂದೋ ಒಗೆದ ಕೊಳೆ ತುಂಬಿದ ಬಟ್ಟೆ ಮಡಿ ಎಂದು ಧರಿಸುವುದು, ರೇಷ್ಮೆ ಸದಾಮಡಿ ಎಂದು ಧರಿಸುವುದೂ ಅನರ್ಥಕರ ಮಡಿ, ಮಡಿ ಎಂದು ಯಾವಾಗಲೂ ಬಡಬಡಿಸುತ್ತ (ಥೂ.... ಛೀಗುಟ್ಟುತ್ತ) ಅವರಿವರ ಮೇಲೆ ರೇಗಾಡುತ್ತ ಓಡಾಡುವುದಷ್ಟೇ ಮಡಿಯಲ್ಲ. ಇಂಥವರಿಗೆ ಕೇವಲ ಮಡಿಯ ಮೇಲಷ್ಟೇ ಗಮನವಿದ್ದು ತಾನು ಮಾಡಲು ಹೊರಟ ಕಾರ್ಯವನ್ನು ಮರೆತುಬಿಡುವ ಪ್ರಸಂಗಗಳೂ ಉಂಟು. ಇಂತಹ ಒಬ್ಬ ಹೆಂಡತಿಯನ್ನು ಕಂಡ ಗಂಡನೊಬ್ಬನು ಬೇಸರವಾಗಿ "ಮಡಿ ಮಡಿ ಎಂದು ಬಡಿವಾರದಿಂದ ಬಡಬಡಿಸುವೆ ಹೆಂಡತೀ.... ಅಯ್ಯೋ ಸಾಕು ಸಾಕು! ಏಕೆ ನನ್ನ ಪ್ರಾಣ ಹಿಂಡುತೀ" ಎಂದನಂತೆ. ಇಷ್ಟರಿಂದ ಮಾತ್ರಕ್ಕೆ ನಾನು ಮಡಿ ಮಾಡುವವರ ವಿರುದ್ಧವೆಂದಾಗಲೀ, ನಾನು ಮಡಿ ಮಾಡುತ್ತಿಲ್ಲವೆಂದಾಗಲೀ ಅಲ್ಲ. ಮಡಿ ಎಂದರೆ ನಡೆ-ನುಡಿಯಲ್ಲಿ ಸ್ವಚ್ಛತೆ-ಸರಳತೆ ಉಳ್ಳದ್ದೂ, ರಾಗ-ದ್ವೇಷವಿಲ್ಲದ್ದೂ, ಶೀಲಪಾಲನೆ, ಸತ್ಯ, ಸರಳ, ಮಧುರವಾದ ಮಾತೂ, ತನು-ಮನಗಳನ್ನು ಶುದ್ಧವಾಗಿಟ್ಟುಕೊಳ್ಳುವುದು ಮುಂತಾದ ಅಂತರಂಗ ಬಹಿರಂಗದಲ್ಲಿ ಶುದ್ಧತೆಗೆ ಮಡಿ ಎಂದು ವ್ಯಾಪಕವಾದ ಅರ್ಥವಾಗುತ್ತದೆ. ಜೊತೆಗೆ ಸ್ನಾನಾದಿ, ವಸ್ತ್ರಾದಿಗಳಲ್ಲೂ ಶುದ್ಧತೆ ಶುಭ್ರತೆಗಳು ಇರಬೇಕು. ಪೂಜೆ ಮಾಡುವಾಗ ಗುರುಗಳಿಗೆ ಆಹಾರ ಕೊಡುವಾಗ, ಧ್ಯಾನ ಮಾಡುವಾಗ, ನೋಂಪಿಗಳನ್ನು ಆಚರಿಸುವಾಗ ಮಡಿ ಇರಬೇಕು. ಮೈಯೊಂದು ಮಡಿಯಾಗಿದ್ದರೆ ಸಾಲದು. ಮನವೂ ಮಾತೂ ಮಡಿಯಾಗಿರಬೇಕು. ಬಟ್ಟೆಯೊಂದು ಮಡಿಯಾಗಿದ್ದು ಮನ, ಮಾತುಗಳು ಮೈಲಿಗೆಯಾಗಿದ್ದರೆ ಪ್ರಯೋಜನವಿಲ್ಲ. ಅನಾಚಾರಿಗಳು, ದುರಾಚಾರಿಗಳು, ಹಿಂಸಕ, ವಂಚಕರಿಂದ ದೂರವಿರಬೇಕು. ಅಂತಹವರ ನೆರಳೂ ಸಹ ಬೀಳಬಾರದು. ಹಾಗೆ ವರ್ತಿಸುವುದೇ ಮಡಿ. ಹೀಗೆ ವಿಚಾರಶೀಲರಾಗಿ ನಡೆಸುವ ಆಚರಣೆಗೆ ಮಹತ್ವ ಉಂಟು. ಸಮ್ಯಗ್‌ದೃಷ್ಟಿಯೂ, ವ್ರತಿಕನೂ ಆದವನು ಯಾವಾಗಲೂ ಮಡಿವಂತನಾಗಿರುತ್ತಾನೆ. ಸಪ್ತವ್ಯಸನಕ್ಕೆ ಬಲಿಯಾಗದವನೂ, ಕಷಾಯದಿಂದ ದೂರವಿರುವವನೂ ಸದಾ ಮಡಿಯಾಗಿಯೇ ಇರುತ್ತಾನೆ. ಹೀಗೆ ವಿಚಾರಸಹಿತರಾಗಿ ಭಾವಶುದ್ಧರಾಗಿ ಮಡಿ ಮಾಡಲಿ. ಅದಕ್ಕೆ ಮಾನ್ಯತೆ ಉಂಟು. ಜೈನರು ಗುಣಗ್ರಾಹಿಗಳು ಮತ್ತು ಗುಣಪೂಜಕರು. ದೇವ, ಶಾಸ್ತ್ರ, ಗುರುಗಳ ಗುಣಗಳನ್ನು ತಿಳಿದು ಅಂತಹ ಗುಣಗಳು ತನ್ನಲ್ಲಿಯೂ ಪ್ರಕಟವಾಗಲೆಂದೇ ಪೂಜಿಸುತ್ತಾರೆ, ವಂದನೆಗಳನ್ನು ಮಾಡುತ್ತಾರೆ.

ಯಾವ ಕಾರ್ಯವನ್ನೂ ಪೂರ್ವಾಪರ ತಿಳಿಯದೆ ವಿಚಾರಿಸದೆ ಮಾಡಿದರೆ, ಆಭಾಸವೂ, ಅನಾಹುತವೂ ಆಗುವುದು. ನೇಮಿಚಂದ್ರ ಸಿದ್ಧಾಂತಚಕ್ರವರ್ತಿಗಳು

ತಮ್ಮ ಗೊಮ್ಮಟಸಾರ ಜೀವಕಾಂಡದಲ್ಲಿ ಹೇಳಿದ್ದಾರೆ-

ಮಣ್ಣಂತಿ ಜದೋ ಣಿಚ್ಚಂ, ಮಣೇಣ ಣಿಉಣಾ ಮಣುಕ್ಕಡಾ ಜಮ್ಹಾ ।
ಮಣ್ಣುಬ್ಭವಾಯ ಸವ್ವೇ, ತಮ್ಹಾ ತೇ ಮಾಣುಸಾ ಭಣಿದಾ ॥೧೪೯॥

ಇದರಲ್ಲಿ ಮಾನವ ಗತಿಯ ಸ್ವರೂಪವನ್ನೇ ತಿಳಿಸಿದ್ದಾರೆ-ಯಾರು ನಿತ್ಯವೂ ಹೇಯ-ಉಪಾದೇಯ, ತತ್ವ ಅತತ್ವ, ಆಪ್ತ-ಅನಾಪ್ತ, ಧರ್ಮ-ಅಧರ್ಮ ಮುಂತಾದ ಗುಣ-ದೋಷಗಳನ್ನು ವಿಚಾರ ಮಾಡಿ ಗುಣಗ್ರಹಣೆ ಮಾಡುತ್ತಾರೋ ಅವರನ್ನು ಪೀಳಿಗೆಗೇ ಮನ್ವಂತರದಿಂದೂ ಸಾಗಿ ಬಂದವನನ್ನು ಮಾನವನೆನ್ನುತ್ತಾರೆ. ಅಧ್ಯಾತ್ಮಿಕ ಮತ್ತು ಭೌತಿಕ ಜಗತ್ತಿನಲ್ಲಿ ತನ್ನ ಅಭೀಷ್ಟಸಿದ್ಧಿ ಗಾಗಿ ವಿಚಾರ ಶಕ್ತಿ ಎಂಬ ಅಮೋಘ ಸಾಧನೆ ಬೇಕೇ ಬೇಕು.

"ಯಾದೃಶೀ ಭಾವನಾ ಯಸ್ಯ ಸಿದ್ಧಿರ್ಭವತಿ ತಾದೃಶೀ" ಎಂಬಂತೆ ಭಾವನೆಗೆ ತಕ್ಕಂತಹ ಸಿದ್ಧಿಯಾಗುತ್ತದೆಂಬ ಲೋಕೋಕ್ತಿಯು ಇದೇ ವಿಚಾರಶಕ್ತಿಯ ಮೇಲೆ ಆಧಾರಿತವಾಗಿವೆ.

ಒಮ್ಮೆ ಒಬ್ಬ ರಾಜನು ತನ್ನ ಮಗಳನ್ನೇ ಮೋಹಿಸಿ ಅವಳನ್ನು ಮದುವೆಯಾಗಬೇಕೆಂದು ಬಯಸಿ ತನ್ನ ಮಂತ್ರಿ ಜನರನ್ನು ಪ್ರಶ್ನಿಸುತ್ತಾನೆ,- 'ರಾಜನಿಗೆ ಇಷ್ಟವಾದುದು ಈ ರಾಜ್ಯದಲ್ಲಿ ಯಾವುದಾದರೂ ಇದ್ದಲ್ಲಿ ಅದನ್ನು ಆತನು ಭೋಗಿಸಬಹುದಲ್ಲವೆ?'

'ಓಹೋ ಅದಕ್ಕೇನಂತೆ? ರಾಜ್ಯ ರಾಜನದು. ರಾಜ್ಯದ ಪ್ರತಿಯೊಂದು ವಸ್ತುವೂ ರಾಜನದೇ ಅವನಿಗೆ ಇಷ್ಟ ಕಂಡದ್ದನ್ನು ಭೋಗಿಸಬಹುದೆಂದರು' ಅವಿಚಾರೀ ಸಭಾಸದರು. ಅದೇ ರಾಜ ಆ ಊರಿನಲ್ಲಿ ಜಿನಮಂದಿರದಲ್ಲಿದ್ದ ಜಿನಮುನಿಗಳಲ್ಲಿ ಅದೇ ಪ್ರಶ್ನೆಯನ್ನು ಕೇಳಿದ. ಅದಕ್ಕೆ ಮುನಿಗಳು, 'ರಾಜಾ ನೀನು ಭೋಗಿಸಲು ಬಯಸುವ ವಸ್ತು ಯಾವುದು?' ಎಂದು ಕೇಳಿದರು.

'ಯಾವುದಾದರೇನು? ನನ್ನ ಇಷ್ಟ' ಎಂದ ರಾಜ.

'ಹಾಗಾಗದು. ವಸ್ತುವಿನ ಗುಣ, ಸ್ವರೂಪ ಅಥವಾ ಇಂತಹುದು ಎಂದು ಗೊತ್ತಾಗದೆ ಹೇಳಲಾಗುವುದಿಲ್ಲ' ಎಂದರು ಮುನಿಗಳು. ಇವರನ್ನು ಕೇಳಿ ಫಲವಿಲ್ಲವೆಂದು ರಾಜ ಅವಿಚಾರಿಯಾಗಿ ತನ್ನ ವಿವೇಕವನ್ನು ಮೋಹದ ವಶ ಮಾಡಿ ಬಲವಂತದಿಂದ ಮಗಳನ್ನೇ ಮದುವೆಯಾದ. ಮುಂದೆ ಅವನ ವಂಶ



ನಿರ್ಮೂಲವಾಯಿತು, (ಕಾರ್ತಿಕೇಯ ಮುನಿಗಳ ಕಥೆ) ಹೀಗೆ ವಿಚಾರವಂತರ ನಡೆ-ನುಡಿಯೇ ಬೇರೆ. ಅವಿಚಾರಿಗಳ ವರ್ತನೆಯೇ ಬೇರೆ. ವಿಚಾರಶೂನ್ಯನು ಮಿಥ್ಯಾದೃಷ್ಟಿಯೂ, ವಿಚಾರಶೀಲನು ಸಮ್ಯಗ್‌ದೃಷ್ಟಿಯೂ ಆಗುತ್ತಾನೆ. ಮಿಥ್ಯೆಗಿಂತ ಶತ್ರುವಿಲ್ಲ, ಸಮ್ಯಕ್ತ್ವಕ್ಕಿಂತ ಮಿತ್ರನಿಲ್ಲ. ಇವೆರಡನ್ನೂ ಯೋಚಿಸಿ ನಡೆಯುವ ಶಕ್ತಿಯು ಮಾನವನಿಗಿದೆ.

ಇನ್ನು ಆಚಾರ ವಿಚಾರಗಳನ್ನು ಕೂಡಿಸುವ ಕೊಂಡಿ ಎಂದರೆ ಪ್ರಚಾರ. ಆಚಾರವನ್ನು ವಿಚಾರಮಾಡದೆ ಆಚರಿಸುವಂತಿಲ್ಲ ಎಂಬುದನ್ನು ತಿಳಿಸಿಕೊಡುವ ಸಾಧನವೇ ಪ್ರಚಾರ. ಈ ಸಾಧನ ಗುರುಮುಖೇನವಾಗಿರಬಹುದು, ಶಾಸ್ತ್ರ ಮುಖೇನವಾಗಿರಬಹುದು ಅಥವಾ ಭಾಷಣ, ಉಪದೇಶಗಳ ಮುಖಾಂತರ ವಾಗಿರಬಹುದು. ಅಂತೂ ಪ್ರಚಾರವಿಲ್ಲದೆ ಯಾವ ಆಚಾರ, ವಿಚಾರಗಳೂ ಜೀವನದಲ್ಲಿ, ಜನಾಂಗದಲ್ಲಿ ಜಗತ್ತಿನಲ್ಲಿ ಪ್ರಸಿದ್ಧವಾಗುವುದಿಲ್ಲ. ಧರ್ಮಾ ಚಾರವನ್ನೂ ಧರ್ಮ ವಿಚಾರವನ್ನೂ ಅನಾದಿಕಾಲದಿಂದಲೂ ತೀರ್ಥಂಕರರೇ ಆದಿಯಾಗಿ ಆಚಾರ್ಯರು, ಗುರುವರ್ಯರು ಪ್ರಚಾರ ಮಾಡಿಕೊಂಡು ಬಂದಿದ್ದಾರೆ. ತೀರ್ಥಾಧೀಶರು ಜ್ಞಾನ, ಧ್ಯಾನ, ತಪಾಚರಣೆಯನ್ನು ವಿಚಾರಪೂರ್ವಕವಾಗಿ ಮಾಡಿ, ಅನಾದಿಕಾಲದಿಂದ ಅಂಟಿಕೊಂಡು ಬಂದಿದ್ದ ಜ್ಞಾನಾವರಣಾದಿ ಕರ್ಮಗಳನ್ನು ಗೆದ್ದು, ಕೇವಲಜ್ಞಾನವನ್ನು ಹೊಂದಿ ಸರ್ವಜ್ಞರಾಗಿ ಸಮವಸರಣ ಸಭೆಯಲ್ಲಿ ವಿರಾಜಮಾನರಾಗಿ ಅನೇಕ ಕಡೆ ವಿಹರಿಸಿ, ಧರ್ಮ, ಕರ್ಮ, ಪಾಪ, ಪುಣ್ಯ, ಬಂಧ, ಮೋಕ್ಷ, ಲೋಕ, ಅಲೋಕ, ಜೀವ, ಅಜೀವ ಮುಂತಾದ ಸಕಲ ವಿಷಯವನ್ನೂ ಬಹುಕಾಲದವರೆಗೂ ಓಂಕಾರ ದಿವ್ಯಧ್ವನಿಯ ಮೂಲಕ ಪ್ರಸಾರ ಮಾಡಿದರು. ಇದು ನಿಜವಾಗಿಯೂ ಪ್ರಚಾರವೇ ಆಗಿದೆ. ಈ ಭಗವಂತನ ಉಪದೇಶದ ಸೂತ್ರಗಳನ್ನೇ ಮುಂದೆ ಯತಿಗಳು, ಆಚಾರ್ಯರು, ಪಂಡಿತರು, ವಿದ್ವಾಂಸರು ದೇಶದೇಶಗಳಲ್ಲಿ ವಿಹಾರ ಮಾಡಿ ಉಪದೇಶಗಳ ಮೂಲಕ, ಗ್ರಂಥರಚನಾ ಮೂಲಕ ಪ್ರಚಾರ ಮಾಡಿದರು. ಇದನ್ನೇ ಧರ್ಮ ಪ್ರಭಾವನೆಯೆಂದು ಕರೆಯಲಾಗಿದೆ.

ಈ ಧರ್ಮಪ್ರಭಾವನೆಯೂ ಸಮ್ಯಕ್ತ್ವದ ಅಂಗವೆಂದು ಸ್ವಾಮಿ ಸಮಂತಭದ್ರರು ನಿರೂಪಿರುತ್ತಾರೆ.

"ಅಜ್ಞಾನತಿಮಿರವ್ಯಾಪ್ತಿಮಪಾಕೃತ್ಯ ಯಥಾಯಥಾಂ! ಜಿನಶಾಸನ ಮಾಹಾತ್ಮ್ಯಪ್ರಕಾಶಃ ಸ್ಯಾತ್ಪ್ರಭಾವನಾ"

ಅಂದರೆ ಅಜ್ಞಾನವನ್ನು ದೂರಮಾಡಿ ಜಿನಧರ್ಮದ ಮಹಿಮೆಯನ್ನೂ ಆಚಾರ

ವಿಚಾರಗಳನ್ನೂ ಪ್ರಕಟಪಡಿಸಿ ಪ್ರಸಾರ ಮಾಡುವುದೇ ಪ್ರಭಾವನೆ ಎಂಬ ಅಂಗವಾಗಿದೆ.

ಈ ಪ್ರಭಾವನೆಯಲ್ಲಿ ಸ್ವಪ್ರಭಾವನೆ, ಪರಪ್ರಭಾವನೆ ಎಂದು ಎರಡು ಭೇದಗಳಿವೆ. ಸಮ್ಯಗ್ದರ್ಶನ-ಜ್ಞಾನಚಾರಿತ್ರರೂಪವಾದ ರತ್ನತ್ರಯಗಳನ್ನು ಚನ್ನಾಗಿ ಪಾಲಿಸಿ ತನ್ನ ಆತ್ಮನ ಉನ್ನತಿಗೆ ಪ್ರಯತ್ನಿಸುವುದು ಸ್ವಪ್ರಭಾವನೆ ಎನಿಸುತ್ತದೆ. ದಾನ, ಧರ್ಮಪ್ರಚಾರ, ಧರ್ಮಗ್ರಂಥಗಳನ್ನು ಪ್ರಕಟಿಸಿ, ಬರೆದು, ದಾನಮಾಡುವುದು, ಜಿನಬಿಂಬ, ಜಿನಮಂದಿರಗಳ ಸ್ಥಾಪನೆ, ಪಂಚಕಲ್ಯಾಣಾದಿಗಳನ್ನು ಮಾಡಿಸುವುದು, ಧರ್ಮಸಭೆಗಳನ್ನೇರ್ಪಡಿಸುವುದು, ಧಾರ್ಮಿಕ ಶಿಕ್ಷಣ ಕೊಡಿಸುವುದು ಮುಂತಾದ ಕ್ರಿಯೆಗಳೆಲ್ಲ ಪರಪ್ರಭಾವನಾ ಎನಿಸುತ್ತವೆ. ಈ ಎರಡೂ ಪ್ರಭಾವನೆಗಳು ಸೇರಿಯೇ ಧರ್ಮಪ್ರಚಾರವಾಗುತ್ತದೆ. ತೀರ್ಥಾಧೀಶರೇ ಆದಿಯಾಗಿ ಗುರುಗಳೆಲ್ಲ ತಮ್ಮ ಆತ್ಮ ಕಲ್ಯಾಣದಿಂದ ತಾವು ಕಂಡ ಸತ್ಯ, ಸುಖ, ಶಾಂತಿಯ ಉಪಾಯವನ್ನು ಲೋಕಕಲ್ಯಾಣಾರ್ಥವಾಗಿ ಬೋಧಿಸಿದರು.

ಹಿಂದೆ ಭಗವಂತನ ವಾಣಿಯು ಸಕಲರಿಗೂ ಅರ್ಥವಾಗುತ್ತಿತ್ತು. ನಂತರ ಮುಂದೆ ಬಂದ ಆಚಾರ್ಯರುಗಳು, ಉಪದೇಶಕರು, ಪಂಡಿತರು ಆಯಾ ಪ್ರದೇಶದ ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಗಳ ಮುಖಾಂತರ ಧರ್ಮಪ್ರಚಾರ ಮಾಡಿ, ಅನೇಕ ಗ್ರಂಥಗಳನ್ನು ಬರೆದಿಟ್ಟು ಅಮರರಾಗಿದ್ದಾರೆ. ಇಂದಿಗೂ ಈ ಕಾರ್ಯ ಅನೂಚಾನವಾಗಿ ಸಾಗಿಬಂದು ಪ್ರಚಾರವಾಗುತ್ತಿದೆ. ಧಾರ್ಮಿಕ ಶಿಕ್ಷಣ ಸಂಸ್ಥೆಗಳ ಮೂಲಕ, ಗ್ರಂಥಮಾಲೆಗಳ ಮೂಲಕ, ಧಾರ್ಮಿಕ ಪತ್ರಿಕೆಗಳ ಮೂಲಕ, ಧರ್ಮಸಭೆ, ಪೂಜಾವ್ಯವಸ್ಥೆ, ಪಂಚಕಲ್ಯಾಣಾದಿ ಪ್ರತಿಷ್ಠಾ ಸಮಾರಂಭಗಳ ಮೂಲಕ ಧರ್ಮಾಚಾರಗಳು, ಧಾರ್ಮಿಕ ವಿಚಾರಗಳು ಪ್ರಚಾರವಾಗುತ್ತಿದ್ದು ಧರ್ಮಜಾಗೃತಿ ಯಾಗುತ್ತಿದೆ. ಆದರೆ ಇಂದಿನ ರಂಗುರಂಗಿನ ಜೀವನಯಾಪನೆಯು ಕಲುಷಿತವಾದ ಆಡಂಬರದ ವಾತಾವರಣದಲ್ಲಿ ಇಷ್ಟೇ ಪ್ರಚಾರಸಾಲದು, ಭಗವಂತನ ವಾಣಿಯೂ ಆಚಾರ್ಯರ ಗ್ರಂಥಗಳೂ ಅವುಗಳ ಆಚಾರ ವಿಚಾರಗಳೂ, ಅವುಗಳಲ್ಲಿ ಅಡಗಿರುವ ಧರ್ಮಸತ್ವಗಳೂ ಇಂದಿನ ಜನತೆಗೆ ಅರಿವಾಗಲು ಇನ್ನೂ ಹೆಚ್ಚಿನ ಪ್ರಸಾರವಾಗಬೇಕಾಗಿದೆ. ಹೀಗೆ ಆಚಾರ, ವಿಚಾರ, ಪ್ರಚಾರ ಎಂಬಿವು ಬೇರೆಯಲ್ಲ. ಇವು ಮೂರರ ಮಿಲನವಾದರೇ ಧರ್ಮದೇಳಿಗೆ, ಧಾರ್ಮಿಕತೆಯಾಗುವುದು. ಈ ಮೂರರ ಮಿಲನ ಹೊಂದಿಯೇ ಸಮ್ಯಗ್‌ದೃಷ್ಟಿಯು ತನ್ನ ಜೀವನವನ್ನು ನಿರ್ವಹಿಸುತ್ತಾನೆಂಬುದನ್ನು ಶ್ರೀ ಮಾಘನಂದಿ ಆಚಾರ್ಯರು ತಮ್ಮ ಶಾಸ್ತ್ರಸಾರ ಸಮುಚ್ಚಯದಲ್ಲಿ ಹೇಳಿದ್ದಾರೆ-



ಜಿನಪೂಜೋತ್ಸವದಿಂ ಜಿನೇಂದ್ರಮಹಿಮಾ ಸಾನಂದದಿಂ ಜೈನ ಶಾ
ಸನವಿಸ್ತಾರಿತ ಹರ್ಷದಿಂ ಜಿನಪದಾಂ ಭೋಜಾನತೋತ್ಸಾಹದಿಂ ।
ಜಿನಧರ್ಮೋದ್ಗತ ಸಾರತತ್ತ್ವರುಚಿಯಿಂ ಶ್ರೀ ಜೈನಗೇಹಾವಲೋ
ಕನಸೌಖ್ಯಾಮೃತಲಂಪಿನಿಂ ಚರಿಯಿಪಂ ಸಮ್ಯಕ್ತ್ವಯುಕ್ತೋತ್ತಮಂ॥

ಸಾರಂಶ ಇಷ್ಟೇ- ಸಮ್ಯಗ್ ದೃಷ್ಟಿಯು ಆಚಾರವನ್ನು ವಿಚಾರಪೂರಿತವಾಗಿ ಆಚರಿಸಿ ಧರ್ಮಪ್ರಭಾವನೆಯನ್ನು ಮಾಡುತ್ತ ಸುಖಿ-ಸಂತೋಷದಿಂದ ಬಾಳುತ್ತಾನೆ. ಇಂತಹ ಸತ್ಪುರುಷನನ್ನು ಸಮ್ಯಕ್ತ್ವಯುಕ್ತೋತ್ತಮನೆಂದು ಕರೆಯಲಾಗಿದೆ.

## 46. ಏಕಾಗ್ರತೆ

ಒಬ್ಬ ಭಾವಶುದ್ಧನಾದ ಭಕ್ತನು ಭಗವಂತನ ಎದುರಿಗೆ ನಿಂತು ಅನನ್ಯ ಭಕ್ತಿಯಿಂದ ತಲ್ಲೀನನಾಗಿ ಹೇಳುತ್ತಾನೆ.

ಅದ್ಯಮಿಥ್ಯಾಂಕಾರಸ್ಯ ಹಂತಾ ಜ್ಞಾನದಿವಾಕರಃ ।
ಉದಿತೋಮಚ್ಛರೀರೇಸ್ಮಿನ್ ಜಿನೇಂದ್ರ ತವ ದರ್ಶನಾತ್ ॥

ಹೇ ಜಿನೇಶ್ವರಾ! ಇಂದು ನಿನ್ನ ದರ್ಶನದಿಂದ ಮಿಥ್ಯಾತ್ವವೆಂಬ ಅಂಧಕಾರ ವನ್ನು ನಾಶಮಾಡುವ ಜ್ಞಾನವೆಂಬ ಸೂರ್ಯನು ಈ ನನ್ನ ಶರೀರದಲ್ಲಿ ಉದಯಿಸಿದನು. ಎಂದು ಆ ಭಕ್ತ ನಿಷ್ಠೆಯಿಂದ ಮುಕ್ತಿಯ ಮಹಾನಂದದ ಮಹಡಿಯ ಮೆಟ್ಟಿಲನ್ನು ಹತ್ತುತ್ತಿದ್ದಾನೆ. ಹೀಗೆ ಯಾರೇ ಆಗಲಿ ಜೀವನದಲ್ಲಿ ಒಂದು ಗುರಿಯನ್ನು ಸಾಧಿಸಿ ಅದರಲ್ಲಿ ಸಫಲತೆಯನ್ನು ಪಡೆದು ತೃಪ್ತಿಯನ್ನು ಹೊಂದಲು ಏಕಾಗ್ರತೆ ಎಂಬ ಒಂದು ದಿವ್ಯ ಸಾಧನದ ಆಶ್ರಯ ಹೊಂದಬೇಕು, ಅದು ಬಾಹ್ಯದಲ್ಲಿ ದೊರೆಯುವುದಿಲ್ಲ. ತನ್ನಲ್ಲಿಯೇ ಇದೆ. ಹಾರಾಡುವ ಮನಸ್ಸನ್ನು ಒಂದೆಡೆ ಕೇಂದ್ರೀಕರಿಸಿ, ಒಂದು ಗುರಿಯ ಮಾರ್ಗದಲ್ಲಿ ಸಾಗುತ್ತ ಬಾಹ್ಯವನ್ನು ಮರೆತು, ಅಂತರ್ಮುಖಿಯಾಗುವುದೆ ಏಕಾಗ್ರತೆ. ಇದನ್ನೇ ತದೇಕಚಿತ್ತ, ತನ್ಮಯತೆ, ತಾದಾತ್ಮ್ಯತೆ, ಸ್ವಸಂವೇದನ, ಸ್ಥಿತಪ್ರಜ್ಞತೆ ಎನ್ನುತ್ತಾರೆ.

ಸಪ್ತ ವ್ಯಸನಗಳಲ್ಲಿ, ದುಶ್ಚಟಗಳಲ್ಲಿ ಮಗ್ನನಾಗಿ ಆ ಕಾರ್ಯಗಳಲ್ಲಿ ತೊಡಗುವುದೂ, ಅವುಗಳಲ್ಲಿ ಮನಸ್ಸನ್ನು ಜೋತುಬಿಡುವುದೂ ಏಕಾಗ್ರತೆ

ಯೆನಿಸುವುದಿಲ್ಲ. ಇದನ್ನು ದುಷ್ಟ ಪ್ರವೃತ್ತಿ, ಮನೋದೌರ್ಬಲ್ಯ ಎನ್ನಬಹುದು. ಕಾರಣ ಅವುಗಳ ಫಲ ದುಃಖಾನುಭವ ದುರ್ಗತಿಗೆ ಸಾಧನವಾದುದರಿಂದ ಇದನ್ನು ದುರಾಗ್ರತೆ ಎನ್ನಬಹುದು, 'ಚಿಂತಾನಿರೋಧಾತ್ ಏಕಾಗ್ರತಾ' ಎಂಬಂತೆ ಚಿಂತೆಯನ್ನು ಬಿಟ್ಟು ತದೇಕಚಿತ್ತದಿಂದ ಕ್ಷಣಕಾಲವಾದರೂ, ದೇವರಲ್ಲಿ ಭಕ್ತಿ ಸ್ವಾಧ್ಯಾಯ ಮತ್ತು ಗುರುಸೇವೆಯಲ್ಲಿ ಆಸಕ್ತಿ, ಆತ್ಮನಿರೀಕ್ಷಣೆಯಲ್ಲಿ ಪ್ರವೃತ್ತಿವುಂತಾದ ಕ್ರಿಯೆಗಳಲ್ಲಿಮನಸ್ಸನ್ನು ಕೇಂದ್ರೀಕರಿಸುವುದರ ಫಲ ಸುಖಾನುಭವ ಮತ್ತು ಸದ್ಗತಿಗೆ ಸಾಧನವಾದ್ದರಿಂದ ಇದಕ್ಕೆ ಏಕಾಗ್ರತೆಯೆನ್ನಬಹುದು. ಈ ಏಕಾಗ್ರತೆಯಿಂದ ಸ್ವಾತ್ಮಸ್ಥಿತವಾದ ಸದ್ಗುಣಗಳು ಪ್ರಕಟವಾಗಿ ದುರ್ಗುಣಗಳು ಮಾಯವಾಗುತ್ತವೆ. ಅನಂತಜ್ಞಾನ, ದರ್ಶನ, ಸುಖ, ವೀರ್ಯಗಳು ಅಂತರಾತ್ಮನಲ್ಲಿ ಸ್ಥಿತವಾಗಿವೆ. ಆದರೆ ಅಜ್ಞಾನ, ಮಿಥ್ಯಾತ್ವ, ಪ್ರಮಾದ ಕಷಾಯಯೋಗಗಳಿಂದ ಅವು ಮುಚ್ಚಿ ಹೋಗಿವೆ. ಅವುಗಳನ್ನು ಈ ಏಕಾಗ್ರತೆಯ ಸಾಧನದಿಂದ ಪ್ರಕಟಿಸಿಕೊಳ್ಳಬೇಕಾಗಿದೆ.

ಒಬ್ಬನು ದುಂಡಗೆ, ದಪ್ಪಗಿರುವ ಸೀಬೇಕಾಯಿಗಳನ್ನು ಕಂಡು ಅವನ್ನು ಕೊಂಡು ತಿಂದ. ಸ್ವಲ್ಪ ಹೊತ್ತಿನ ನಂತರ ಅವನಿಗೆ ಹೊಟ್ಟೆನುಲಿ ನೋವು ಬಂದಿತು. ಯಾರದೋ ಸೂಚನೆಯಂತೆ ಹರಳೆಣ್ಣೆಯನ್ನು ಕುಡಿದನು. ಒಂದೆರಡು ಸಾರಿ ಭೇದಿಯಾಯಿತು. ಸ್ವಲ್ಪ ಕಾಲದ ಮೇಲೆ ನೋವು ಇಲ್ಲದಂತಾಗಿ ಯಥಾಸ್ಥಿತಿಯಾದ. ಆಗ ಹೇಳುತ್ತಾನೆ. - "ಹೌದಪ್ಪ! ಈಗ ಹಾಯಾಗಿದ್ದೇನೆ" ಅಂದರೆ ಈ ಹಾಯತೆ ಮೊದಲಿರಲಿಲ್ಲವೋ? ಇತ್ತು. ಸೀಬೇಕಾಯಿ ತಿಂದುದರಿಂದಲ್ಲವೇ ಆ ನೋವು ಬಂದದ್ದು? ಹೀಗೆ ಮಿಥ್ಯಾತ್ವದಿಂದ ನಮಗೆ ನಮ್ಮತನ ಪ್ರಕಟವಾಗಿಲ್ಲ, ಅದಕ್ಕೆ ಸ್ವಾತ್ಮನಿಷ್ಠೆ,' ಏಕಾಗ್ರತೆ ಎಂಬ ಹರಳೆಣ್ಣೆಯನ್ನು ಕುಡಿದರೆ ಕರ್ಮನಿರ್ಜರೆಯಾಗಿ ಸುಖಾನುಭವ ಉಂಟಾಗುತ್ತದೆ. ಈ ಏಕಾಗ್ರತೆಗೆ ಭಕ್ತಿಯೇ ಬೀಜ, ಭಕ್ತಿ ಎಂಬುದು ಅಂತರಾತ್ಮನ ಶಕ್ತಿ. ಅದನ್ನು ಪ್ರಕಟಪಡಿಸಿಕೊಳ್ಳದ ವಿನಃ ಮುಕ್ತಿಯ ಮಾರ್ಗವೇ ಗೋಚರವಾಗುವುದಿಲ್ಲ, ಭಗವಂತನವಾಣಿಯಲ್ಲಿ ಭಕ್ತಿ, ಭಗವತ್‌ಸ್ವರೂಪರಾದ ಗುರುಗಳ ಗುಣಗಾನ, ಸೇವಾ, ಭಜನೆ ಮುಂತಾದುವುಗಳಲ್ಲಿ ನಿರತನಾಗಿ ಅವುಗಳನ್ನು ಮನವಿಟ್ಟು ತನ್ಮಯತೆಯಿಂದ ಮಾಡದಿದ್ದಲ್ಲಿ ಅದು ಕೇವಲ ಆಡಂಬರವೆನಿಸುತ್ತದೆ.

ಒಂದು ಊರಿನಲ್ಲಿ ಒಬ್ಬ ಮುನಿಗಳು ಚಾತುರ್ಮಾಸ ಮಾಡಿದ್ದರು. ಒಬ್ಬ ಶ್ರಾವಕ ನಿತ್ಯವೂ ಅವರನ್ನು ಬೆಳಿಗ್ಗೆ ಹೊತ್ತಿನಲ್ಲಿ ಕಾಡಿಗೆ (ಮಲವಿಸರ್ಜನೆಗೆ) ಕರೆದುಕೊಂಡು ಹೋಗಲು ಒಪ್ಪಿಕೊಂಡ. ಆದರೆ ಬರುಬರುತ್ತ ಅವನಿಗೆ ಸಾಕೆನಿಸಿತು, ಆದರೂ ಈಗ ನಾನು ಬಿಟ್ಟರೆ ಜನ ಏನೆಂದಾರು ಎಂದುಕೊಂಡು ಜನರು, "ಆಹಾ ಇವನೆಂತಹ ಗುರು ಭಕ್ತ! ನಿತ್ಯವೂ ತಪ್ಪದೇ ಬರುತ್ತಾನೆ' ಎನ್ನಲಿ ಎಂದು



ಹೋಗಿಬರುತ್ತಿದ್ದ. ನಿತ್ಯವೂ ಊರ ಹೊರಗೆ ಸುಮಾರು ಎರಡು ಮೈಲಿ ಹೋಗಿ ಬರಬೇಕಾಗಿತ್ತು. ಒಂದು ದಿನ ಹೀಗೆ ಹೋಗುತ್ತಿದ್ದಾಗ ಯಾರೋ ಇವನಿಗೆ ಗೊತ್ತಿರುವ ಒಬ್ಬಿಬ್ಬರು ಅವನನ್ನು ಕಂಡು, "ಏನ್ರೀ ನಿಮ್ಮ ಮನೆಯ ಮುಂದೆ ಜನ ಸೇರಿದ್ದರು. ಅಲ್ಲಿ ಕಳ್ಳತನವಾಗಿದೆಯಂತೆ. ನಿಮಗೆ ಗೊತ್ತಿಲ್ಲವೇ?" ಎಂದರು. ಸರಿ. ಕಮಂಡಲುವನ್ನು ಅಲ್ಲಿಯೇ ನೆಲದ ಮೇಲಿಟ್ಟು "ಅಯ್ಯೋ! ಏನಾಗಿ ಹೋಯಿತು" ಎಂದವನೇ ಮನೆಯತ್ತ ಓಡಿಯೇ ಬಿಟ್ಟ. ಇತ್ತ ಮುನಿಗಳು ತಾವೇ ಕಮಂಡಲುವನ್ನು ತೆಗೆದುಕೊಂಡು "ಏನು ಮೋಹದ ವಿಚಿತ್ರದಾಟ" ವೆಂದು ಮುಂದೆ ನಡೆದರು. ಅಷ್ಟರಲ್ಲಿ ಎದುರಿಗೆ ಒಬ್ಬ ಶ್ರಾವಕ ಹೊಟ್ಟೆಪಾಡಿಗೆ ಎಲ್ಲಿಯೋ ಹೋಗುತ್ತಿದ್ದ ಒಬ್ಬರೇ ಗುರುಗಳು ಹೋಗುತ್ತಿದ್ದುದನ್ನು ಕಂಡು ಓಡಿ ಬಂದು ಅವರಿಂದ ಕಮಂಡಲು ತೆಗೆದುಕೊಂಡು ಜೊತೆಯಲ್ಲಿ ಹೊರಟನು. ಎದುರಿನಿಂದ ಯಾತ್ರಾರ್ಥಿಗಳ ಬಸ್ಸು ಬಂದಿತು. ಅವರು ಗುರುಗಳನ್ನು ಕಂಡು ಬಸ್ಸು ನಿಲ್ಲಿಸಿ ಜೈಜೈಕಾರ ಮಾಡುತ್ತ ತಮಗೆ ತೋಚಿದಷ್ಟು ಹಣವನ್ನಿಟ್ಟು ನಮೋಸ್ತು ಮಾಡಿದರು. ವಿರಾಗಿಗಳಾದ ಆ ಮುನಿಗಳು ಅವರಿಗೆ 'ಸದ್ಧರ್ಮವೃದ್ಧಿರಸ್ತು' ಹೇಳಿ ಪಿಂಛಿಯಿಂದ ಆ ಹಣವನ್ನು ಕಮಂಡಲು ಹಿಡಿದವನ ಕಡೆ ನೂಕಿ "ತೆಗೆದುಕೋ; ನೀನೇ ಉಪಯೋಗಿಸಿಕೋ" ಎಂದರು ಆ ಶ್ರಾವಕನಿಗೆ ಒಂದು ನಿಧಿಯೇ ದೊರೆತಂತಾಯಿತು. ಸಾವಿರಾರು ರೂಪಾಯಿಗಳು ಇದ್ದುವು. ಅದನ್ನೇ ಬಂಡವಾಳ ಮಾಡಿಕೊಂಡು ವ್ಯಾಪಾರ ಮಾಡಿದ ಆದರಿಂದ ಜೀವನ ನಿರ್ವಹಣೆಯಾಯಿತು. ನಿತ್ಯವೂ ಗುರುಗಳ ಸೇವೆಯನ್ನು ತಪ್ಪದೇ ಮಾಡುತ್ತ ಬಂದನು.

ಇತ್ತ, ಓಡಿಹೋದ ಶ್ರಾವಕನು ಮನೆಯ ಹತ್ತಿರ ಹೋಗಿ, "ಏನು ಹೋಗಿದೆ" ಎಂದು ಕೂಗುತ್ತ ಜನ ಸಂದಣಿಯನ್ನು ನೂಕಿ ನುಗ್ಗಿದ. ಎದುರಿಗಿದ್ದ ಕಲ್ಲನ್ನೆಡವಿ ಬಿದ್ದ. ಮುಖ, ಕೈಕಾಲುಗಳು ಕಿತ್ತವು. ಅಲ್ಲಿ ಕಳವಾಗಿದ್ದು ಇವರ ಮನೆಯಲ್ಲಲ್ಲ, ಅವರ ಕಾಂಪೌಡಿನಲ್ಲಿದ್ದ ಬೇರೊಂದು ಮನೆಯಲ್ಲಿ. ಇದರಿಂದ ನಾಚಿಕೊಂಡ ಆತ ಮುನಿಗಳಿಗೆ ಮುಖ ತೋರಿಸದಾದ. ಮತ್ತೊಬ್ಬನಿಗೆ ಅಂದು ಆದ ಲಾಭವನ್ನು ಕೇಳಿ ಅವನಿಗೆ ಆದ ಸಂಕಟ ಅಷ್ಟಿಷ್ಟಲ್ಲ. ಇಲ್ಲಿ ಗೊತ್ತಾಗುವುದೇನೆಂದರೆ, ಇದು ಭಕ್ತಿಯಲ್ಲ; ಕೇವಲ ಆಡಂಬರಕ್ಕಾಗಿ ಮಾಡುತ್ತಿದ್ದ ಸೇವೆ, ಆದರಿಂದಲೇ ಫಲ ದೊರೆಯಲಿಲ್ಲ.

ಆದೇ ಹಿಂದೊಮ್ಮೆ ಧನಂಜಯನೆಂಬ ಒಬ್ಬ ಕವಿ ಜಿನಮಂದಿರದಲ್ಲಿ ಭಗವಂತನ ಎದುರಿಗೆ ಜಿನಪೂಜಾ ಸ್ತವನದಲ್ಲಿ ನಿರತನಾಗಿದ್ದನು. ಇತ್ತ ಮನೆಯಲ್ಲಿ ಅವನ ಏಕಮಾತ್ರ ಪುತ್ರನಿಗೆ ಹಾವು ಕಚ್ಚಿತು. ಗಾಬರಿಯಾದ ಅವನ ಪತ್ನಿ

ಮಗುವನ್ನು ಎತ್ತಿಕೊಂಡು ಮಂದಿರಕ್ಕೆ ಓಡಿಬಂದು ಕೂಗಾಡಲಾರಂಭಿಸಿದಳು. ಧನಂಜಯನು ವಿಚಲಿತನಾಗಲಿಲ್ಲ ಈಚೆಗೂ ಬರಲಿಲ್ಲ. ಕೊನೆಗೆ ಆಕೆ ಮಗುವನ್ನು ಪತಿಯ ಎದುರಿಗೆ ಮಲಗಿಸಿ, ಒಂದು ಮೂಲೆಯಲ್ಲಿ ಅಳುತ್ತ ನಿಂತಳು ಪೂಜೆಯಾದ ಮೇಲೆ ಧನಂಜಯನು ಪತ್ನಿಯನ್ನು ಹೀಗೇಕೆ ಮಾಡಿದೆ? ಶಾಂತಿ ಇರಲಿ ನೀನೂ ಹೀಗೆ ಅಜ್ಞಾನಿಯಾಗಬೇಕೇ? ಮೂಲೆಯಲ್ಲಿ ಅಳುವುದಕ್ಕಿಂತ ಭಗವಂತನನ್ನು ಏಕಾಗ್ರತೆಯಿಂದ ಪ್ರಾರ್ಥಿಸಿದ್ದರೆ ಚನ್ನಾಗಿತ್ತು. ಇರಲಿ ಎಂದು ಭಕ್ತಿಯ ಶಕ್ತಿಯನ್ನರಿತಿದ್ದ ಧನಂಜಯನು ವಿಷಾಪಹಾರ ಸ್ತೋತ್ರವನ್ನು ಹೇಳಲಾರಂಭಿಸಿದನು. ಮಗುವು ನಿದ್ರೆಯಿಂದೆಚ್ಚತ್ತಂತೆ ನಗುನಗುತ್ತ ಎದ್ದಿತು.

ಹೀಗೆ ಏಕಾಗ್ರತೆಯ ಧ್ಯಾನದಲ್ಲಿ ಆತ್ಮಶಕ್ತಿ ಪ್ರಕಟವಾಗಿ ಅಪೂರ್ವವಾದ ಚಮತ್ಕಾರಗಳು ನಡೆದುಹೋಗುತ್ತವೆ. ಈ ಏಕಾಗ್ರ ಧ್ಯಾನದಿಂದ ಮನವನ್ನು ಆತ್ಮನಲ್ಲಿ ಬೆರಸಿ, ಬಾಹ್ಯವನ್ನು ಮರೆತು ಚಿನ್ಮಯನಲ್ಲಿ ತನ್ಮಯನಾದರೆ ಬಾಹ್ಯದ ಜಿನಬಿಂಬ ಆಂತರ್ಯದಲ್ಲಿ ಚೇತನವಾಗಿ ಕಂಡು ಒಂದು ರೀತಿಯ ಅಲೌಕಿಕಾನಂದವನ್ನು ಅನುಭವಿಸಬಹುದು. ರತ್ನಾಕರ ಕವಿ ಹೇಳಿರುವಂತೆ-

ತನು ಜಿನಗೇಹ ಮನ ಸಿಂಹಪೀಠ ।
ಅನುಪಮಾತ್ಮನೇ ಜಿನನೆಂದು ।
ನೆನಹನೆಲ್ಲವ ಬಿಟ್ಟು ಕಣ್ಮುಚ್ಚಿ ನೋಳ್ಪಾಗ ।
ಜಿನನಾಥ ತೋರುವನೊಳಗೆ ॥

ಧ್ಯಾನದ ಏಕಾಗ್ರತೆಯ ಗುಟ್ಟನ್ನು ರತ್ನಾಕರ ಈ ಪದ್ಯದಲ್ಲಿ ರಟ್ಟು ಮಾಡಿದ್ದಾನೆ. ಧ್ಯಾನವು ಮನದ ಏಕಾಗ್ರತೆಯಿಂದಲೇ ಸಿದ್ಧಿಸುವುದು. ಕೇವಲ ಜಪಸರವನ್ನು ಕೈಲಿ ಎಣಿಸುತ್ತಿದ್ದು ಮನಸ್ಸು ಹರಿದಾಡುತ್ತಿದ್ದರೆ ಅದು ಜಪವಲ್ಲ ಹಾಗೂ ಧ್ಯಾನವೂ ಅಲ್ಲ. ಕೇವಲ ಕಾಲಹರಣೆಯಷ್ಟೇ ತನು ಮಂದಿರದಲ್ಲಿದ್ದು, ಮನ ಮನೆಯಲ್ಲಿದ್ದರೆ ಏನು ಫಲ? ಮೈ ಬತ್ತಲೆ, ಮನ ಕತ್ತಲೆಯುಳ್ಳ ಮುನಿಯಂತೆ ಏಕಾಗ್ರತೆಯಿಲ್ಲದ ಜಪ ನಿಷ್ಫಲ. ಅದಕ್ಕೇ ಬಲವಂತವಾಗಿ ಆ ಮನವನ್ನು ಎಳೆದು ತಂದು ಹಿಡಿದ ಕೆಲಸದಲ್ಲಿ ನಿರತವಾಗುವಂತೆ ಮಾಡಬೇಕು. ಈ ರೀತಿ ಮಾಡಲು ನಿಷ್ಠೆ ಎಂಬುದೊಂದಿರಬೇಕು. ನಿಷ್ಠೆಯೇ ಸಮ್ಯಕ್ತ್ವ. ಅಂದರೆ ಸತ್ಯಾನ್ವೇಷಣೆಯಲ್ಲಿ ಆಸಕ್ತ ಎಂದರ್ಥ, ಈ ನಿಷ್ಠೆಗೆ ಭಕ್ತಿಯೇ ಬೀಜವಾಗಿದೆ ಎಂಬುದನ್ನು ಮರೆಯುವಂತಿಲ್ಲ. ಅದನ್ನು ರತ್ನಾಕರ ಕವಿ ಹೀಗೆ ಹೇಳಿದ್ದಾನೆ-

ಮುಕ್ತಿಯೊಳಲ್ಲದಿಲ್ಲ ಸುಖವಂತದು
ಕರ್ಮವಿನಾಶವಿಲ್ಲದೆ ।



ವ್ಯಕ್ತಿಗೆ ಬಾರದಾ ದುರಿತನಾಶಕೆ
ದೀಕ್ಷೆಯೇ ಬೇಕು ಮೋಹದಾ ।
ಶಕ್ತಿಯೊಳಿದ್ದವಂಗೆ ರುಚಿದೋರದು
ದೀಕ್ಷೆಯದರ್ಕೆ ನಿಮ್ಮ ಸ - ।
ದ್ಭಕ್ತಿಯೇ ಬೀಜಮೊಯ್ಯನದನೀವುದು
ಮುಂದಪರಾಜಿತೇಶ್ವರಾ ॥

ಸುಖಕ್ಕೆ ಮುಕ್ತಿಯೇ ತೌರೂರು. ಕರ್ಮವಿನಾಶವಾಗದ ಹೊರತು ಮುಕ್ತಿ ಲಭಿಸುವಂತಿಲ್ಲ. ದೀಕ್ಷಾಬದ್ಧನಾಗದೆ ಕರ್ಮವನ್ನು ಕಳೆಯುವುದಕ್ಕಾಗುವುದಿಲ್ಲ. ಮೋಹದಲ್ಲಿ ಮುಳುಗಿದವನಿಗೆ ದೀಕ್ಷೆ ತೆಗೆದುಕೊಳ್ಳಲು ಮನಸ್ಸು ಬರುವುದಿಲ್ಲ. ಕ್ರಮವಾಗಿ ಇವನ್ನೆಲ್ಲ ಸಾಧಿಸಿಕೊಳ್ಳಲು ಜಿನ ಭಕ್ತಿಯೇ ಬೀಜವಾಗಿದೆ. ಆದುದ ರಿಂದ "ಭಗವಂತಾ! ನನ್ನಲ್ಲಿ ಆ ಭಕ್ತಿಯು ಅಂಕುರವಾದರೆ ಸಾಕು'' ಎಂದು ರತ್ನಾ ಕರ ಹೇಳುತ್ತ "ಭಕ್ತಿ, ಶಕ್ತಿ, ಯುಕ್ತಿ ಇವಾಗಿ ಮುಕ್ತಿ'' ಎಂದು ಸಾರಿ ಅದಕ್ಕಾಗಿ ಬಾಹ್ಯದ ಮೋಹಜಾಲಕ್ಕೆ ಸಿಲುಕದೆ ನಿರ್ಮಲ ಚಿತ್ತದ ಏಕಾಗ್ರತೆಯಿಂದ ಧ್ಯಾನ ಮಾಡುತ್ತ ತನ್ನ ಸಿದ್ಧಾಂತವನ್ನು ಭಕ್ತಿಯ ಬುನಾದಿಯ ಮೇಲೆ ಸ್ಥಾಪಿಸಿದ್ದಾನೆ. ಮುಕ್ತಿಯ ತಾಯಿಬೇರು ಭಕ್ತಿ ಎಂದೂ, ಅದರಿಂದ ಆತ್ಮಶಕ್ತಿ ಉಂಟಾಗುವು ದೆಂದೂ ಇದರಿಂದ ಗೊತ್ತಾಗುತ್ತದೆ, ಇದೇ ನಿಷ್ಠೆಯನ್ನು ತೋರುತ್ತ ಭಗವಂತ ನೆದುರಿಗೆ ಏಕಾಗ್ರತೆಯಿಂದ ಧ್ಯಾನ ಮಾಡುತ್ತ ಪಂಪ ಕವಿ ಹೇಳಿದ್ದಾನೆ- "ಉತ್ತಮ ದೀಕ್ಷಾವಿಧಿಯುಂ, ಸಮಾಧಿ ಮರಣಂ, ಕರ್ಮಕ್ಷಯಂ, ಬೋಧಿ ಲಾಭಂ ಅಮೋಘಂ ದೊರೆಕೊಳ್ವುದಕ್ಕೆ ಮಗೆ ಮುಕ್ತಿ ಶ್ರೀಮನೋವಲ್ಲಭಾ.''

ಇದನ್ನೇ ಭಗವದ್ ಕುಂದಕುಂದಾಚಾರ್ಯರು ತಮ್ಮ ದಶಭಕ್ತಿಯಲ್ಲಿ ಹೇಳಿದ್ದಾರೆ-

"ಣಿಚ್ಚ ಕಾಲಮಚ್ಚೇಮಿ, ಪೂಜೇಮಿ, ವಂದಾಮಿ,
ಣಮಂಸಾಮಿ, ದುಕ್ಖಕ್ಖಓ, ಕಮ್ಮಕ್ಖಓ, ಬೋಹಿ
ಲಾಹೋ, ಸುಗಇಗಮಣಂ. ಸಮಾಹಿಮರಣಂ,
ಜಿನಗುಣಸಂಪತ್ತಿ ಹೊಉ ಮಜ್ಝಂ ॥

ಅಂದರೆ, ಹೇ ಭಗವನ್! ನಾನು ಯಾವಾಗಲೂ ಅರ್ಚಿಸುತ್ತೇನೆ, ಪೂಜಿಸುತ್ತೇನೆ, ವಂದಿಸುತ್ತೇನೆ, ನಮಸ್ಕರಿಸುತ್ತೇನೆ, ಇದರಿಂದ ನನಗೆ ದುಃಖ ನಾಶವೂ, ಕರ್ಮನಾಶವೂ, ಬೋಧಿಲಾಭವೂ, ಸದ್ಗತಿ ಪ್ರಾಪ್ತಿಯೂ. ಸಮಾಧಿ ಮರಣವೂ, ಜಿನಗುಣ ಸಂಪತ್ತಿಯೂ ಉಂಟಾಗಲಿ ಎಂದು ಅನನ್ಯ ಭಕ್ತಿಯಿಂದ ಭಕ್ತಿಯ ಭಾವಾವೇಶದಲ್ಲಿ ತನ್ಮಯರಾಗಿ ಪ್ರಾರ್ಥಿಸಿದ್ದಾರೆ. ಚಿತ್ತವೃತ್ತಿಯನ್ನು

ಏಕಾಗ್ರತೆಯಿಂದ ಶಾಂತಗೊಳಿಸುವುದೇ ಪರಮಪದ ಪ್ರಾಪ್ತಿಯ ಉಪಾಯವೆಂದು ಆಚಾರ್ಯರು ಅರಿತಿದ್ದರು. ಇಂತಹ ಭಕ್ತಿ ನಿಷ್ಠೆ ನಮ್ಮಲ್ಲಿ ಹುಟ್ಟುವುದು ಹೇಗೆ? ಅದಕ್ಕೆ ರತ್ನಾಕರ ಕವಿಯೇ ಹೀಗೆ ಉತ್ತರ ಕೊಟ್ಟಿದ್ದಾನೆ.

ಶಕ್ತಿಗೆ ತಕ್ಕ ದಾನ ಗುರುಪೂಜನ ಸುವ್ರತ ಪರ್ವಕಾಲದೊಳ್ ನಿ- ।
ರ್ಭಕ್ತಿಗಳಂ ನೆಗಳ್ವುತೆ ಜಿನಾಗಮ ಗೋಷ್ಠಿಗಳಲ್ಲಿ ಧರ್ಮ ಸಂ- ।
ಯುಕ್ತರ ಮೇಳದೊಳ್ ಕಳೆಯುತುಂ ದಿನಮಂ ನಡೆವಂಗೆ ಮೋಹದಾ ।
ಶಕ್ತಿ ಸಡಿಲ್ದು ಪೋಪುದಿದು ಭಕ್ತಿಯಲಾ ಅಪರಾಜಿತೇಶ್ವರಾ ॥

ಭಕ್ತಿ ಎಂದರೆ ಕೇವಲ ಮಂತ್ರ ಪಿಟಿಗುಟ್ಟುವುದು, ಮಡಿ ಮಡಿ ಎಂದು ಎಗರಾಡುವುದು. ಮಂಗಳಾರತಿ ಬೆಳಗುವುದು ಇಷ್ಟೇ ಅಲ್ಲ, ಶಕ್ತಿ ಇದ್ದಷ್ಟು ದಾನ ಮಾಡಬೇಕು, ಗುರುಸೇವೆ ಮಾಡಬೇಕು, ನೋಂಪಿಗಳನ್ನಾಚರಿಸಿ ಪರ್ವಕಾಲಗಳಲ್ಲಿ ಉಪವಾಸಾದಿಗಳನ್ನು ಮಾಡಬೇಕು. ಜಿನಶಾಸ್ತ್ರ ಸಭೆಗಳಲ್ಲಿ, ಪ್ರವಚನಗಳಲ್ಲಿ, ಉಪದೇಶವಾಗುವಲ್ಲಿ ಭಾಗವಹಿಸಬೇಕು. ಸತ್‌ಸಹವಾಸದಲ್ಲಿ ಇರಬೇಕು. ಹೀಗೆ ತನ್ನ ದಿನಚರಿ ಇದ್ದಲ್ಲಿ ಮೋಹದ ಶಕ್ತಿ ಕುಂದುವುದು. ನಂತರವೇ ಭಕ್ತಿ ಉಂಟಾಗುವುದು. ಇದು ಎಷ್ಟೆಷ್ಟು ತನ್ನಲ್ಲಿ ಉದ್ದೀಪಗೊಳ್ಳುತ್ತದೆಯೋ ಅಷ್ಟಷ್ಟು ಏಕಾಗ್ರತೆ ಎಂಬುದು ಸಾಧನೆಯಾಗುತ್ತದೆ.

ಒಂದೇ ಸಮಯದಲ್ಲಿ ಅನೇಕ ವಿಷಯಗಳು ನೆನಪಿಗೆ ಬಂದುಬಿಡುತ್ತವೆ. ಅವು ತಲೆಯನ್ನು ಹೊಕ್ಕು ಬುದ್ಧಿಯನ್ನು ಗೊಂದಲಕ್ಕೆ ಸಿಕ್ಕಿಸಿಬಿಡುತ್ತವೆ, ಅವೆಲ್ಲವುಗಳನ್ನೂ ಒಮ್ಮೆಲೇ ಬಗೆಹರಿಸಲಾಗುವುದಿಲ್ಲ. ಅವುಗಳಲ್ಲಿ ಮುಖ್ಯವಾವು ದೆಂಬುದನ್ನು ಆರಿಸಿ, ಅದರಲ್ಲಿ ಅದರ ಸಾಧನೆಯ ಕಾರ್ಯದಲ್ಲಿ ಏಕಾಗ್ರಚಿತ್ತನಾಗಿ ತೊಡಗಿದರೆ ಅದು ಸಾಧ್ಯವಾಗಿ ಅದರಿಂದ ಫಲಪ್ರಾಪ್ತಿ ಮಾಡಿಕೊಳ್ಳಲುಬಹುದು.

ಏಕಾಗ್ರತೆ ಇಲ್ಲದಿದ್ದಲ್ಲಿ ನಿರಾಶೆಯುಂಟಾಗಿ ಬೇಸರ, ಆಲಸ್ಯಗಳು ತನ್ನಲ್ಲಿ ಮನೆಮಾಡಿಬಿಡುತ್ತವೆ. ಇದೇ ಮುಂದುವರಿದು ಮನೋದೌರ್ಬಲ್ಯ ವುಂಟಾಗಿ ಬಿಡುತ್ತದೆ. ಏಕಾಗ್ರತೆಯಿಂದ ಸ್ಮರಣಶಕ್ತಿ ಉಂಟಾಗುತ್ತದೆ. ಶತಾವಧಾನಿಗಳೆನಿಸಿದ ಶ್ರೀಮದ್ ರಾಜಚಂದ್ರಭಾಯಿಯವರು ಸ್ಮರಣ ಶಕ್ತಿಯನ್ನು ಪಡೆದಿದ್ದವರಲ್ಲಿ ಅಗ್ರಗಣ್ಯರಾಗಿದ್ದರು. ಅವರು ನೂರು ಜನ ಕೇಳಿದ ಪ್ರಶ್ನೆಗಳನ್ನು ಕೇಳಿಕೊಂಡು ಅವರಿಗೆಲ್ಲ ಅವರವರ ಪ್ರಶ್ನೆಗಳಿಗೆ ಉತ್ತರ ಹೇಳುತ್ತಿದ್ದರಂತೆ. ಅವರು ಏಕಾಗ್ರಚಿತ್ತರಾಗಿದ್ದುದರಿಂದಲೇ ಈ ಸ್ಮರಣ ಶಕ್ತಿಯು ಅವರಿಗೆ ಬಂದಿತ್ತು. ಏಕಾಗ್ರತೆಯಿಂದ ಚಿತ್ತ ಸ್ವಾಸ್ಥ್ಯ ಉಂಟಾಗುತ್ತದೆ. ಚಿತ್ತಚಾಂಚಲ್ಯತೆ ತೊಲಗುತ್ತದೆ.



ಗ್ರಂಥಗಳನ್ನು ಓದುವಾಗ, ಉಪದೇಶ, ಉಪನ್ಯಾಸ ಮತ್ತು ಪಾಠಗಳನ್ನು ಕೇಳುವಾಗ ಏಕಾಗ್ರತೆ ಇದ್ದಲ್ಲಿ ಆ ವಿಷಯಗಳು ಬಹು ಕಾಲ ನೆನಪಿನಲ್ಲಿದ್ದು ಜೀವನವನ್ನು ಆದರ್ಶವನ್ನಾಗಿ ಮಾಡುತ್ತವೆ. ಹಿಂದಿನ ಆಚಾರ್ಯರುಗಳೆಲ್ಲ ತಮ್ಮ ವ್ಯಾಸಂಗ ಸಮಯದಲ್ಲಿ ಗುರುಗಳಿಂದ ಒಮ್ಮೆ ಕೇಳಿದರೆ ಸಾಕಾಗಿತ್ತು. ಆ ವಿಷಯಗಳನ್ನು ತಮ್ಮ ಜೀವನದ ಪರ್ಯಂತ ಮರೆಯದೆ ಅವುಗಳ ಬಲದಿಂದ ಮಹತ್ತರವಾದ ಗ್ರಂಥಗಳನ್ನು ರಚನೆ ಮಾಡಿದ್ದಾರೆ. ಅವರಲ್ಲಿ ಏಕಾಗ್ರತೆ ಇತ್ತು, ಪ್ರವಚನ ವಾತ್ಸಲ್ಯವಿತ್ತು, ಗುರುಭಕ್ತಿ ಇತ್ತು.

ಯೋಗ ಮುಂತಾದುವುಗಳನ್ನು ಸಾಧಿಸುವುದಕ್ಕೂ ತಪಸ್ಸಿನಲ್ಲಿ ನಿಷ್ಠಾವಂತ ನಾಗುವುದಕ್ಕೂ ಏಕಾಗ್ರಚಿತ್ತನಾಗಲೇಬೇಕು. ಯಾರು ಮಂತ್ರ, ತಂತ್ರ, ಯೋಗ, ಮುದ್ರೆ ಮೊದಲಾದುವನ್ನು ಏಕಾಗ್ರಚಿತ್ತದಿಂದ ಸಾಧಿಸುವರೋ ಅವರೇ ಯೋಗಿ ಗಳೆನಿಸಿ, ಅವರಲ್ಲಿ ಒಂದು ರೀತಿಯ ಸಾಮರ್ಥ್ಯ ಉಂಟಾಗುತ್ತದೆ. ಅಂತಹವರಿಗೆ ಸುರಾಸುರ ನರಾಮರರು ತವಾಗಿಯೇ ವಶವಾಗುವರು. ಇದರಿಂದ ಅನೇಕ ರೀತಿಯ ಋದ್ಧಿಗಳುಂಟಾಗುತ್ತವೆ. ಇವುಗಳಿಂದ ಅನೇಕ ಚಮತ್ಕಾರಗಳನ್ನು ತೋರಿಸಲು ಬರುತ್ತದೆ. ಇಂದ್ರಜಾಲ, ಮಹೇಂದ್ರಜಾಲ, ಮಂತ್ರ, ಮಾಯಾ, ಮೋಡಿ ವಿದ್ಯೆ ಗಳನ್ನು ಇದೇ ಬಲದಿಂದ ತೋರಿಸುವುದುಂಟು. ಇದಕ್ಕೆ ಮರುಳಾಗಿ ಮಾರುಹೋಗು ವುದು ಬೇಕಿಲ್ಲ. ಇದಕ್ಕಿಂತಲೂ ಮಿಗಿಲಾದ ಪದವಿಯನ್ನು ಪಡೆಯುವ ಅನಂತಶಕ್ತಿ ಆತ್ಮನಲ್ಲಿರುವುದರಿಂದ ಅದನ್ನು ಮುಕ್ತಿಸಾಧನೆಯಲ್ಲಿ ಮಾತ್ರವೇ ಉಪಯೋಗಿಸು ವುದು ಉಚಿತ. ಇಲ್ಲದಿದ್ದರೆ, ಬಹಿರಾಡಂಬರತೆಯುಂಟಾಗಿ ಆತ್ಮ ದೌರ್ಬಲ್ಯ ಮಾಡಿ ಕೊಂಡು ಖ್ಯಾತಿ, ಪೂಜಾ, ಲಾಭಗಳಿಗೆ ವಶವಾಗಿ, ರಾಗ ದ್ವೇಷಗಳಿಗೆ ಗುರಿಯಾಗಿ ದುರ್ಗತಿಗೆ ಸಾಗಬೇಕಾಗುತ್ತದೆ. ಏಕಾಗ್ರತೆಯ ದುರುಪಯೋಗದಿಂದ ದುರ್ಗತಿ, ದುಷ್ಟ ಫಲ, ಅಪಯಶಸ್ಸು ಉಂಟಾಗುವುದು. ಅದೇ ಸದುಪಯೋಗಪಡಿಸಿ ಕೊಂಡಲ್ಲಿ ಸದ್ಗತಿ, ಸತ್ಫಲ ಸತ್ಕೀರ್ತಿಗಳುಂಟಾಗುತ್ತವೆ. ಆದುದರಿಂದ ಪೂಜೆ, ಸ್ತುತಿ, ವಂದನೆ, ಧ್ಯಾನ, ಯೋಗ, ಸೇವೆ ದಾನ, ಸ್ವಾಧ್ಯಾಯ, ತಪ, ವ್ರತ, ನೋಂಪಿ ಮುಂತಾದ ಸತ್ ಕಾರ್ಯದಲ್ಲಿ ಚಿತ್ತದ ಏಕಾಗ್ರತೆ ಇರಬೇಕು. ಹೀಗಿದ್ದರೆ ಮಾತ್ರ ಇವುಗಳಿಂದ ಸತ್ಪರಿಣಾಮವಾಗಿ ಆತ್ಮವಿಶ್ವಾಸ ಉಂಟಾಗುತ್ತದೆ. ಇದು ನಮ್ಮಲ್ಲಿಯೇ ಇರುವ ಒಂದು ಸಂಪತ್ತಾಗಿರುವುದರಿಂದ ಇದರ ಸದುಪಯೋಗಪಡಿಸಿಕೊಂಡು ತತ್ಫಲ ಪ್ರಾಪ್ತಿ ಮಾಡಿಕೊಳ್ಳಬೇಕು. ಅಂತೆಯೆ ವಿದ್ಯಾರ್ಜನೆ ದುಡಿಮೆಗೂ ಏಕಾಗ್ರತೆ ಬೇಕು.